
ಸಂಪುಟ 22 ಸಂಚಿಕೆ 52
ಡಿಸೆಂಬರ್ 17, 2000 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ



ಅಡಿಕೆ, ತೆಂಗು, ರಬ್ಬರ್ ಯಾಕೀ ಬೆಲೆ ಕುಸಿತ?

ವಿಷ ಕಕ್ಕುವ ಅಭಿಯಾನ




ಬಾಬಾಬುಡನ್ ಗಿರಿ: ಸಂಘ ಪರಿವಾರದ ಅಟ್ಟಹಾಸ

'ಯಜಮಾನ' ಸಾಧಾರಣ ಚಿತ್ರ

ಅಕ್ರಮ ಕಾಂಗ್ರೆಸ್ ಆಡಳಿತ

ಕಳೆದ ಸಂಚಿಕೆಯಲ್ಲಿ ಸಂಯುಕ್ತ ರಂಗ ಸರ್ಕಾರವನ್ನು ವಜಾಗೊಳಿಸಲು, ಕೇಂದ್ರ ಕಾಂಗ್ರೆಸ್, ರಾಜ್ಯ ಕಾಂಗ್ರೆಸ್, ಪೋಲೀಸ್ ಅಧಿಕಾರಶಾಹಿ ಮತ್ತು ಪಟ್ಟಭದ್ರರು ಶಾಮೀಲಾದ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ತಿರಸ್ಕರಿಸಲ್ಪಟ್ಟ ಕಾಂಗ್ರೆಸ್ ತನ್ನ ಅಧಿಕಾರವನ್ನು ರಾಜ್ಯದ ಮೇಲೆ ಹೇರಿದ್ದರ ವಿರುದ್ಧ ರಾಜ್ಯವ್ಯಾಪಿ ಮುಷ್ಕರದಿಂದಾಗಿ, ಅಧಿಕಾರ ನಡೆಸಲು ಸಾಧ್ಯವಾಗದೆ ಮಧ್ಯಂತರ ಚುನಾವಣೆ ಘೋಷಣೆಯಾದ ಬಗ್ಗೆ ಓದಿ



ಡಿಸೆಂಬರ್ 18 ರಂದು ವಿಧಾನಸಭೆಯ ವಿಶೇಷ ಅಧಿವೇಶನದ ಕರೆಯಂತೆ ತುರ್ತು ಸಭೆ ನಡೆಸಿದ ಸಂಯುಕ್ತ ರಂಗ ರಾಜ್ಯಪಾಲರಿಗೆ ಸಲಹೆ ಮಾಡಿತು. ಆದರೆ ಆ ದಿನದವರೆಗೆ ಕಾಯಲು ಸಾಧ್ಯವಿಲ್ಲ ಎಂದು ರಾಜ್ಯಪಾಲರು ಹೇಳಿದರು.

ಪ.ಬಂಗಾಳದಲ್ಲಿ ಮಧ್ಯಂತರ ಚುನಾವಣೆಯೊಂದೇ ಉತ್ತಮ ಮಾರ್ಗ ಎಂದು ಪಕ್ಷದ ಕಾರ್ಯದರ್ಶಿ ಪ್ರಮೋದ್ ದಾಸ್‌ಗುಪ್ತಾ ಹೇಳಿಕೆಯೊಂದರಲ್ಲಿ ತಿಳಿಸಿದರು. ಚುನಾಯಿತ ಸಂಯುಕ್ತ ರಂಗ ಸರಕಾರದ ಸ್ಥಾನದಲ್ಲಿ ಅಕ್ರಮ ಕಾಂಗ್ರೆಸ್ ಸರಕಾರವನ್ನು ಕೂರಿಸುವ ಯತ್ನಗಳ ವಿರುದ್ಧ ನಾನಾ ಪ್ರಜಾಸತ್ತಾತ್ಮಕ ಹಾಗೂ ಜನತಾ ಸಂಘಟನೆಗಳು ಸಿಡಿದೆದ್ದವು.

ಉಸ್ತುವಾರಿ ಸಂಯುಕ್ತ ರಂಗ ಸರಕಾರದಡಿ ಮಧ್ಯಂತರ ಚುನಾವಣೆ ನಡೆಯಬೇಕು ಎಂದು ಕೂಡ ನಾವು ಒತ್ತಾಯಿಸಿದೆವು. ಕಾಂಗ್ರೆಸ್ ಪಕ್ಷವನ್ನು ಜನರು ಈಗಾಗಲೇ ತಿರಸ್ಕರಿಸಿರುವುದರಿಂದ ಸರಕಾರ ರಚಿಸಲು ಆ ಪಕ್ಷಕ್ಕೆ ಅವಕಾಶ ಕೊಡಲೇಬಾರದು ಎಂದು ನಾವು ಪಟ್ಟು ಹಿಡಿದೆವು.

ಕಾಂಗ್ರೆಸ್ ವಿರೋಧಿ ಘೋಷಣೆಗಳನ್ನು ಕೂಗಿ ಚುನಾವಣೆಯಲ್ಲಿ ಗೆದ್ದವರು ಜನರ ತೀರ್ಪನ್ನು ಹೊಸಕಿಹಾಕಿ ಅವಮಾನಕರ ಪೂರ್ವೋದಾಹರಣೆಯನ್ನು ಹುಟ್ಟುಹಾಕಿದ್ದಾರೆ. ಇದು ದೇಶದ ಪ್ರಜಾಪ್ರಭುತ್ವದ ಚೌಕಟ್ಟಿಗೇ ಒಂದು ಕಳಂಕವಾಗಿದೆ. ಇದು ಅತ್ಯಂತ ತೀರಾ ಕೀಳು ಮಟ್ಟದ ರಾಜಕೀಯ ಸಮಯಸಾಧಕತನವಾಗಿದೆ. ಸರಕಾರ ರಚಿಸಲು ಅವರನ್ನು ಆಹ್ವಾನಿಸುವ ರಾಜ್ಯಪಾಲರ ಕ್ರಮ ಸಂವಿಧಾನದ ಮೂಲ ತತ್ವಗಳಿಗೇ ವಿರುದ್ಧವಾದುದು.

ಆದರೆ ಈ ಮಾತುಗಳನ್ನು ಕೇಳಲು ರಾಜ್ಯಪಾಲರು ಸಿದ್ಧರಿರಲಿಲ್ಲ. ವಿಧಾನಸಭೆ ಅಧಿವೇಶನ ಆರಂಭಕ್ಕೂ ಮುಂಚೆ, 1967 ನವೆಂಬರ್ 21 ರಂದು ಅವರು ಪ್ರಥಮ ಸಂಯುಕ್ತ ರಂಗ ಸರಕಾರವನ್ನು ವಜಾ ಮಾಡಿದರು. ಕಾಂಗ್ರೆಸ್ ಬೆಂಬಲದಿಂದ ಸರಕಾರ ರಚಿಸುವಂತೆ ಪ್ರಫುಲ್ಲ ಘೋಷ್‌ರನ್ನು ಆಹ್ವಾನಿಸಿದರು. ಕಾಂಗ್ರೆಸ್ ವಿರೋಧಿ ಭಾವನೆಗಳ ನೆರವಿನಿಂದ ಶಾಸಕರಾದ ಪ್ರಫುಲ್ಲ ಘೋಷ್ ಅಂಥ ಭಾವನೆಯನ್ನು ಸ್ವಲ್ಪವೂ ಗೌರವಿಸದೆ ಮುಖ್ಯಮಂತ್ರಿ ಪಟ್ಟ ಏರಿದರು. ಅಕ್ರಮ ಕಾಂಗ್ರೆಸ್ ಆಡಳಿತವನ್ನು ರಾಜ್ಯದ ಮೇಲೆ ಹೇರಲಾಯಿತು.

ರಾಜ್ಯವ್ಯಾಪಿ ಮುಷ್ಕರ

ಆದರೆ ಜನರು ಇದನ್ನು ಪ್ರತಿರೋಧವಿಲ್ಲದೆ ಒಪ್ಪಿಕೊಳ್ಳಲಿಲ್ಲ. ನವೆಂಬರ್ 22 ರಂದೇ ಪಶ್ಚಿಮ ಬಂಗಾಳದಾದ್ಯಂತ ಸ್ವಯಂ ಸ್ಫೂರ್ತಿಯ ಹರತಾಳ ನಡೆಯಿತು. ಪ್ರತಿಭಟನೆಯನ್ನು ದಮನಿಸಲು ಮುಖ್ಯಮಂತ್ರಿ ಘೋಷ್ ಪೋಲೀಸ್ ಮತ್ತು ಸೇನೆಗೆ ಸ್ವಾತಂತ್ರ್ಯ ಕೊಟ್ಟರು. ಇಡೀ ಕಲ್ಕತ್ತ ನಗರ ಗುಂಡುಗಳು, ಅಶ್ರುವಾಯು ಸಿಡಿತ ಮತ್ತು ಲಾಠಿ ಏಟಿನ್ನ ಸದ್ದಿನಿಂದ ಕಂಗಾಲಾಯಿತು. ಒಂದು ಸಾವಿರಕ್ಕೂ ಹೆಚ್ಚು ಜನರನ್ನು ಬಂಧಿಸಲಾಯಿತು. ಅನೇಕ ಜನರು ಆಸ್ಪತ್ರೆಗಳಲ್ಲಿ ಪ್ರಜ್ಞಾಹೀನ ಸ್ಥಿತಿಯಲ್ಲಿ ಬಿದ್ದರು.

ವೇದಿಕೆ ಮುರಿದ ಪೋಲೀಸರು!

ಬ್ರಿಗೇಡ್ ಪರೇಡ್ ಮೈದಾನದಲ್ಲಿ ನವೆಂಬರ್ 22 ರಂದು ನಡೆಸಲು ಉದ್ದೇಶಿಸಿದ್ದ ಸಂಯುಕ್ತ ರಂಗದ ಸಭೆಯನ್ನು ವಿಫಲಗೊಳಿಸಲೆಂದು ಪೋಲೀಸರು ನಿಷೇದಾಜ್ಞೆ ಹೇರಿದರು. ಕಮರ್ ಹವೆ, ಪಾಣಿ ಹವೆ, ಖಿರ್ದಾ ಮತ್ತು ಉತ್ತರ ಡಂಡಂ ಮೊದಲಾದ ಪ್ರದೇಶಗಳಲ್ಲಿ ಕರ್ಫ್ಯೂವನ್ನು ಹೇರಲಾಯಿತು.

ಇಡೀ ಬ್ರಿಗೇಡ್ ಪರೇಡ್ ಮೈದಾನ ಪೋಲೀಸರ ಕೋಟೆಯಂತಾಗಿತ್ತು. ರ‍್ಯಾಲಿ ಉದ್ದೇಶಿಸಿ ಮಾತನಾಡಲು ನಾಯಕರಿಗಾಗಿ ನಿರ್ಮಿಸಿದ್ದ ವೇದಿಕೆಯನ್ನೇ ಪೋಲೀಸರು ಮುರಿದು ಹಾಕಿದರೆಂದರೆ ಅವರ ದೌರ್ಜನ್ಯ ಯಾವ ಮಟ್ಟ ತಲುಪಿತ್ತು ಎನ್ನುವುದು ಅರ್ಥವಾಗುತ್ತದೆ. ಇಂಥದ್ದನ್ನೆಲ್ಲ ಹೇಗೆ ಎದುರಿಸಬೇಕೆನ್ನುವುದು ಜನರಿಗೆ ಚೆನ್ನಾಗಿ ಗೊತ್ತಿತ್ತು. ಮೊದಲಮೊದಲು ಸ್ವಲ್ಪ ಸ್ವಲ್ಪವೇ ಜನರು ಬಂದರು. ಆದರೆ ಕೆಲವೇ ನಿಮಿಷಗಳಲ್ಲಿ ಮೆರವಣಿಗೆಯ ನದಿಗಳು ಒಂದಾಗಿ ಜನಸಾಗರವೇ ಅಲ್ಲಿ ಸೃಷ್ಟಿಯಾಯಿತು.

ಗಾಬರಿಗೊಂಡ ಪೋಲೀಸ್ ಪಡೆ ರ‍್ಯಾಲಿಯ ಮೇಲೆ ಹುಚ್ಚಾಪಟ್ಟೆ ದಾಳಿ ನಡೆಸಿತು. ಜನರು ದಿಕ್ಕಾಪಾಲಾಗಿ ಓಡತೊಡಗಿದರು. ರ‍್ಯಾಲಿಯನ್ನು ಪ್ರವೇಶಿಸಿದವರು ಮೈದಾನ ಪ್ರವೇಶಿಸಿದವರು ಲಾಠಿ ಏಟು ತಿನ್ನಬೇಕಾಯಿತು.

ವಿಶ್ವನಾಥ ಮುಖರ್ಜಿ, ಅಮರ್ ಚಕ್ರವರ್ತಿ ಮೊದಲಾದ ನಾಯಕರು ಪೋಲೀಸ್ ಆಕ್ರಮಣದಲ್ಲಿ ಗಾಯಗೊಂಡರು.

ಮರುದಿನ ಕೂಡ ಒಂದು ಮುಷ್ಕರ ನಡೆಯಿತು. ಪೋಲೀಸರು ಮತ್ತೆ ಸಿಕ್ಕಾಪಟ್ಟೆ ಗೋಲೀಬಾರ್ ನಡೆಸಿದರು. ಐದು ಜನರು ಸತ್ತರು. 50 ಕ್ಕೂ ಹೆಚ್ಚು ಮಂದಿ ಗಂಭೀರವಾಗಿ ಗಾಯಗೊಂಡರು.

48 ಗಂಟೆಗಳಲ್ಲಿ 2500 ಜನರ ಬಂಧನವಾಯಿತು. ಕಲ್ಕತ್ತ ಮತ್ತು ಅದರ ಉಪನಗರಗಳಲ್ಲಿ ಪೋಲೀಸ್ ರಾಜ್ಯ ನೆಲೆಸಿತ್ತು.

ಜನತೆ ಇದರಿಂದ ವಿಚಲಿತರಾಗಲಿಲ್ಲ. ಮರುದಿನ ಇನ್ನೂ ಒಂದು ದೊಡ್ಡ ಹೋರಾಟ ನಡೆಯಿತು. ಸೀಲ್ದಾ ಮತ್ತು ಜಾಧವ ಪುರದಲ್ಲಿ ವಿದ್ಯಾರ್ಥಿಗಳ ರ‍್ಯಾಲಿ ಮೇಲೆ ಪೋಲೀಸರು ಗುಂಡು ಹಾರಿಸಿದ್ದರಿಂದ ಐವರು ವಿದ್ಯಾರ್ಥಿಗಳು ಸತ್ತರು. ವಿದ್ಯಾರ್ಥಿಗಳ ಆಕ್ರೋಶದ ಅಲೆಯನ್ನು ತಾಳಲಾಗದ ಸರಕಾರ, ಶಾಲೆ-ಕಾಲೇಜುಗಳನ್ನು ಒಂದು ವಾರ ಕಾಲ ಮುಚ್ಚುವಂತೆ ಆದೇಶಿಸಿತು. ಮುಷ್ಕರ ನಿರತ ನೌಕರರ ಟ್ರೇಡ್ ಯೂನಿಯನ್ ನೋಂದಾವಣೆಯನ್ನು ತೆಗೆದುಹಾಕುವುದಾಗಿ ಮುಖ್ಯಮಂತ್ರಿ ಬೆದರಿಕೆ ಹಾಕಿದರು. ಕಳೆದ ಐದು ವರ್ಷಗಳಲ್ಲಿ ನೇಮಕಗೊಂಡ ಎಲ್ಲಾ ನೌಕರರು ಪೋಲೀಸ್ ತನಿಖೆ ಎದುರಿಸಬೇಕಾಗುತ್ತದೆ ಎಂದು ಡಾ. ಘೋಷ್ ಹೇಳಿದರು.

ವಿಧಾನಸಭೆಯನ್ನು ವಿಸರ್ಜಿಸಿ ಮಧ್ಯಂತರ ಚುನಾವಣೆ ನಡೆಸಬೇಕು, ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕು, ಪೋಲಿಸರು ತಮ್ಮ ಸ್ಥಾನಗಳಿಗೆ ಮರಳಬೇಕು ಹಾಗೂ ನಿಷೇದಾಜ್ಞೆಗಳನ್ನು ವಾಪಸು ಪಡೆಯಬೇಕು ಎಂದು ಪಕ್ಷದ ಪಶ್ಚಿಮ ಬಂಗಾಳ ರಾಜ್ಯ ಸಮಿತಿ ಒತ್ತಾಯಿಸಿತು.

ಡಾ. ಘೋಷ್ ಅವರ ಸರಕಾರ ಸಂವಿಧಾನ ವಿರೋಧಿ ಎಂದು ಸ್ಪೀಕರ್ ಬಿಜಯ್ ಬ್ಯಾನರ್ಜಿ ನವೆಂಬರ್ 29 ರಂದು ರೂಲಿಂಗ್ ನೀಡಿದರು ಹಾಗೂ ವಿಧಾನಸಭೆಯನ್ನು ಅನಿರ್ದಿಷ್ಟ ಅವಧಿಗೆ ಮುಂದೂಡಿದರು. ಕಾಂಗ್ರೆಸ್ ಮತ್ತು ಘೋಷ್ ಬೆಂಬಲಿಗರಿಗೆ ಹಿನ್ನಡೆ ಉಂಟಾಯಿತು. ಬ್ಯಾನರ್ಜಿ ಮನೆಯತ್ತ ಬಾಂಬ್‌ಗಳನ್ನು ಎಸೆಯಲಾಯಿತು.

ನವೆಂಬರ್ 30 ರಂದು ಇನ್ನೊಂದು ಮುಷ್ಕರ 'ಗಣಶಕ್ತಿ' ಸಂಪಾದಕ ಸರೋಜ್ ಮುಖರ್ಜಿ ಅವರನ್ನು ಹಠಾತ್ತನೆ ಬಂಧಿಸಲಾಯಿತು. ಅವರು ಕಚೇರಿಯಿಂದ ಮರಳುತ್ತಿರುವಾಗ ಪೋಲೀಸರು ಬಂಧಿಸಿದರು. ಕೆಲವು ದಿನಗಳ ನಂತರ ಅವರನ್ನು ಬಿಡಲಾಯಿತು.

ಸಂಯುಕ್ತ ರಂಗದ ರಾಜ್ಯಮಟ್ಟದ ಪ್ರತಿನಿಧಿ ಸಮ್ಮೇಳನವನ್ನು ಡಿಸೆಂಬರ್‌ನಲ್ಲಿ ನಡೆಸಲು ನಾವು ನಿರ್ಧರಿಸಿದೆವು. ಸರೋಜ್ ಮುಖರ್ಜಿ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಜನತಾ ಚಳುವಳಿಯ ಮೂರನೇ ಘಟ್ಟ ಆರಂಭವಾಯಿತು. ಫೆಬ್ರವರಿ 14 ರಿಂದ ಅಸೆಂಬ್ಲಿ ಅಧಿವೇಶನ ನಡೆಸಲು ರಾಜ್ಯಪಾಲರು ದಿನ ನಿಗದಿಪಡಿಸಿದರು. ಇದಕ್ಕೆ ಮುಂಚೆ ಸಂಯುಕ್ತರಂಗದ 8 ಶಾಸಕರು ಮತ್ತು ವಿಧಾನ ಪರಿಷತ್ತಿನ ಒಬ್ಬ ಸದಸ್ಯರನ್ನು ಬಂಧಿಸಲಾಯಿತು. ಸರೋಜ್ ಮುಖರ್ಜಿ ಮತ್ತು ಸಂಯುಕ್ತ ರಂಗದ ಸಂಚಾಲಕ ಸುಧೀನ್ ಕುಮಾರ್ ಸೆರೆಯಾದರು.

ಫೆಬ್ರವರಿ 14 ರಂದು ರಾಜ್ಯಪಾಲರು ಅಧಿವೇಶನ ಉದ್ದೇಶಿಸಿ ಮಾತನಾಡಲು ಬಂದಾಗ ಅಸೆಂಬ್ಲಿಯಲ್ಲಿ ಕೋಲಾಹಲದ ಸನ್ನಿವೇಶ ಉಂಟಾಯಿತು. ಶಾಸಕರು ತಳ್ಳಾಡಿಕೊಂಡರು. ರಾಜ್ಯಪಾಲರಿಗೆ ಭಾಷಣ ಮಾಡಲು ಆಗಲಿಲ್ಲ. ಸದನದ ಕಲಾಪವನ್ನು ಮುಂದೂಡಲಾಯಿತು.

ನಡೆಸಿದ ಎಲ್ಲಾ ಪ್ರಯತ್ನಗಳು ವಿಫಲವಾದ ನಂತರ ಡಾ. ಘೋಷ್ ಮತ್ತು ಅವರ ಪಿಡಿಎಫ್ ಮಂತ್ರಿಮಂಡಲ ರಾಜೀನಾಮೆ ನೀಡಿತು. ರಾಷ್ಟ್ರಪತಿ ಆಡಳಿತವನ್ನು ಹೇರಲಾಯಿತು. ಮಧ್ಯಾವಧಿ ಚುನಾವಣೆಗಳನ್ನು ಘೋಷಿಸಲಾಯಿತು.

ಘೋಷ ಮಂತ್ರಿಮಂಡಲದ ಪತನ ಜನತೆಯ ಯಶಸ್ಸು ಹಾಗೂ ವಿಜಯವನ್ನು ಸಂಕೇತಿಸುತ್ತದೆ ಎಂದು ಸಂಯುಕ್ತ ರಂಗ ತನ್ನ ಅಭಿನಂದನೆ ಸಂದೇಶದಲ್ಲಿ ತಿಳಿಸಿತು.

ಕಾನೂನುಭಂಗ ಚಳುವಳಿಯನ್ನು ನಿಲ್ಲಿಸಿದ ಸಂಯುಕ್ತ ರಂಗ ಜನರು ತಮ್ಮ ಬೇಡಿಕೆಗಳು ಈಡೇರುವವರೆಗೆ ಒಗ್ಗಟ್ಟಾಗಿ ಚಳುವಳಿಗಳನ್ನು ನಡೆಸಬೇಕೆಂದು ಕರೆ ನೀಡಿತು.

(ಮುಂದುವರಿಯುವುದು)

ಜನರ ನಡುವಿನಿಂದ ಹೊರಟ ಜಾಥಾಗಳು

ವಿಶ್ವಬ್ಯಾಂಕಿನ ಆದಿಪತ್ಯವನ್ನು ಸೋಲಿಸಿ, ದೇಶದ ಸಮಗ್ರತೆ ಮತ್ತು ಜಾತ್ಯಾತೀತತೆಯನ್ನು ರಕ್ಷಿಸಲು ದುಡಿಯುವ ಜನರ ಐಕ್ಯತೆಗಾಗಿ ಸಿಐಟಿಯು ಅಖಿಲ ಭಾರತ 10ನೇ ಸಮ್ಮೇಳನ ನಡೆಯುತ್ತಿದೆ.

ಐತಿಹಾಸಿಕ ಹಿನ್ನೆಲೆ ಹೊಂದಿರುವ ಹಾಗೂ ಇತ್ತೀಚೆಗೆ ವಿಶ್ವಬ್ಯಾಂಕಿನ ಶರತ್ತುಗಳಿಗೆ ನಮಸ್ಕರಿಸಿ ಇಡೀ ದೇಶದಲ್ಲಿಯೇ ಆಂಧ್ರ ರಾಜ್ಯವನ್ನು ಹೈಟೆಕ್ ರಾಜ್ಯವನ್ನಾಗಿ ಮಾಡಲು ಹೊರಟಿರುವ ಕಂಪ್ಯೂಟರ್ ರಾಜ ಚಂದ್ರಬಾಬು ನಾಯ್ಡುರವರಿಗೆ ಬುದ್ಧಿ ಹೇಳಲು ಬಂದ ರಾಜ್ಯದ ದುಡಿಯುವ ಜನತೆಯನ್ನು ಅಕ್ಟೋಬರ್‌ನಲ್ಲಿ ಧಾರುಣವಾಗಿ ಅಧಿಕಾರ ಬಲ ಪ್ರಯೋಗಿಸಿ ಪೋಲೀಸ್ ಮುಖಾಂತರ ಬಡಿದು 3 ಜನರ ಪ್ರಾಣವನ್ನು ಬಲಿತೆಗೆದುಕೊಂಡ ಹಾಗೂ ಹಲವಾರು ದುಡಿಯುವ ಜನರ ಹೋರಾಟದ ಕಣವಾಗಿರುವ ಹೈದ್ರಾಬಾದ್ ನಗರದಲ್ಲಿ ಡಿಸೆಂಬರ್ 27 ರಿಂದ 31 ರ ವರೆಗೆ ಸಮ್ಮೇಳನ ನಡೆಯುತ್ತದೆ.

ಈ ಸಮ್ಮೇಳನದಲ್ಲಿ LPG ಯ ಪರಿಣಾಮದಿಂದ ನಿರುದ್ಯೋಗದ ವಿರುದ್ಧ, ಗ್ಯಾಟ್ ಒಪ್ಪಂದದಿಂದಾಗಿ ರೈತರು ಬೆಳೆಯುವ ಬೆಳೆಗಳಿಗೆ ಸರಿಯಾದ ಬೆಲೆಯಿಲ್ಲದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದನ್ನು ವಿರೋಧಿಸಿ, ಕಾರ್ಖಾನೆಗಳನ್ನು ಮುಚ್ಚುವುದರ ವಿರುದ್ಧ, ದೇಶದಲ್ಲಿ ಎಲ್ಲಾ ವಿಭಾಗದ ಜನರಿಗೆ ವಿವರಿಸಲು ಹಾಗೂ ಆ ನೀತಿಗಳನ್ನು ಪ್ರತಿಭಟಿಸಲು ಈ ಹಿಂದೆ ಸಿಐಟಿಯು ಅಖಿಲ ಭಾರತ ಸಮ್ಮೇಳನಗಳು ನಡೆದ

ಸಿಐಟಿಯು ಅಖಿಲ ಭಾರತ ಸಮ್ಮೇಳನ

ಸ್ಥಳಗಳಾದ ಕಲ್ಕತ್ತ, ಮದ್ರಾಸ್, ಮುಂಬೈ, ಪಾಟ್ನಾ, ಕಾನ್ಪುರಗಳಿಂದ ಒಂದೊಂದು ಜಾಥಾ, ತಿರುವನಂತಪುರದಿಂದ ಎರಡು ಜಾಥಾ ಹಾಗೂ ಇಡೀ ದೇಶದಲ್ಲಿಯೇ ಮೊದಲ ಬಾರಿಗೆ ಎಲ್ಲಾ ಕ್ಷೇತ್ರಗಳ ಕಾರ್ಮಿಕರು ಹೋರಾಟದ ಮುಖಾಂತರ ಕನಿಷ್ಟಕೂಲಿಯನ್ನು ಪಡೆದು ಮತ್ತು ಅದೇ ಕಾರ್ಮಿಕ ವರ್ಗ ಪರಿಸರ ನೈರ್ಮಲ್ಯತೆ ನೆಪಒಡ್ಡಿ ಸಣ್ಣ-ಪುಟ್ಟ ಕಾರ್ಖಾನೆಗಳನ್ನು ಮುಚ್ಚಲು ಸನ್ನಾಹ ನಡೆಸಿದ ನೀತಿಗಳ ವಿರುದ್ಧ ಸ್ವಯಂ ಪ್ರೇರಿತವಾಗಿ ಹೋರಾಟದಕಣದಲ್ಲಿರುವ ದೆಹಲಿಯಿಂದಲೂ ಒಂದು ಜಾಥಾ ಹೊರಟಿದೆ. ಈ ಎಲ್ಲಾ ಜಾಥಾಗಳು 26 ರಂದು ಹೈದ್ರಾಬಾದ್‌ನ್ನು ಸೇರಲಿವೆ. ತಿರುವನಂತಪುರದಿಂದ ಹೊರಟಿರುವ ಎರಡು ಜಾಥಾಗಳು ಕರ್ನಾಟಕದಲ್ಲಿ ಜಾಥಾ ನಂ. 3, ಕೇರಳದ ಇರಟ್ಟೆಯಿಂದ ಮಾಕುಟ ಮುಖಾಂತರ ವಿರಾಜಪೇಟೆಗೆ ಡಿಸೆಂಬರ್ 17 ರಂದು ಮಧ್ಯಾಹ್ನ ಪ್ರವೇಶಿಸಿ ಸಿದ್ದಾಪುರ, ಸಕಲೇಶಪುರ, ಹಾಸನ, ಚಿಕ್ಕಮಗಳೂರು, ಕಾಫಿ ಬೆಳೆಯುವ ಮಲೆನಾಡು ಪ್ರದೇಶವನ್ನು ಸಂಚರಿಸಿ ಭದ್ರಾವತಿ, ಶಿವಮೊಗ್ಗ, ಹರಿಹರ, ಹೊಸಪೇಟೆ, ಗಂಗಾವತಿ, ಬಳ್ಳಾರಿಯ ಮುಖಾಂತರ ಆಂಧ್ರದ ಉರವಕೊಂಡ, ಅನಂತಪುರ, ಹಿಂದೂಪುರ ಪ್ರವೇಶಿಸಿ ಪುನಃ ರಾಜ್ಯದ ಬಾಗೇಪಲ್ಲಿ, ಗೌರಿಬಿದನೂರು, ದೊಡ್ಡಬಳ್ಳಾಪುರ, ಬೆಂಗಳೂರು, ಹೊಸಕೋಟೆ, ಕೋಲಾರ, ಕೆ.ಜಿ.ಎಫ್., ಮುಳಬಾಗಿಲುಪ್ರದೇಶಗಳಲ್ಲಿ ಸಂಚರಿಸಿ ಡಿಸೆಂಬರ್ 25 ರಂದು ಆಂಧ್ರದ ಪಲಮನೇರ್‌ಗೆ ಹೊರಡುತ್ತದೆ.

ಜಾಥಾ ನಂ. 4 ಕೇರಳದ ಕೋಡಂಗಲ್‌ನಿಂದ ದ.ಕನ್ನಡ ಮಂಜೇಶ್ವರ ಮುಖಾಂತರ ರಾಜ್ಯ ಪ್ರವೇಶಿಸಿ ಡಿ. 17 ರಂದು ಸಂಜೆ 4 ಗಂಟೆಗೆ ಮಂಗಳೂರು, ಮೂಡುಬಿದ್ರಿ, ಉಡುಪಿ, ಕುಂದಾಪುರ, ಉ.ಕನ್ನಡ, ಭಟ್ಕಳ, ಶಿರಾಲಿ, ಹೊನ್ನಾವರ, ಕುಮಟಾ, ಅಂಕೋಲ, ಕಾರವಾರ, ಶಿರಸಿ, ಮುಂಡುಗೋಡು, ಯಲ್ಲಾಪುರ, ದಾಂಡೇಲಿ, ಹಳಿಯಾಳ, ಧಾರವಾಡ, ಸವದತ್ತಿ, ರಾಮದುರ್ಗ., ಗುಳೇದಗುಡ್ಡಾ, ಕುಷ್ಟಗಿ, ಮುದುಗಲ್, ಹಟ್ಟಿ, ಯಾದಗಿರಿ, ಶಹಾಪುರ, ಜೇವರ್ಗಿ, ಗುಲ್ಬರ್ಗ, ಶಹಾಬಾದ, ಸೇಡಂನಿಂದ ಕೋಡಂಗಲ್ ಮುಖಾಂತರ ಆಂಧ್ರವನ್ನು ತಲುಪುವುದು.

ಈ ಜಾಥಾಗಳ ತಯಾರಿಗಾಗಿ ಎಲ್ಲೆಡೆ ಸಿದ್ಧತಾ ಸಮಿತಿಗಳ ಮುಖಾಂತರ ಸ್ವಾಗತವನ್ನು ಕೋರಲು ರಾಜ್ಯದ ದುಡಿಯುವ ಜನತೆ ತಯಾರಿ ನಡೆಸುತ್ತಿದೆ.

ಹೈದ್ರಾಬಾದ್ ನಗರ ಜಾಥಾಗಳನ್ನು ಹಾಗೂ ದೇಶದ ಎಲ್ಲಾ ರಾಜ್ಯಗಳಿಂದ ಬರುವ 2500 ದುಡಿಯುವ ಜನರ ಪ್ರತಿನಿಧಿಗಳನ್ನು ಸ್ವಾಗತಿಸಲು ಭರದ ಸಿದ್ಧತೆ ಹಲವಾರು ತಿಂಗಳುಗಳಿಂದ ನಡೆಯುತ್ತಿದೆ.

ಬಾಬಾಬುಡನ್‌ಗಿರಿ: ಮತ್ತೆ ಸಂಘ ಪರಿವಾರದ ಅಟ್ಟಹಾಸ

ದತ್ತಪೀಠ ವಿಮೋಚನೆಗಾಗಿ ಜಿಲ್ಲೆಯಾದ್ಯಂತ ಪಾಂಚಜನ್ಯ ರಥಯಾತ್ರೆ, ನವೆಂಬರ್ ೩೦ ರಂದು ಶೃಂಗೇರಿಯಿಂದ ಹೊರಟು ಜಿಲ್ಲೆಯನ್ನು ಸುತ್ತಿ ನಗರದೊಳಗೆ ಬಂದಿದೆ. ಪಾಂಚಜನ್ಯ ರಥಯಾತ್ರೆಯನ್ನು ಸ್ವಾಗತಿಸುವ ನೆಪದಲ್ಲಿ ಪ್ರತಿ ಊರುಗಳಲ್ಲಿ ಸಂಘ ಪರಿವಾರದವರು ಕೋಮು ವಿಷಬೀಜವನ್ನು ಬಿತ್ತುತ್ತಿದ್ದಾರೆ. ಈ ಸಲದ ದತ್ತಜಯಂತಿ ಹಿಂದಿನ ರೀತಿಯಂತಲ್ಲ. ಇತಿಹಾಸವನ್ನು ನಿರ್ಮಿಸುವಂತಹದು ಎಂದು ಬಹಿರಂಗಸಭೆಗಳಲ್ಲಿ ಸಂಘ ಪರಿವಾರದ ನಾಯಕರುಗಳು ಘೋಷಿಸುತ್ತಿದ್ದಾರೆ.

'ಶೌರ್ಯ ಮೆರೆದ ನಾಡಿನಲ್ಲಿ ಹೇಡಿತನವು ಸಲ್ಲದು', 'ದತ್ತಪೀಠದ ದ್ವಾರದಲ್ಲಿ ಹಿಂದುಗಳೆಲ್ಲಾ ಎಳೆಎಳೆಯಾಗಿ ಸಂಘಟಿತರಾಗೋಣ', 'ರಕ್ತವನ್ನು ಚೆಲ್ಲುವೆವು ದತ್ತಪೀಠ ಗೆಲ್ಲುವೆವು' ಎಂಬಿತ್ಯಾದಿ ಕೋಮು ಪ್ರಚೋದಿತ ಘೋಷಣೆಗಳುಳ್ಳ ಕೇಸರಿ ಬಣ್ಣದ ಬ್ಯಾನರುಗಳು ಚಿಕ್ಕಮಗಳೂರು ಜಿಲ್ಲೆಯ ಊರು, ಗ್ರಾಮಗಳಲ್ಲಿ ರಾರಾಜಿಸುತ್ತಿವೆ. ಡಿಸೆಂಬರ್ 8,9 ಮತ್ತು 10 ರಂದು ಬಾಬಾಬುಡನ್ ಗಿರಿಯ ದತ್ತಾತ್ರೇಯ ಪೀಠದಲ್ಲಿ ನಡೆಯಲಿರುವ ದತ್ತಜಯಂತಿಯ ಪೂರ್ವಸಿದ್ಧತೆಗಾಗಿ ಸಂಘ ಪರಿವಾರದವರು ಹಮ್ಮಿಕ್ಕೊಂಡಿರುವ ಹಲವು ಕಾರ್ಯಕ್ರಮಗಳಲ್ಲಿ ಇವು ಒಂದು. ದತ್ತಪೀಠ ವಿಮೋಚನೆಗಾಗಿ ಜಿಲ್ಲೆಯಾದ್ಯಂತ ಪಾಂಚಜನ್ಯ ರಥಯಾತ್ರೆ, ನವೆಂಬರ್ 30 ರಂದು ಶೃಂಗೇರಿಯಿಂದ ಹೊರಟು ಜಿಲ್ಲೆಯನ್ನು ಸುತ್ತಿ ನಗರದೊಳಗೆ ಬಂದಿದೆ. ಪಾಂಚಜನ್ಯ ರಥಯಾತ್ರೆಯನ್ನು ಸ್ವಾಗತಿಸುವ ನೆಪದಲ್ಲಿ ಪ್ರತಿ ಊರುಗಳಲ್ಲಿ ಸಂಘ ಪರಿವಾರದವರು ಕೋಮು ವಿಷಬೀಜವನ್ನು ಬಿತ್ತುತ್ತಿದ್ದಾರೆ. ಈ ಸಲದ ದತ್ತಜಯಂತಿ ಹಿಂದಿನ ರೀತಿಯಂತಲ್ಲ. ಇತಿಹಾಸವನ್ನು ನಿರ್ಮಿಸುವಂತಹದು ಎಂದು ಬಹಿರಂಗಸಭೆಗಳಲ್ಲಿ ಸಂಘ ಪರಿವಾರದ ನಾಯಕರುಗಳು ಘೋಷಿಸುತ್ತಿದ್ದಾರೆ. ಬಾಬಾಬುಡನ್‌ಗಿರಿ ದತ್ತಾತ್ರೇಯ ಪೀಠದಲ್ಲಿರುವ ದರ್ಗಾಗಳನ್ನು ನಾಶಮಾಡಿ ದತ್ತಾತ್ರೇಯ ಸ್ವಾಮಿಯ ವಿಗ್ರಹವನ್ನು ಗವಿಯೊಳಗೆ ಇಡುವುದಾಗಿ ಸಂಘ ಪರಿವಾರದವರು ಹೇಳಿಕೊಂಡು ತಿರುಗುತ್ತಿದ್ದಾರೆ. ಈ ಸಲ 50 ಸಾವಿರ ಮಂದಿ ಬಜರಂಗದಳ, ವಿಶ್ವ ಹಿಂದೂ ಪರಿಷತ್ ಜನ ಬಾಬಾ ಬುಡನ್‌ಗಿರಿಯಲ್ಲಿ ದತ್ತ ಜಯಂತಿಯ ಸಂದರ್ಭ ಜಮಾಯಿಸುತ್ತಾರೆಂದು ಸುದ್ದಿ ಇದೆ. ಅದಕ್ಕೆ ಬೇಕಾದ ಸಿದ್ಧತೆಗಳು ನಡೆಯುತ್ತಿವೆ.

ಅನೇಕ ದಶಕಗಳಿಂದ ವಿವಾದಕ್ಕೆ ಗುರಿಯಾಗಿರುವ ಈ ಬಾಬಾಬುಡನ್ ಗಿರಿ-ದತ್ತಪೀಠದ ಸಮಸ್ಯೆಗಳನ್ನು ಪರಿಹರಿಸಲು **ರಾಜ್ಯ ಸರ್ಕಾರ ತುರ್ತಾಗಿ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುವ ಒಂದು ನಿರ್ವಹಣಾ ಸಮಿತಿಯನ್ನು ರಚಿಸಿದೆ. ಈ ನಿರ್ವಹಣಾ ಸಮಿತಿಯಲ್ಲಿ ಮೂವರು ಸಂಘಪರಿವಾರದ ಸದಸ್ಯರು, ಒಬ್ಬರು ದಲಿತ ಸಂಘರ್ಷ ಸಮಿತಿಯ ಮುಖಂಡರುಗಳನ್ನು ಬಿಟ್ಟರೆ ಉಳಿದವರ ಪೈಕಿ ಹೆಚ್ಚಿನವರು ಜನ ಬೆಂಬಲವಿಲ್ಲದ ಕಾಂಗ್ರೆಸ್‌ನ ಕೆಲವು ಮುಸ್ಲಿಂರು.** ಈ ನಿರ್ವಹಣಾ ಸಮಿತಿ ರಚನೆಯ ಬಗ್ಗೆ ಕಾಂಗ್ರೆಸ್ ಹಲವು ಮುಖಂಡರನ್ನೊಳಗೊಂಡು ಇತರೆ ಜಾತ್ಯಾತೀತ ಪಕ್ಷದವರಿಗೂ ಅತೃಪ್ತಿ ಇದೆ. ಆದರೂ ಈ ನಿರ್ವಹಣಾ ಸಮಿತಿಯ ರಚನೆಯ ನಂತರ ಬಾಬಾಬುಡನ್‌ಗಿರಿಯಲ್ಲಿ ನಡೆಯುವ ದತ್ತ ಜಯಂತಿಯಾಗಲಿ, ಉರುಸ್ಸಾಗಲಿ ಹಾಗೂ ಅಭಿವೃದ್ಧಿ ಕಾರ್ಯಗಳಾಗಲಿ ಈ ನಿರ್ವಹಣಾ ಸಮಿತಿಯೇ ನಡೆಸಿಕೊಂಡು ಬರಬೇಕೆಂದು ಜಾತ್ಯಾತೀತ ಪಕ್ಷ, ಸಂಘಟನೆಗಳನ್ನೊಳಗೊಂಡ ಶ್ರೀ ಗುರು ದತ್ತಾತ್ರೇಯ ಬಾಬಾಬುಡುನ್ ಸ್ವಾಮಿಯ ದರ್ಗಾದ ಸೌಹಾರ್ದ ಸಮಿತಿಯವರು ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ ದತ್ತಜಯಂತಿ ಸಂಘ ಪರಿವಾರದವರ ಗುತ್ತಿಗೆ ಆಗಬಾರದು. ಅಲ್ಲಿ ನಡೆಯುವ ಎಲ್ಲಾ ಪೂಜೆ, ಹೋಮ ಇತ್ಯಾದಿಗಳನ್ನು ಈ ನಿರ್ವಹಣಾ ಸಮಿತಿ ನೇಮಿಸುವ ಸ್ವಾಮಿಜಿ, ಪೂಜಾರಿಗಳಿಂದಲೇ ನಡೆಯಬೇಕೆಂಬ ಬಲವಾದ ಅಭಿಪ್ರಾಯ. ಆದರೆ ಈ ಸಲ ಕಾಲವಕಾಶವಿಲ್ಲದಿರುವುದರಿಂದ ಸಂಘ ಪರಿವಾರದವರು ನೇಮಿಸಿರುವ ಸ್ವಾಮಿಗಳಿಂದಲೇ ಪೂಜೆ ನಡೆಯಲಿ ಎಂದು ನಿರ್ವಹಣಾ ಸಮಿತಿಯ ಅಧ್ಯಕ್ಷರು ಮತ್ತಿತರರ ಅಭಿಪ್ರಾಯ.

ನಿರ್ವಹಣಾ ಸಮಿತಿಯು ರಚನೆಯಾಗಿದ್ದರೂ ಸಂಘ ಪರಿವಾರದ ಕೆಲವರು ಈ ಸಮಿತಿಯೊಳಗೆ ಇದ್ದರೂ ನಿರ್ವಹಣಾ ಸಮಿತಿಯ ತೀರ್ಮಾನಗಳನ್ನು ಧಿಕ್ಕರಿಸಿ ತಮ್ಮದೇ ಕೋಮು ಪ್ರಚೋದಿತ ಕಾರ್ಯಕ್ರಮಗಳನ್ನು ಮುಂದುವರಿಸುತ್ತಾ ಇಬ್ಬಗೆಯ ನೀತಿಯನ್ನು ಅನುಸರಿಸುತ್ತಿದ್ದಾರೆ.



ಪೊಲೀಸರ ಬಿಗಿ ಬಂದೋಬಸ್ತ್

ರಾಜ್ಯ ಸರ್ಕಾರ ಯಾವುದೇ ರೀತಿಯ ಕೋಮು ಘರ್ಷಣೆಯನ್ನು ನಿಗ್ರಹಿಸಲು ತಕ್ಕ ಬಂದೋಬಸ್ತ್ ಮಾಡಿದೆ. ದತ್ತಪೀಠದ ಗುಹೆಯಿಂದ ಮೇಲಿನವರೆಗೆ ಇಬ್ಬದಿಯಲ್ಲೂ ಕಬ್ಬಿಣದ ಕಂಬಗಳನ್ನು ಹಾಕಿ, ತಂತಿ ಮುಳ್ಳು ಬೇಲಿಯನ್ನು ನಿರ್ಮಿಸಿದ್ದಾರೆ. ಭಕ್ತಾದಿಗಳು ಒಬ್ಬೊಬ್ಬರೆ ಸಾಲಾಗಿ ಹೋಗಿ ಪೂಜೆ ಪೂರೈಸಿ ಹಿಂದಿರುಗಿ ಬರಲು ಮರದ ಗೋಡೆಗಳನ್ನು ನಿರ್ಮಿಸಿದ್ದಾರೆ.

ಅನೇಕ ಎಸ್.ಪಿ., ಡಿವೈಎಸ್‌ಪಿ ಗಳನ್ನೊಳಗೊಂಡ ಸುಮಾರು 7000 ಪೋಲೀಸ್ ಪಡೆ ಶಸ್ತ್ರಸಜ್ಜಿತವಾಗಿ ಬಾಬಾಬುಡನ್ ಗಿರಿ ಹಾಗೂ ಚಿಕ್ಕಮಗಳೂರಿನ ಎಲ್ಲಾ ಆಯಾ ಕಟ್ಟಿನ ಪ್ರದೇಶಗಳಲ್ಲಿ ಕಟ್ಟೆಚ್ಚರದಿಂದ ಕಾಯುತ್ತಿದ್ದಾರೆ. ಎರಡು ಎಆರ್‌ಎಫ್ ತುಕಡಿ ಸಹ ಬಂದಿದ್ದು ಪರಿಸ್ಥಿತಿಯನ್ನು ನಿಭಾಯಿಸಲು ಸಿದ್ಧತೆಯಾಗಿ ನಿಂತಿದೆ. ಡಿಜಿಪಿ ದಿನಕರ್ ಸ್ಥಳಕ್ಕೆ ಭೇಟಿ ಕೊಟ್ಟು ಭದ್ರತಾ ವ್ಯವಸ್ಥೆಯನ್ನು ಮಾಡಿ ಹೋಗಿದ್ದಾರೆ. ಆದರೆ ಬಜರಂಗ ದಳ, ಬಿಜೆಪಿ- ಸಂಘಪರಿವಾರವು ಜನರನ್ನು ಪ್ರಚೋದಿಸುವ ತನ್ನ ಕೆಲಸ ಮುಂದುವರಿಸಿದೆ.

- ವಿ.ಸುಕುಮಾರ್
ಚಿಕ್ಕಮಗಳೂರು

ಮುಸ್ಲಿಂರೆಲ್ಲಾ ಕೋಮುವಾದಿಗಳಲ್ಲ, ಹಿಂದೂಗಳೆಲ್ಲ ಕೋಮುವಾದಿಗಳಲ್ಲ, ಸ್ವಾಮಿಗಳು, ಮುಲ್ಲಾಗಳೆಲ್ಲರು ಕೋಮುವಾದಿಗಳಲ್ಲ. ಚಿಕ್ಕಮಗಳೂರು ಜಿಲ್ಲೆಯ ಜನತೆಗೆ ಕೋಮುಸಾಮರಸ್ಯ ಬೇಕಾಗಿದೆ. ಸಂಘ ಪರಿವಾರದವರು ಮಾಡುವ ಅಟ್ಟಹಾಸಕ್ಕೆ ತಮ್ಮ ವಿರೋಧವಿದೆ, ಜಿಲ್ಲೆಯ ಎಲ್ಲಾ ಕೋಮಿನ ಜನಾಂಗ ಶಾಂತಿಯನ್ನು ಬಯಸುತ್ತಾರೆ ಎಂಬುದನ್ನು ಸೂಚಿಸಲು ಜಾತ್ಯಾತೀತ ಪಕ್ಷಗಳಾದ ಕಾಂಗ್ರೆಸ್, ಜನತಾದಳ, ಸಿಪಿಐ, ಸಿಪಿಎಂ, ಬಿ.ಎಸ್.ಪಿ., ದಲಿತ ಸಂಘರ್ಷ ಸಮಿತಿ, ವಿದ್ಯಾರ್ಥಿ ಯುವಜನ ಸಂಘಟನೆಗಳಾದ ಎಸ್.ಎಫ್.ಐ., ಎಐಎಸ್‌ಎಫ್, ಎನ್.ಎಸ್.ಯು.ಐ., ಡಿ.ವೈ.ಎಫ್.ಐ., ಎಐಡಿಎಸ್‌ಎಫ್, ರಾಜ್ಯ ರೈತ ಸಂಘ, ವಕೀಲರು ಇನ್ನಿತರ ಪ್ರಗತಿಪರ ದೇಶಪ್ರೇಮಿ ಜಾತ್ಯಾತೀತ ವ್ಯಕ್ತಿಗಳನ್ನೊಳಗೊಂಡ ಕೋಮುಸೌಹಾರ್ದ ಸಮಿತಿ ಡಿಸೆಂಬರ್ 5 ರಂದು ಕರೆ ನೀಡಿದ ಕೋಮು ಸೌಹಾರ್ದ ಮಾನವ ಸರಪಳಿ ಕಾರ್ಯಕ್ರಮ ಯಶಸ್ವಿಯಾಗಿದ್ದು, ಸಾವಿರಾರು ವಿದ್ಯಾರ್ಥಿಗಳನ್ನೊಳಗೊಂಡ ನೂರಾರು ನಾಗರೀಕರು ಭಾಗವಹಿಸಿದ್ದುದು ಕೋಮುವಾದಿಗಳಿಗೆ ಒಂದು ಸವಾಲಾಗಿತ್ತು. ಈ ಮಾನವ ಸರಪಳಿಯಲ್ಲಿ ಹಿಂದುಗಳು, ಮುಸ್ಲಿಂರು ಒಬ್ಬರ ಕೈಯನ್ನು ಒಬ್ಬರು ಹಿಡಿದು ಕೋಮುಸೌಹಾರ್ದತೆಯನ್ನು ಸಾರಿದರು.

ಕೋಮು ಸೌಹಾರ್ದ ಮಾನವ ಸರಪಳಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಬಸವ ಕೇಂದ್ರದ ಜಯಬಸವಾನಂದ ಸ್ವಾಮಿಜಿ, ಜಾಗತಿಕವಾಗಿ ಮಾನವೀಯತೆಯ ಮೌಲ್ಯವನ್ನು ಎತ್ತಿ ಹಿಡಿಯುವ, ಪ್ರತಿಯೊಬ್ಬ ಮನುಷ್ಯನು ಕುಡಿಯುವನೀರು, ಉಸಿರಾಡುವ ಗಾಳಿ ಒಂದೇ. ಹಾಗೆಯೇ ಪ್ರತಿಯೊಬ್ಬರ ದೇಹದಲ್ಲಿ ಹರಿಯುವ ರಕ್ತ ಒಂದೆ. ಪ್ರತಿಯೊಬ್ಬ ಮನುಷ್ಯರು ಒಬ್ಬರನೊಬ್ಬರು ಪ್ರೀತಿ, ವಿಶ್ವಾಸದಿಂದ ಕಾಣಬೇಕು. ಯಾವುದೇ ಧರ್ಮದ ಹೆಸರಿನಲ್ಲಿ ಪೂಜಿಸಿದರು ಅದು ದೇವರಿಗೆ ಸಲ್ಲುತ್ತದೆ. ವಿವಿಧ ಧರ್ಮ, ವಿವಿಧ ಸಂಸ್ಕೃತಿಗಳಗಳನ್ನೊಳಗೊಂಡ ದೇಶ ನಮ್ಮದು. ಎಲ್ಲಾ ಧರ್ಮದವರು ನಮ್ಮ ದೇಶದಲ್ಲಿದ್ದಾರೆ. ಹಿಂದು, ಮುಸ್ಲಿಂ, ಕ್ರಿಶ್ಚಿಯನ್, ಜೈನ್ ಮತ್ತು ಬೌದ್ಧ ದರ್ಮಗಳು ಈ ಐದು ಧರ್ಮಗಳು ಐದು ಬೆರಳುಗಳಿದ್ದಂತೆ. ಈ ಎಲ್ಲಾ ಧರ್ಮಗಳು ನಮ್ಮ ದೇಶದಲ್ಲಿರುವುದಕ್ಕೆ ಅದರದೆ ಆದ ಇತಿಹಾಸವಿದೆ. ಧರ್ಮ ಸೂಜಿ ಇದ್ದಂತೆ. ಹರಿದ ಬಟ್ಟೆಯನ್ನು ಒಂದು ಮಾಡಿ ಹೊಲೆಯುತ್ತದೆ. ಜಾತಿ ಕತ್ತರಿ ಇದ್ದಂತೆ ಒಂದಾದ ಬಟ್ಟೆಯನ್ನು ಕತ್ತರಿಸಿ ತುಂಡು ಮಾಡುತ್ತದೆ. ಒಡೆದ ಮನಸ್ಸನ್ನು ಒಂದು ಮಾಡಲು ಸಾಧ್ಯವಿಲ್ಲ. ಕೋಮುವಾದಿ ಶಕ್ತಿಗಳು ಜನರ ಮಧ್ಯೆ ಒಡಕು ಮಾಡಲು ಪ್ರಯತ್ನಿಸುತ್ತಿದ್ದಾರೆ. ಇದರಿಂದ ಅಶಾಂತಿಯಾಗುತ್ತದೆ. ಶಾಂತಿ, ಪ್ರೀತಿ, ವಿಶ್ವಾಸ ಮೂಡಿಸುವ ಈ ಕೋಮು ಸೌಹಾರ್ದತ ಮಾನವ ಸರಪಳಿ ಯಶಸ್ವಿಯಾಗಲಿ ಎಂದು ಹಾರೈಸಿ ಮಾತನಾಡಿದ್ದು ವಿಶೇಷವಾಗಿತ್ತು. ಮುಸ್ಲಿಂ ಸಮುದಾಯದ ಪರವಾಗಿ ಡಾ.. ಶಾಯಿಖಾಜಿ ಕೋಮುಸೌಹಾರ್ದತೆ ಕಾಯ್ದುಕೊಳ್ಳಬೇಕಾದ ಅನಿವಾರ್ಯತೆಯ ಬಗ್ಗೆ ಮಾತನಾಡಿದರು.

ರೈತರ ಬವಣೆಗಳು - ಮೂಡಿಬಂದ ಎಚ್ಚರ

ಹಿಂದೆ ಗ್ಯಾಟ್, WTO ಒಪ್ಪಂದದ ಪರಿಣಾಮಗಳ ಅಪಾಯ ವಿವರಿಸುತ್ತಿದ್ದಾಗ ಕಾನೂನುಭಂಗ ಚಳುವಳಿ ನಡೆಸಿ ಜೈಲಿಗೆ ಹೋದಾಗ ವಿವರಿಸಿದ ವಿಷಗಳನ್ನು ಜನತೆ ಅಷ್ಟಾಗಿ ನಂಬುತ್ತಿರಲಿಲ್ಲ. ಆದರೆ ಈಗ ಸ್ಥಿತಿ ಬದಲಾಗಿದೆ. ಊಹಿಸಲಾಗಿದ್ದ ಆಘಾತಗಳು ಒಂದೊಂದಾಗಿ ಎರಗುತ್ತಿರುವಾಗ ರೈತರಲ್ಲಿ ಎಚ್ಚರ ಮೂಡತೊಡಗಿದೆ. ಪ್ರತಿಭಟನೆಗೆ ಇಳಿಯುತ್ತಿದ್ದಾರೆ. ಇದನ್ನು ಅನುಸರಿಸಿ ವಿವಿಧ ಸಂಘಟನೆಗಳು, ಪಕ್ಷಗಳು ಪ್ರತಿಸ್ಪಂದಿಸದೇ ಉಳಿದಿರಲು ಸಾಧ್ಯವಿಲ್ಲವಾಗಿದೆ. ಹಗರಿಬೊಮ್ಮನಹಳ್ಳಿಯ ಅಂತಹ ಅನುಭವದ ವರದಿ ಇಲ್ಲಿದೆ.

ರಂಗಪ್ಪ ದಾಸರ್

ಭತ್ತದ ಬೆಳೆಗೆ ಸಿಂಪಡಿಸುವ ಕಾನ್ಫಿಡರ್ ಒಂದು ಲೀಟರ್ ವಿಷಕ್ಕೆ 3600 ರೂ. ಆದರೆ ಇಡೀ ದೇಶಾನೇ ಊಟ ಮಾಡುವ ಅನ್ನದ ಭತ್ತ ಕ್ವಿಂಟಾಲ್‌ಗೆ 350 ರೂ. ಹಿಂಗಾದ್ರ ರೈತ್ರು ಹ್ಯಾಂಗ್ ಬದುಕಬೇಕು. ಒಂದು ಎಕರೆ ಭತ್ತ ಬಳಿಯೋಕೆ ಐದು ಸಾವಿರ ಸಾಲ ಬಿದ್ಯೆತ್ರಿ ನಮ್ದು ಒಟ್ಟು ಸಾಲ 75 ಸಾವಿರ ಆಗ್ಯೆತ್ರಿ. ಡಿವೈಎಫ್‌ಐ ಸಂಘಟನೆ ಹಗರಿಬೊಮ್ಮನಹಳ್ಳಿ ತಾಲೂಕಿನ ಮಾಲವಿ ಗ್ರಾಮದಲ್ಲಿ ಸರ್ವೆ ಮಾಡಿದಾಗ ಶಿವಪ್ಪ ಎಂಬ ರೈತನಿಂದ ಬಂದ ಅಳಲು, ಏನು ಬೇಸಾಯ ಬಿಡ್ರಿ ಕೂಲಿನೋ ನಾಲಿನೋ ಮಾಡಿ ಜೀವನ ಸಾಗ್ಸೋದು ಪರಮ ಸುಖ ಅನಸ್ತೈತಿ ಎಂಬುದು ಆತನ ಅಭಿಪ್ರಾಯ. **ಇಡೀ ಗ್ರಾಮದಲ್ಲಿ ಸರ್ವೆ ಮಾಡಿದಾಗ ಪ್ರತಿಯೊಬ್ಬ ರೈತನೂ ಐವತ್ತು ಸಾವಿರದಿಂದ 3 ಲಕ್ಷದವರೆಗೂ ಸಾಲ ಮಾಡಿ ಕೊಂಡಿದ್ದಾನೆ. ನೋಡುವವರ ಕಣ್ಣಲ್ಲಿ ಮಧ್ಯಮ ವರ್ಗದ ರೈತನಂತೆ ಕಂಡರೂ, ಸಾಲದ ಬಾಧೆ ಆತನನ್ನು ಕಾಡತೊಡಗಿದೆ.**

ಮಾಲವಿ ಗ್ರಾಮದಲ್ಲಿ ಸರ್ವೆ ಮಾಡುವಾಗ ರೈತರು ಕೇಂದ್ರ ಸರ್ಕಾರದ ಆರ್ಥಿಕ ನೀತಿಗಳ ಬಗ್ಗೆ ಕೆಂಡ ಕಾರುತ್ತಿದ್ದರು. ಏನಾಗ್ಯೆತ್ರಿ ನಮ್ಮ ಪ್ರಾಣ ಹೋಗ್ತಾವಾ ಹೋಗಲಿ. ಹೋರಾಟ ಮಾಡೇ ಸಾಯ್ತೀವಿ ಎಂಬ ಅಭಿಪ್ರಾಯ. ವಿಶೇಷವೆಂದರೆ ರೈತ್ರು ರಫ್ತು -ಆಮದು ನೀತಿಗಳ ಬಗ್ಗೆ ಚರ್ಚೆ ಮಾಡುತ್ತಿದ್ದುದು ವಿಶ್ವ ಹಣಕಾಸು ಸಂಸ್ಥೆ, ಅಮೇರಿಕಾ ದೇಶ, ಗ್ಯಾಟ್ ಇವು ಚರ್ಚೆಯ ಕೇಂದ್ರ ಬಿಂದುಗಳಾಗಿದ್ದವು.

1994 ರಲ್ಲಿ ಪಿ.ವಿ.ನರಸಿಂಹರಾವ್ ಸರ್ಕಾರ ಗ್ಯಾಟ್ ಒಪ್ಪಂದಕ್ಕೆ ಸಹಿ ಮಾಡಿದಾಗ ಸಿಪಿಐ(ಎಂ) ಕೇಂದ್ರ ಸಮಿತಿಯು ಜೈಲು ಭರೋ ಕಾರ್ಯಕ್ರಮಕ್ಕೆ ಕರೆ ನೀಡಿತ್ತು. ಹಗರಿಬೊಮ್ಮನಹಳ್ಳಿ ಸೇರಿದಂತೆ ಸುಮಾರು 60 ರಿಂದ 70 ಹಳ್ಳಿಗಳಲ್ಲಿ ಪಿ.ವಿ.ನರಸಿಂಹರಾವ್ ಸರ್ಕಾರದ ಹೊಸ ಆರ್ಥಿಕ ನೀತಿ(ಗ್ಯಾಟ್) ಯ ವಿರುದ್ಧ ಪ್ರಚಾರ ಸಭೆಗಳನ್ನು ನಡೆಸಿದ್ದವು. ಗ್ರಾಮದ ಎಲ್ಲಾ ಜನರನ್ನು ಗುಡಿಯಲ್ಲಿ ಸೇರಿಸಿ ಗ್ಯಾಟ್‌ನಿಂದ ರೈತರ,ಕೂಲಿಕಾರರ, ವಿದ್ಯಾರ್ಥಿ ಯುವಜನರ ಮೇಲುಂಟಾಗುವ ದುಷ್ಪರಿಣಾಮಗಳನ್ನು ವಿವರಿಸಿದರೆ ಕೂತಂತ ಜನ ಮೂಕ ವಿಸ್ಮಿತರಾಗಿ ನಮ್ಮನ್ನೇ ನೋಡುತ್ತಿದ್ದರು. ಅದ್ಯಾವುದೋ **ಐಎಂಎಫ್, ಡಬ್ಲ್ಯೂಟಿಓ, ವಿಶ್ವಬ್ಯಾಂಕ್, ಅಮೆರಿಕಾ ದೇಶ, ಮುಂದುವರಿದ ದೇಶಗಳು. ಇವೆಲ್ಲವೂ ನಮ್ಮ ಗ್ರಾಮೀಣ ಜನರಿಗೆ ಹೊಸ ಶಬ್ದಗಳಾಗಿ ಗೋಚರಿಸುತ್ತಿದ್ದವು. ಕೆಲವರು ಇಂಥ ಕಾನೂನು ಬರಬಾರದ್ರಿ, ಅಂದ್ರೆ ಕೆಲವೊಬ್ಬರು ಅಷ್ಟು ಸುಲಭ ಅಲ್ಲಬಿಡ್ರಿ ಅಂತಿದ್ರು.** ಮಧ್ಯಮ ವರ್ಗದ ರೈತರು ಇವರು ಹೇಳ್ದಾಂಗ ಆಗ್ತಾತೇನೂ. ಕೆ.ಇ.ಬಿ. ಮಾರ್ತಾರ, ಬ್ಯಾಂಕ್ ಮಾರ್ತಾರ, ಪಂಪಸೆಟ್ಟಿಗೆ ಮೀಟರ್ ಹಾಕ್ತಾರ, ಅಂದ್ರ ಅಷ್ಟು ಸುಲಭ ಏನು ಹೇಳ್ತಿನಿ ಅಂದ್ರ, ತೀರಾ-ಬಾರಾ ಹೇಳಬಾರ್ದು ನೋಡು ಅಂತಿದ್ರು. 60 ರಿಂದ 70 ಹಳ್ಳಿಯಲ್ಲಿ ಪ್ರಚಾರ ಮಾಡಿ ಸಭೆ ನಡೆಸಿದ್ದ ಹಗರಿಬೊಮ್ಮನಹಳ್ಳಿ ತಾಲೂಕಿನಿಂದ

ಪುಟ 10 ಕ್ಕೆ

ವಿಜಿನಾಪುರ ಸ್ಲಂ ಜನತೆಯ ಕಣ್ಣೀರ ಕತೆ

ನವೆಂಬರ್ ೨೦ ನಗರ ಸಭೆಯ ಆಯುಕ್ತರ ನೇತೃತ್ವದಲ್ಲಿ ಪೋಲೀಸರ ಬೆಂಗಾವಲಿನಲ್ಲಿ ಇದ್ದಕ್ಕಿದ್ದಂತೆ ಬಂದೆರಗಿದ ಈ ಗಂಡಾಂತರವನ್ನು ನೋಡನೋಡುತ್ತಿದ್ದಂತೆ ಮನೆಯೊಳಗೆ ನುಗ್ಗಿ ಪಾತ್ರೆ, ಪಗಡಿಗಳನ್ನು, ಬಟ್ಟೆಬರೆಗಳನ್ನು ಹೊರಗೆ ಚೆಲ್ಲಿದರು. ಮಕ್ಕಳು, ವೃದ್ಧರೆನ್ನದೆ ಮನೆಯೊಳಗಿಂದ ಹೊರಗೆ ತಳ್ಳಿದರು. ಅವರ ಈ ಕ್ರೂರ ನರ್ತನದಲ್ಲಿ ಕಣ್ಣಿಲ್ಲದ ಕಂದಮ್ಮನೊಂದು ಸಿಕ್ಕು ನರಳಿದ್ದು ಹೃದಯ ವಿದ್ರಾವಕವಾಗಿತ್ತು.

'ನಿಮಗ್ಯಾರು ಇಲ್ಲಿ ಮನೆ ಕಟ್ಟಿಕೊಳ್ಳೋಕೆ ಹೇಳಿದ್ದು? ಇದು ಸರ್ಕಾರದ ಜಾಗ. ನಿಮ್ಮ ಮನೆಗಳನ್ನು ಕೆಡವಿ ಶಾಲೆ ಕಟ್ಟಿಸ್ತೀವಿ ರಸ್ತೆ ಮಾಡ್ತೀವಿ'

25 ವರ್ಷಗಳ ಹಿಂದೆ ಮತ ಕೇಳಲು ಬಂದಾಗ ಜಾಗ ತೋರಿಸಿ ಮನೆ ಕಟ್ಟಿಕೊಳ್ಳುವಂತೆ ಹೇಳಿದವರೆ ಈ ರೀತಿ ಕೂಗಾಡಿದಾಗ ಕೊಳಚೆ ಪ್ರದೇಶದ ಜನ ದಂಗಾಗಿ ಭಯಭೀತರಾದರು. ಈ ಜನರ ನೋವು, ಸಂಕಟಗಳಿಗೆ, ಅವರ ಬೇಡಿಕೆಗಳಿಗೆ ಬೆಲೆಯನ್ನೇ ಕೊಡದ ಈ ಆಳುವ ವರ್ಗದ ಮಂದಿ ತಮ್ಮ ಉದ್ದೇಶವನ್ನು ನೆರವೇರಿಸಲು ಒಂದು ದಿನ ಬಂದೇ ಬಿಟ್ಟರು. ನವೆಂಬರ್ 20 ನಗರ ಸಭೆಯ ಆಯುಕ್ತರ ನೇತೃತ್ವದಲ್ಲಿ ಪೋಲೀಸರ ಬೆಂಗಾವಲಿನಲ್ಲಿ ಇದ್ದಕ್ಕಿದ್ದಂತೆ ಬಂದೆರಗಿದ ಈ ಗಂಡಾಂತರವನ್ನು ನೋಡನೋಡುತ್ತಿದ್ದಂತೆ ಮನೆಯೊಳಗೆ ನುಗ್ಗಿ ಪಾತ್ರೆ ಪಗಡಿಗಳನ್ನು, ಬಟ್ಟೆಬರೆಗಳನ್ನು ಹೊರಗೆ ಚೆಲ್ಲಿದರು. ಮಕ್ಕಳು, ವೃದ್ಧರೆನ್ನದೆ ಮನೆಯೊಳಗಿಂದ ಹೊರಗೆ ತಳ್ಳಿದರು. ಅವರ ಈ ಕ್ರೂರ ನರ್ತನದಲ್ಲಿ ಕಣ್ಣಿಲ್ಲದ ಕಂದಮ್ಮನೊಂದು ಸಿಕ್ಕು ನರಳಿದ್ದು ಹೃದಯ ವಿದ್ರಾವಕವಾಗಿತ್ತು. ಹೃದಯ ಹೀನನೊಬ್ಬ ಆ ಕಂದನನ್ನು ಮನೆಯಿಂದ ಹೊರಗೆಳೆದು ದೂರ ತಳ್ಳಿದ. ಕೆಲವೇ ಕ್ಷಣಗಳಲ್ಲಿ 8 ಮನೆಗಳು ನೆಲ ಕಚ್ಚಿದವು. ಆಶ್ರಯ ಕಳೆದುಕೊಂಡ ಜನರ ಆಕ್ರಂದನ ಮುಗಿಲು ಮುಟ್ಟಿತು.

ಇದು ಬೆಂಗಳೂರು ನಗರದ ಕೃಷ್ಣರಾಜಪುರದ ನಗರಸಭೆಗೆ ಸೇರಿದ ವಿಜಿನಾಪುರ ಕೊಳಚೆ ಪ್ರದೇಶದ ಕಣ್ಣೀರ ಕಥೆ.

ಹಿನ್ನೆಲೆ: ವಿಜನಾಪುರ ಕೊಳಚೆ ಪ್ರದೇಶ ಸುಮಾರು 29 ಎಕರೆ 14 ಗುಂಟೆ ಸರ್ಕಾರಿ ಜಾಗವಾಗಿದೆ. 25-30 ವರ್ಷಗಳ ಹಿಂದೆ ಚುನಾವಣೆಯೊಂದರ ಸಮಯದಲ್ಲಿ ಮತ ಗಿಟ್ಟಿಸಲು ಕಾಂಗ್ರೆಸ್‌ನ ಪ್ರತಿನಿಧಿಗಳು ಈ ಸ್ಥಳ ತೋರಿಸಿ ಮನೆ ಕಟ್ಟಿಕೊಳ್ಳುವಂತೆ ಸೂಚಿಸಿದರು. ಹಕ್ಕು ಪತ್ರ ಕೊಡಿಸುವುದಾಗಿಯೂ ಭರವಸೆ ನೀಡಿದರು. ಇಲ್ಲಿ ಸುಮಾರು ಮೂರು ಸಾವಿರ ಕುಟುಂಬಗಳು ವಾಸಿಸುತ್ತಿವೆ. ಇವರ ಕಸುಬು ಮನೆಯಲ್ಲಿ ಅಗರಬತ್ತಿ ಮಾಡುವುದು, ಮನೆ ಕೆಲಸಕ್ಕೆ ಹೋಗುವುದು, ಗಾರೆ ಕೆಲಸ, ಪೆಯಿಂಟಿಂಗ್ ಕೆಲಸ ಹೀಗೆ ಕೂಲಿ ಮಾಡಿ ಜೀವಿಸುತ್ತಿದ್ದಾರೆ. ಕನ್ನಡ, ತಮಿಳು, ತೆಲುಗು, ಉರ್ದು ಭಾಷೆಗಳ ಜನರು ಇಲ್ಲಿದ್ದಾರೆ. ಸಾಧ್ಯವಿದ್ದವರು ಸಣ್ಣ ಸಣ್ಣ ಮನೆ ಕಟ್ಟಿಕೊಂಡಿದ್ದಾರೆ. ಹಲವರು ಗುಡಿಸಲುಗಳಲ್ಲೇ ವಾಸ. ಈ ಬಡಜನರ ಹೆಸರಿನಲ್ಲಿ ಬಂಡವಾಳಶಾಹಿ ರಾಜಕೀಯ ಪಕ್ಷಗಳ ಕೆಲವು ಚೇಲಾಗಳು ಒಬ್ಬೊಬ್ಬರೂ 5ರಿಂದ 10 ಮನೆ ಅಥವಾ ಗುಡಿಸಲು ಕಟ್ಟಿ ಬಾಡಿಗೆಗೆ ಕೊಟ್ಟಿದ್ದಾರೆ. ಹಲವರಿಂದ ಹಣ ಪಡೆದು ಗುಡಿಸಲು ಹಾಕಲು ಜಾಗ ತೋರಿಸಿದ್ದಾರೆ.

ಈ ಜನರ ಓಟು ಪಡೆದು ಅಧಿಕಾರದ ರುಚಿ ಸವಿದ ಜನ ಪ್ರತಿನಿಧಿಗಳು ಇವರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲಿಲ್ಲ. ರಸ್ತೆ, ಬೀದಿ ದೀಪ, ಕುಡಿಯುವ ನೀರು, ಚರಂಡಿ ವ್ಯವಸ್ಥೆ ಇಲ್ಲದೆ ಕೆಟ್ಟ ವಾತಾವರಣದಲ್ಲಿ ಬದುಕು ಸಾಗಿಸುತ್ತಿದ್ದಾರೆ. ಆಳುವ ವರ್ಗದ ಜನ, ಭಾಷೆ, ಜಾತಿ ಧರ್ಮದ ಹೆಸರಿನಲ್ಲಿ ಜನತೆ ಒಗ್ಗಟ್ಟಾಗದಂತೆ ತಡೆಯಲು ನಿರಂತರ ಪ್ರಯತ್ನಿಸುತ್ತಿದ್ದಾರೆ.

ಜೆ.ಎಂ.ಎಸ್.ನ ಮಧ್ಯ ಪ್ರವೇಶ

1997ರಲ್ಲಿ ಸಿಟಿ ಸಾಕ್ಷರತಾ ಸಮಿತಿಯ ಅಡಿಯಲ್ಲಿ ಜನವಾದಿ ಮಹಿಳಾ ಸಂಘಟನೆಯ ನಾಯಕಿ ಗೌರಮ್ಮ ಮತ್ತು ಸಂಗಾತಿಗಳು ಸಾಕ್ಷರತೆ ಸಾರಲು ಕೊಳಚೆ ಪ್ರದೇಶಗಳಲ್ಲಿ ಸುತ್ತಾಡಿದಾಗ ವಿಜನಾಪುರದ ಸ್ಲಂ ನ ದಾರುಣ ಸ್ಥಿತಿ ಕಣ್ಣಿಗೆ ಬಿತ್ತು. ಈ ಜನರಿಗೆ ಅಕ್ಷರ ಜ್ಞಾನ ನೀಡುತ್ತಾ ಎಲ್ಲಾ ಭಾಷೆಯ ಜನರಿಗೆ ಸಂಘಟನಾ ತಿಳುವಳಿಕೆ ನೀಡಲು ಈ ಸಂಘಟನೆ ಮುಂದಾಯಿತು. ಅಕ್ಷರ ಕಲಿಯಲು ಕಲಿಕಾ ಕೇಂದ್ರಕ್ಕೆ ಬರಲೂ ಈ ಜನ ಒಪ್ಪುತ್ತಿರಲಿಲ್ಲ. ಮೊದಲನೆಯದಾಗಿ ಮಹಿಳೆಯರ ಮನವೊಲಿಸಿ ಆಶಾ ಎಸ್.ಕಟ್ಟಿಯವರ ಪರಿಚಯದ ಮೂಲಕ ಸಾಕ್ಷರತೆಯ ಗುಂಪು ಮಾಡಿ ಕಲಿಕಾ ಕೇಂದ್ರಕ್ಕೆ ಬರಲು ಪ್ರೇರೇಪಿಸಲಾಯಿತು. ಹಲವು ಪರಿಶ್ರಮದ ಮೂಲಕ ಮಹಿಳೆಯರನ್ನು ಸಂಘಟಿಸಲಾಯಿತು.

ಮಹಿಳೆಯರು ಮತ್ತು ಅಲ್ಲಿನ ಕೆಲವು ಯುವಕರಿಗೆ ಕೊಳಚೆ ಪ್ರದೇಶದ ಸ್ಥಿತಿಗತಿಯ ಬಗ್ಗೆ ಮತ್ತು ಸ್ಲಂ ಕಾಯಿದೆಯ ಬಗ್ಗೆ ಅರಿವು ಮೂಡಿಸಲಾಯ್ತು.

ಹೋರಾಟ ಸಮಿತಿ ರಚನೆ: ಹೋರಾಟವನ್ನು ತೀವ್ರಗೊಳಿಸುವ ಮತ್ತು ಹೆಚ್ಚಿನ ಜನರನ್ನು ಹೋರಾಟಗಳಿಗೆ ಸಿದ್ಧಗೊಳಿಸುವ ಸಲುವಾಗಿ ಹೋರಾಟ ಸಮಿತಿಯೊಂದನ್ನು ರಚಿಸಲಾಯಿತು. ಸ್ಥಳೀಯ ಸಂಘಟನೆಯಾದ 'ಸಂಗ್ರಹ'ದ ಸಿಸ್ಟರ್ ಸ್ಟೆಲ್ಲಾ ಮತ್ತು ಡಿವೈಎಫ್ಐ ನ ಸತೀಶ್ ಇವರೂ ಸಮಿತಿಯ ಸದಸ್ಯರು. ಕಾರ್ಮಿಕ ಸಂಘಟನೆಯಾದ ಸಿಐಟಿಯು ಮತ್ತು ಯುವಜನ ಸಂಘಟನೆಯಾದ ಡಿವೈಎಫ್ಐ ಸಂಗಾತಿಗಳ ಜೊತೆಗೂಡಿ ಈ ಪ್ರದೇಶದ ಜನರ ಸಹಿ ಸಂಗ್ರಹಿಸಿ ಕೊಳಚೆ ನಿರ್ಮೂಲನಾ ಮಂಡಳಿ ಅಧ್ಯಕ್ಷರಾದ ಚಂದ್ರಪ್ರಸಾದ್ ತ್ಯಾಗಿಯವರನ್ನು ಭೇಟಿ ಮಾಡಿ ಈ ಪ್ರದೇಶವನ್ನು ಕೊಳಚೆ ಪ್ರದೇಶವೆಂದು ಘೋಷಿಸಬೇಕೆಂದು ಒತ್ತಾಯಪಡಿಸಿತು.

ಹೋರಾಟ ಸಮಿತಿಯ ಮನವಿಗೆ ಸ್ಲಂ ಬೋರ್ಡ್‌ನಿಂದ ಪ್ರತಿಕ್ರಿಯೆ ಬಾರದಿದ್ದಾಗ ಮಂಡಳಿ ಕಛೇರಿ ಎದುರು ಹಾಗೂ ಜಿಲ್ಲಾಧಿಕಾರಿ ಕಛೇರಿ ಎದುರು ಪ್ರತಿಭಟನೆ ನಡೆಸಲಾಯ್ತು. ಜಿಲ್ಲಾಧಿಕಾರಿ ಸ್ಥಳ ಪರಿಶೀಲನೆ ನಡೆಸುವಾಗಿ ಭರವಸೆಯಿತ್ತರು. ಮಂಡಳಿ ಕಾರ್ಯದರ್ಶಿ ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳು ಇದೇ ವರ್ಷದ ಜುಲೈ 21 ರಂದು ಸ್ಥಳಕ್ಕೆ ಭೇಟಿ ನೀಡಿ ಪ್ರದೇಶದ ಸ್ಥಿತಿಗತಿಯ ಬಗ್ಗೆ ಅಧ್ಯಯನ ನಡೆಸಿ ಈ ಪ್ರದೇಶವನ್ನು ಕೊಳಚೆ ಪ್ರದೇಶವೆಂದು ಘೋಷಿಸುವಂತೆ ಸರ್ಕಾರಕ್ಕೆ ಒತ್ತಾಯ ಮಾಡಿ ಪತ್ರ ಬರೆಯುವುದಾಗಿ ಭರವಸೆ ನೀಡಿದರು. ಜುಲೈ 25 ರಂದು ಸರ್ಕಾರಕ್ಕೆ ಪತ್ರ ಬರೆದು ಶಿಫಾರಸ್ಸು ಮಾಡಿದರು. ಪತ್ರ ತಲುಪಿದ ತಕ್ಷಣ ಹೆಚ್ಚುವರಿ ಜಿಲ್ಲಾಧಿಕಾರಿ ಸ್ಥಳಕ್ಕೆ ಭೇಟಿ ನೀಡಿ ಕೊಳಚೆ ಪ್ರದೇಶವೆಂದು ಘೋಷಣೆ ಮಾಡಲು ಮುಂದಿನ ಕ್ರಮ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದರು. ಜನ ಸ್ವಲ್ಪ ನೆಮ್ಮದಿಯ ಉಸಿರು ಬಿಟ್ಟರು.

ಮತ್ತೆ ಬೆದರಿಕೆ: ಅಕ್ಟೋಬರ್ 17 ರಂದು ನಡೆದ 'ಬಡತನ ಹಿಂಸೆ ವಿರೋಧಿಸಿ ರ್‍ಯಾಲಿ' ಕಾರ್ಯಕ್ರಮದಲ್ಲಿ ಈ ಪ್ರದೇಶದ 60 ಮಹಿಳೆಯರು ಭಾಗವಹಿಸಿದರು. ಜನಜಾಗೃತಿ ಬಯಸದ ಆಳುವ ವರ್ಗ ಇದನ್ನು ಸಹಿಸಲಿಲ್ಲ. ಕೃಷ್ಣರಾಜುಪುರಂ ನಗರ ಸಭೆಯ ಅಧ್ಯಕ್ಷರು ಹಾಗೂ ಸದಸ್ಯರ ದೌರ್ಜನ್ಯ, ಬೆದರಿಕೆಗಳು ಮತ್ತೆ ಪ್ರಾರಂಭವಾಯಿತು. ಆ ಸ್ಥಳದಲ್ಲಿ ಶಾಲೆ ಕಟ್ಟಬೇಕು, ಆಟದ ಮೈದಾನ ನಿರ್ಮಿಸಬೇಕು, ರಸ್ತೆ ಅಗಲ ಮಾಡಬೇಕು ಎಂಬ ನೆಪ ಹೇಳಿ ಮನೆಗಳನ್ನು ಕೆಡವುದಾಗಿ ಬೆದರಿಸಿದರು. ಈ ವಿಷಯವನ್ನು ಅಕ್ಟೋಬರ್ 20 ರಂದು ಹೆಚ್ಚುವರಿ ಜಿಲ್ಲಾಧಿಕಾರಿಯವರ ಗಮನಕ್ಕೆ ತಂದು ರಕ್ಷಣೆ ನೀಡಬೇಕೆಂದು ಒತ್ತಾಯಿಸ ಲಾಯಿತು. ಈ ಪ್ರದೇಶವನ್ನು ಕೊಳಚೆ ಪ್ರದೇಶವೆಂದು ಘೋಷಿಸುವ ಬಗ್ಗೆ ಸರ್ಕಾರದಲ್ಲಿ ವಿಚಾರ ನಡೆಯುತ್ತಿದ್ದು ಯಾವುದೇ ಮನೆಗಳನ್ನು ಕೆಡವದೆ ಜನರಿಗೆ ರಕ್ಷಣೆ ನೀಡಬೇಕೆಂದು ಹೆಚ್ಚುವರಿ ಜಿಲ್ಲಾಧಿಕಾರಿ ನಗರಸಭೆಗೆ ಆದೇಶ ನೀಡಿ ಪತ್ರ ಬರೆದರು.


ಪೋಲೀಸರ ನೇತೃತ್ವದಲ್ಲಿ ಮನೆಗಳ ಧ್ವಂಸ

ಕಾಂಗ್ರೆಸ್ ಪಕ್ಷದವರಾದ ನಗರಸಭೆಯ ಅಧ್ಯಕ್ಷರು ಈ ಆದೇಶವನ್ನು ಉಲ್ಲಂಘಿಸಿದರು. ನವೆಂಬರ್ 2 ರಂದು ಇಲ್ಲಿನ ಜನರಿಗೆ ಯಾವುದೇ ಮುನ್ಸೂಚನೆ ನೀಡದೆ, ಪರ್ಯಾಯ ವ್ಯವಸ್ಥೆ ಮಾಡದೆ ದಬ್ಬಾಳಿಕೆಯಿಂದ 8 ಮನೆಗಳನ್ನು ನೆಲಸಮ ಮಾಡಿದರು. ಘಟನೆ ವಿಷಯ ತಿಳಿದ ಸಿಪಿಐ(ಎಂ) ಮುಖಂಡರಾದ ಗೋಪಾಲಗೌಡ, ರಮೇಶ, ಜೆ.ಎಂ.ಎಸ್. ಮುಖಂಡರಾದ ಗೌರಮ್ಮ ಸ್ಥಳಕ್ಕೆ ಧಾವಿಸಿ ಬಂದರಾದರೂ ಆ ವೇಳೆಗೆ ಕಾರ್ಯ ಮುಗಿಸಿದ್ದ ನಗರಸಭೆಯ ಆಯುಕ್ತರು ಹೊರಡುವುದರಲ್ಲಿದ್ದರು. ತಕ್ಷಣ ಸ್ಥಳೀಯ ಜನತೆ ಜೊತೆಗೂಡಿ ಆಯುಕ್ತರ ಕಾರನ್ನು ತಡೆದು ಪ್ರತಿಭಟಿಸಲಾಯಿತು. ಮೂರು ತಿಂಗಳಲ್ಲಿ ಮನೆ ಕಟ್ಟಿಸಿಕೊಡುವುದಾಗಿ ಆಯುಕ್ತರು ಭರವಸೆ ನೀಡಿದರು.

ಗೌರಮ್ಮ ಸಿದ್ದಯ್ಯ

ನಗರಸಭೆ ಎದುರು ಪ್ರತಿಭಟನೆ

ಹೋರಾಟ ಸಮಿತಿಯ ನೇತೃತ್ವದಲ್ಲಿ ಮಾರನೇ ದಿನವೇ ನಗರಸಭೆಯ ಎದುರು ಪ್ರತಿಭಟನೆ ನಡೆಸಿ, ನಗರ ಸಭೆಯ ಅಧ್ಯಕ್ಷರ ದೌರ್ಜನ್ಯವನ್ನು ಖಂಡಿಸಲಾಯ್ತು. ಈ ಕಾರ್ಯಕ್ರಮ ನಡೆಯದಂತೆ ಜನರನ್ನು ತಡೆಯಲು ನಗರಸಭಾ ಸದಸ್ಯರು ಮಾಡಿದ ಪ್ರಯತ್ನ ಯಶಸ್ವಿಯಾಗಲಿಲ್ಲ. 500 ಕ್ಕೂ ಹೆಚ್ಚು ಜನ ಸ್ಲಂನಿಂದ ಮೆರವಣಿಗೆ ಹೊರಟು ರಾಮಮೂರ್ತಿನಗರದ ರಸ್ತೆಯ ಮೂಲಕ ನಗರಸಭೆ ಕಚೇರಿ ತಲುಪಿ ಧರಣಿ ನಡೆಸಿದರು. ಧಿಕ್ಕಾರದ ಘೋಷಣೆ ಕೂಗಿದರು. ಆಶ್ರಯ ನೀಡುವಂತೆ ಒತ್ತಾಯಿಸಿದರು. ಮನವಿಯನ್ನು ಪಡೆದ ಅಧ್ಯಕ್ಷರಿಂದ ನೀರಸ ಉತ್ತರ.

ಮುಖ್ಯಮಂತ್ರಿ ಮನೆ ಮುಂದೆ ಪ್ರತಿಭಟನೆ

ನಗರಸಭೆಯ ಅಧ್ಯಕ್ಷರ ಉತ್ತರದಿಂದ ಆಕ್ರೋಶಗೊಂಡ ಜನತೆ ಮುಂದಿನ ಹೋರಾಟಕ್ಕೆ ಸಿದ್ಧವಾಗತೊಡಗಿತು. ಪತ್ರಿಕಾಗೋಷ್ಠಿ ಕರೆದು ನಗರಸಭೆಯ ಅಧ್ಯಕ್ಷರ ದೌರ್ಜನ್ಯ, ಅದರಿಂದ ಸ್ಲಂ ಜನರು ಅನುಭವಿಸುತ್ತಿರುವ ಸಂಕಷ್ಟಗಳ ಬಗ್ಗೆ ಪತ್ರಿಕೆಗಳಿಗೆ ತಿಳಿಸಲಾಯ್ತು. ನವೆಂಬರ್ 27 ರಂದು ಮುಖ್ಯಮಂತ್ರಿಗಳ ಮನೆ ಎದುರು ಪ್ರತಿಭಟನೆ ನಡೆಸಲಾಯ್ತು. ಅಂದೂ ಸಹ ಪ್ರತಿಭಟನೆಗೆ ಹೊರಟ ಜನರನ್ನು ತಡೆಯಲು ನಗರಸಭಾ ಸದಸ್ಯರ ಬೆಂಬಲಿಗರೊಂದಿಗೆ ಶತ ಪ್ರಯತ್ನ ಮಾಡಿದರು, ಬೆದರಿಸಿದರು. ಪ್ರತಿಭಟನಾಕಾರರು ಇದ್ದ ವಾಹನಗಳನ್ನು ತಡೆದರು. ಜನ ಈ ಬೆದರಿಕೆಗೆ ಮಣಿಯಲಿಲ್ಲ. 500 ಕ್ಕೂ ಹೆಚ್ಚು ಜನ ಈ ಪ್ರತಿಭಟನೆಯಲ್ಲಿ ಸೇರಿಕೊಂಡರು.

ಮುಖ್ಯಮಂತ್ರಿಗಳ ಅನುಪಸ್ಥಿತಿಯಲ್ಲಿ ಜಿಲ್ಲಾಧಿಕಾರಿಗಳು ಮನವಿ ಪತ್ರ ಪಡೆದರು. 'ನಿಮಗೆ ಆಗಿರುವ ನಷ್ಟವನ್ನು ನಗರಸಭೆಯವರೇ ತುಂಬಿಕೊಡಬೇಕು. ಇಂದೇ ಅವರನ್ನು ನಾನು ಸಭೆ ಕರೆದು ಮಾತನಾಡುತ್ತೇನೆ' ಎಂದು ಭರವಸೆ ನೀಡಿದರು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಜೆ.ಎಂ.ಎಸ್.ನ ರಾಜ್ಯ ಉಪಾಧ್ಯಕ್ಷೆ ಎಸ್.ವರಲಕ್ಷ್ಮಿ, ಸಿಪಿಐ(ಎಂ) ಮುಖಂಡರಾದ ಗೋಪಾಲಗೌಡ, ಡಿವೈಎಫ್ಐ ನ ರಾಮಚಂದ್ರ, ಸಿಐಟಿಯುನ ಜಯರಾಂ, 'ಸಂಗ್ರಹ'ದ ಜಯ ಮಾತನಾಡಿದರು. ಇದರ ನೇತೃತ್ವವನ್ನು ಗೌರಮ್ಮ ವಹಿಸಿದ್ದರು.

ಇಂತಹ ಭರವಸೆಗಳನ್ನು ಕೇಳಿ ಕೇಳಿ ಸಾಕಾಗಿರುವ ಜನತೆ ಈ ಭರವಸೆಯೂ ಸುಳ್ಳಾದರೆ ಜಿಲ್ಲಾಧಿಕಾರಿ ಕಛೇರಿಯ ಮುಂದೆ ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ. ಹೋರಾಟಕ್ಕೆ ತಾತ್ಕಾಲಿಕ ಜಯ ದೊರೆತಿದೆ.

ಮನುಷ್ಯ ಬದುಕಲು ಒಂದು ಸೂರು ಬೇಕೇಬೇಕು. ಮಳೆ, ಗಾಳಿ, ಚಳಿ, ಬಿಸಿಲುಗಳಿಂದ ರಕ್ಷಣೆ ಬೇಕು. ಆಳುವ ವರ್ಗ ಚುನಾವಣೆಯಲ್ಲಿ ಇಂತಹ ಜನರಿಗೆ ಭಾರಿ ಭರವಸೆಯನ್ನು ನೀಡಿದರೂ ನಂತರ ಅವರನ್ನು ಸದಾ ಶೋಷಣೆಯಲ್ಲಿ ಮುಳುಗಿಸುತ್ತಾರೆ. 'ಆಶ್ರಯ'ದಂತಹ ಯೋಜನೆಗಳು ಕೇವಲ ಚುನಾವಣಾ ಸ್ಟಂಟ್‌ಗಳಾಗಿವೆ. ಕೆಲ ರಾಜಕೀಯ ಪುಡಾರಿಗಳಿಗೆ ಇಂತಹ ಯೋಜನೆ ಹಣ ಸಂಪಾದನೆಯ ದಂದೆಯಂತಾಗಿವೆ. ಹಿಂದೊಮ್ಮೆ ಎಂತದೋ ಆಗಿದ್ದ ಜಾಗ, ಜನವಾಸ, ನಗರದ ಬೆಳವಣಿಗೆಯಿಂದ ಈ ಕೊಳಚೆ ಪ್ರದೇಶಕ್ಕೂ ಬೆಲೆ ಬರುತ್ತದೆ. ಆಗ ಆಳುವವರ, ಭೂಗಳ್ಳರ, ಸ್ಥಾಪಿತ ಹಿತಾಸಕ್ತಿಗಳ ಕಣ್ಣು ಈ ಕಡೆ ಹರಿಯುತ್ತದೆ. 30-40 ವರ್ಷಗಳಿಂದ ಜೀವನ ನಡೆಸುವವರನ್ನು ಖಾಲಿ ಮಾಡಿಸಲು ಹಲವು ತಂತ್ರಗಳನ್ನು ಮಾಡುತ್ತಾರೆ. ಇಂತಹ ಶೋಷಿತ ಜನ ಭಾಷೆ, ಧರ್ಮ, ಜಾತಿ ಎಲ್ಲವನ್ನೂ ಮೀರಿ ಒಗ್ಗಟ್ಟಾದಾಗ ಮಾತ್ರ ಈ ಆಳುವ ವರ್ಗಗಳನ್ನು ದಿಟ್ಟವಾಗಿ ಎದುರಿಸಲು ಸಾಧ್ಯ. ವಿಜಿನಾಪುರ ಕೊಳಚೆ ಪ್ರದೇಶದ ನಿರಂತರ ಹೋರಾಟದ ಚಿತ್ರ ಇಲ್ಲಿದೆ.

ಮನೆ ಕಟ್ಟಲು ಕಾರ್ಯಕರ್ತೆಗೆ ಸಂಗಾತಿಗಳಿಗೆ ಸಹಾಯ

ಈಕೆಯ ಹೆಸರು ನಿರ್ಮಲ. ಜನವಾದಿ ಮಹಿಳಾ ಸಂಘಟನೆಯ ಮುಖಂಡರಲ್ಲೊಬ್ಬರು. ವಿಜನಾಪುರದ ಸ್ಲಂನಲ್ಲಿ ತನ್ನ ಎರಡು ಪುಟ್ಟ ಮಕ್ಕಳೊಡನೆ ಇವರ ವಾಸ. ಸಿಟಿ ಸಾಕ್ಷರತೆ ಸಮಿತಿಯ ಕಾರ್ಯಕರ್ತೆ ಕೂಡ. ಬಂಡವಾಳಶಾಹಿ ರಾಜಕೀಯ ಪಕ್ಷಗಳ ಚೇಲಾಗಳಲ್ಲೊಬ್ಬ ಪಡೆದಿದ್ದ ಜಾಗದಲ್ಲಿ ಗುಡಿಸಲು ಕಟ್ಟಿ ಈಕೆಯಿಂದ ತಿಂಗಳಿಗೆ 150 ರೂ. ಬಾಡಿಗೆ ಪಡೆಯುತ್ತಿದ್ದ. ಬಿಸಿಲು, ಮಳೆ, ಚಳಿಯನ್ನು ತಡೆದುಕೊಳ್ಳುವ ಶಕ್ತಿ ಹೀನ ಗುಡಿಸಲು ತನ್ನ ಒಡಲಲ್ಲಿ ವಾಸಿಸುವ ಜನಕ್ಕೆ ರಕ್ಷಣೆಕೊಡುವುದು ಸಾಧ್ಯವೇ? ಜೀವನ ಹೀಗೆ ಸಾಗಿತ್ತು. ಕೊನೆಗೊಮ್ಮೆ ಜೋರಾದ ಮಳೆಯ ಹೊಡೆತ ತಾಳದ ಗುಡಿಸಲು ನೆಲಕಚ್ಚಿ ಮಲಗಿತು. ತಾಯಿ ಮಕ್ಕಳು ಬೀದಿಪಾಲಾದರು.


ಆದರೆ ಆಕೆಯ ಸಂಘಟನೆ ಆಕೆಯನ್ನು ಬೀದಿಪಾಲಾಗಲು ಬಿಡಲಿಲ್ಲ. ಅದೇ ಸ್ಥಳದಲ್ಲಿ ಮನೆ ಕಟ್ಟಿಕೊಡಬೇಕೆಂದು ತೀರ್ಮಾನಿಸಿ ಅದಕ್ಕಾಗಿ ಹಣ ಸಂಗ್ರಹಿಸಿತು. ಸಿಪಿಐ(ಎಂ), ಸಿಐಟಿಯು, ಡಿವೈಎಫ್ಐ ಸಂಗಾತಿಗಳು ಕೈಜೋಡಿಸಿದರು. ಈ ಸಂಘಟನೆಗಳ ಸದಸ್ಯರಿಂದ ಹಾಗೂ ಸ್ಥಳೀಯರಿಂದ ಹಣ ಸಂಗ್ರಹಿಸಿ ಅದೇ ಸ್ಥಳದಲ್ಲಿ ಒಂದು ಪುಟ್ಟದಾದ ಆದರೆ ಸುಭದ್ರವಾದ ಮನೆ ಕಟ್ಟಿಸಿಕೊಡಲಾಯ್ತು. ಮನೆ ಕಟ್ಟುವಾಗಲೂ ಸಹ ಹಲವರ ವಿರೋಧಗಳನ್ನು ಎದುರಿಸಬೇಕಾಯ್ತು. ಜನವಾದಿ ಮಹಿಳಾ ಸಂಘಟನೆಯ ಈ ಕೆಲಸದಿಂದ ಸ್ಥಳೀಯ ಜನರಲ್ಲಿ ಹೊಸ ಹುರುಪು ಮೂಡಿತು....

ಮುಖ್ಯಮಂತ್ರಿ ಮನೆ ಎದುರು ಜೆ.ಎಂ.ಎಸ್. ನೇತೃತ್ವದಲ್ಲಿ ಸ್ಲಂ ನಿವಾಸಿಗಳ ಧರಣಿ



ಕಳಚಿ ಬಿದ್ದ ಸ್ವಯಂಸೇವಕ ಮುಖವಾಡ

ವಾಜಪೇಯಿ ಭಾರತದಲ್ಲಿ ಸಂಘ ಪರಿವಾರದ ಕಾರ್ಯಕ್ರಮಗಳಿಗೂ ತಮ್ಮ ಪಕ್ಷದ ಧೋರಣೆಗೂ ಸಂಬಂಧವಿಲ್ಲ ಎಂದು ಹೇಳಿ ತಮ್ಮ ಸೆಕ್ಯುಲರ್(!) ಬೆಂಬಲಿಗರ ಕಣ್ಣೊರೆಸುವ ಕಾಯಕ ಕೈಗೊಂಡರು. ತನ್ನ ಉದಾರವಾದಿ ಮುಖವಾಡವನ್ನು ಕಳಚಿಹಾಕಿರುವ ಪ್ರಧಾನಿ ಆರ್.ಎಸ್.ಎಸ್. ಶಿಸ್ತುಬದ್ಧವಾಗಿ ಸಮರ್ಥಿಸುವ ಕೋಮುವಾದದ ನಗ್ನ ಸ್ವರೂಪವನ್ನು ಸಂಸತ್ತಿನೊಳಗೇ ಪ್ರದರ್ಶಿಸಿದ್ದಾರೆ.



ಇದೇ ಡಿಸೆಂಬರ್ 6 ಕ್ಕೆ ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಿ 8 ವರ್ಷಗಳು ಕಳೆದವು. ಈ ವಿಷಯ ಮಂದಿರ-ಮಸೀದಿಯ ಪ್ರಶ್ನೆಯಲ್ಲ. ರಾಜಕೀಯ ಪಾಶವೀ ಶಕ್ತಿಗಳು ಕಾನೂನನ್ನು ಕೈಗೆತ್ತಿಕೊಂಡು ದೇಶದ ಶಾಂತಿ, ನ್ಯಾಯ, ಸೌಹಾರ್ದತೆಯನ್ನು ಛಿದ್ರಗೊಳಿಸಿದುದರ ಸಂಕೇತವಾಗಿದೆ.

ಬಾಬ್ರಿ ಮಸೀದಿಯನ್ನು ಧ್ವಂಸಗೊಳಿಸಿದ ಪ್ರಕರಣಕ್ಕೆ ಸಂಬಂಧಿಸಿ 1997 ರಲ್ಲಿ ಸಿಬಿಐ ಆರೋಪ ಪಟ್ಟಿಯನ್ನು ಲಖೌನದ ಅಡಿಷನಲ್ ಸೆಷನ್ಸ್ ನ್ಯಾಯಾಧೀಶರೆದುರು ಸಲ್ಲಿಸಲಾಗಿತ್ತು. ಲಾಲ್ ಕೃಷ್ಣ ಅಡ್ವಾಣಿ, ಮುರುಳಿಮನೋಹರ ಜೋಷಿ, ಉಮಾ ಭಾರತಿ ಮತ್ತು ಇತರ 48 ಜನರ ಮೇಲೆ ಭಾರತೀಯ ದಂಡ ಸಂಹಿತೆ (ಐಪಿಸಿ) ಕಲಂ 147, 153(ಎ), 153(ಬಿ), 25[illegible], 295(ಎ) ಮತ್ತು 505 ಅನ್ವಯ ಮೊಕದ್ದಮೆಯನ್ನು ದಾಖಲಿಸಲಾಗಿತ್ತು.

ಈ ಆರೋಪಿತರ ಪಟ್ಟಿಯಲ್ಲಿರುವ ಮೂವರು ಈಗ ಕೇಂದ್ರ ಮಂತ್ರಿ ಸ್ಥಾನದಲ್ಲಿದ್ದು ಮೂವರೂ ಆರೋಪಿಗಳು ರಾಜೀನಾಮೆ ನೀಡಬೇಕು ಎಂದು ಎಲ್ಲ ವಿರೋಧ ಪಕ್ಷಗಳು ಲೋಕಸಭೆ ಹಾಗೂ ರಾಜ್ಯಸಭೆಯಲ್ಲಿ ಪ್ರಬಲವಾಗಿ ಒತ್ತಾಯಿಸಿವೆ. ಈ ವಾರದ ಲೋಕಸಭೆ, ರಾಜ್ಯಸಭೆಯ ಕಲಾಪಗಳಲ್ಲಿ ವಿಪಕ್ಷಗಳು ಬಿರುಸಾದ ಸ್ವರೂಪದಲ್ಲಿ ತಮ್ಮ ಒತ್ತಾಯವನ್ನು ಮುಂದಿರಿಸಿದ್ದು ಪ್ರಧಾನಿ ವಾಜಪೇಯಿ ನಿರಾಕರಿಸಿದ್ದಷ್ಟೇ ಅಲ್ಲ, ಮಸೀದಿಯ ಧ್ವಂಸ ಕಾರ್ಯವನ್ನು ಸಮರ್ಥಿಸಿಕೊಂಡಿದ್ದು ನಾಚಿಕೇಗೇಡಿನ ಸಂಗತಿಯಾಗಿದೆ.

ಕಳೆದ ಕೆಲವೇ ದಿನಗಳ ಹಿಂದೆ ನ್ಯೂಯಾರ್ಕಿನಲ್ಲಿ ಹಾಗೂ ಭಾರತದಲ್ಲಿ ಸಂಘ ಪರಿವಾರಕ್ಕೆ ತನ್ನ ನಿಷ್ಠೆಯನ್ನು ಬಹಿರಂಗವಾಗಿ ಘೋಷಿಸಿದ್ದ ವಾಜಪೇಯಿ ಭಾರತದಲ್ಲಿ ಸಂಘ ಪರಿವಾರದ ಕಾರ್ಯಕ್ರಮಗಳಿಗೂ ತಮ್ಮ ಪಕ್ಷದ ಧೋರಣೆಗೂ ಸಂಬಂಧವಿಲ್ಲ ಎಂದು ಹೇಳಿ ತಮ್ಮ ಸೆಕ್ಯುಲರ್(!) ಬೆಂಬಲಿಗರ ಕಣ್ಣೊರೆಸುವ ಕಾಯಕ ಕೈಗೊಂಡರು. ತನ್ನ ಉದಾರವಾದಿ ಮುಖವಾಡವನ್ನು ಕಳಚಿಹಾಕಿರುವ ಪ್ರಧಾನಿ ಆರ್.ಎಸ್.ಎಸ್. ಶಿಸ್ತುಬದ್ಧವಾಗಿ ಸಮರ್ಥಿಸುವ ಕೋಮುವಾದದ ನಗ್ನ ಸ್ವರೂಪವನ್ನು ಸಂಸತ್ತಿನೊಳಗೇ ಪ್ರದರ್ಶಿಸಿದ್ದಾರೆ.

ಈ ದೇಶದ ಕಾನೂನನ್ನು ಎತ್ತಿ ಹಿಡಿಯುವ, ಜಾತ್ಯಾತೀತತೆಯನ್ನು ರಕ್ಷಿಸುವ ಹೊಣೆ ಇರುವ ಪ್ರಧಾನಿ ಮಂದಿರ ಕಟ್ಟೇ ತೀರುವ ಪಣ ತೊಟ್ಟಿರುವ ವಿಶ್ವ ಹಿಂದು ಪರಿಷತ್ ಮತ್ತು ಸಂಘ ಪರಿವಾರವನ್ನು ಸಮರ್ಥಿಸಿಕೊಂಡಿರುವುದು ಗಂಡಾಂತರಕಾರಿ ವಿಷಯವಾಗಿದೆ.

ಪ್ರಧಾನಿಯ ಪಕ್ಷ ಬಿಜೆಪಿಯು ಅಯೋಧ್ಯಾ ಮಸೀದಿ ಧ್ವಂಸ ಪ್ರಕರಣವನ್ನು ಸ್ವಾತಂತ್ರ್ಯ ಚಳುವಳಿಗೆ ಹೋಲಿಸಿದೆ! ಮಹಾತ್ಮ ಗಾಂಧಿ, ಸುಭಾಷ್ ಚಂದ್ರಬೋಸ್, ವಲ್ಲಭಾಬಾಯಿ ಪಟೇಲ್‌ರಂತೆ ಅಡ್ವಾಣಿ, ಜೋಷಿ, ಉಮಾಭಾರತಿ ರಾಜಕೀಯ ಹೋರಾಟ ನಡೆಸಿರುವುದರಿಂದ ಇವರು ರಾಜೀನಾಮೆ ಕೊಡುವುದು ಅನವಶ್ಯ ಎಂದಿದೆ.

1992 ರಲ್ಲಿ ಈ ಘಟನೆಯನ್ನು ರಾಷ್ಟ್ರೀಯ ದುರಂತವೆಂದು ಕರೆದಿದ್ದ ಪ್ರಧಾನಿ ಇಂದು 'ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ ಕಾರ್ಯ ರಾಷ್ಟ್ರೀಯ ಭಾವನೆಗಳನ್ನು ಅಭಿವ್ಯಕ್ತಗೊಳಿಸುವ ಪ್ರತೀಕವಾಗಿತ್ತು; ಅದು ಸಾಕಾರಗೊಳ್ಳಬೇಕಿದೆ' ಎಂದಿದ್ದು ಆಘಾತಕಾರಿ ಹಾಗೂ ಖಂಡನಾರ್ಹವಾಗಿದೆ.

ನ್ಯಾಯಾಲಯದ ತೀರ್ಪಿಗೆ ಮೊದಲೇ ಈ ಮೂವರು ಆರೋಪಿ ಸಚಿವರನ್ನು ದೋಷಮುಕ್ತರೆಂದು ಪ್ರಧಾನಿ ಹೇಳಿದ್ದು ಈ ನೆಲದ ಕಾಯ್ದೆ ಕಟ್ಟಳೆಗಳಿಗೆ ಮಾಡಿರುವ ಅವಮಾನವಾಗಿದೆ. ಇದರಿಂದ ವಾಜಪೇಯಿ ಸರಕಾರದ ನಿಜವಾದ ಕಾರ್ಯಕ್ರಮ ಬಯಲಾದಂತಾಗಿದೆ.

ಬಾಬರಿ ಮಸೀದಿ ನಾಶದ ನಂತರ ದೇಶದಲ್ಲಿ ರಕ್ತಪಾತ ನಡೆಯಿತು. ಅಪಾರ ಆಸ್ತಿ ಹಾನಿಯಾಯಿತು. ಸಾವಿರಾರು ಅಮಾಯಕರು ಕೊಲ್ಲಲ್ಪಟ್ಟರು. ಲಕ್ಷಾಂತರ ಕುಟುಂಬಗಳು ಬೀದಿಪಾಲಾದವು. ನಗರಗಳು ಹೊತ್ತಿ ಉರಿದವು. ಮುಖ್ಯವಾಗಿ ದೇಶದ ಜಾತ್ಯಾತೀತ ಜನತಾಂತ್ರಿಕ ವ್ಯವಸ್ಥೆಗೆ ಚೇತರಿಸಿಕೊಳ್ಳಲಾಗದ ಪೆಟ್ಟು ಬಿತ್ತು. ಕೋಮು ಸೌಹಾರ್ದಕ್ಕೆ ತನ್ನ ಪ್ರಾಣವನ್ನೇ ನೀಡಿದ ಮಹಾತ್ಮ ಗಾಂಧಿಯವರೊಂದಿಗೆ ಅಡ್ವಾಣಿ, ಜೋಷಿ ಅವರನ್ನು ಹೋಲಿಸುವುದು ಕುಚೋದ್ಯತನವಾಗಿದೆ. ಜನಾಂಗ ದ್ವೇಶದ ಧ್ವಂಸ ಕಾರ್ಯಾಚರಣೆಯನ್ನು ಸ್ವಾತಂತ್ರ್ಯ ಚಳುವಳಿಗೆ ಹೋಲಿಸುವುದು ಅವಿವೇಕದ ಅತಿರೇಕವಾಗಿದೆ.

ಅಡ್ವಾಣಿ, ಜೋಷಿ, ಉಮಾಭಾರತಿ ಈ ಮೂವರ ರಾಜೀನಾಮೆ ಬೇಡಿಕೆಯನ್ನು ತಿರಸ್ಕರಿಸಿರುವ ಹಾಗೂ ಧ್ವಂಸಕಾರ್ಯ, ಮಂದಿರ ನಿರ್ಮಾಣವನ್ನು ಸಮರ್ಥಿಸಿರುವ ತಮ್ಮ ಅಸಲಿ ಮುಖ ಬಯಲುಪಡಿಸಿ ಸಂಘ ಪರಿವಾರದ ಅಜೆಂಡಾ ಕುರಿತು ಯಾರಿಗೂ ಸಂದೇಹ ಉಳಿಯದಂತೆ ಮಾಡಿದ್ದಾರೆ.

ಈಗಲಾದರೂ ನಾಯ್ಡು, ಜಾರ್ಜ್, ಮಮತಾ, ಕರುಣಾನಿಧಿ, ಪಾಸ್ವಾನ್ ಇವರೆಲ್ಲ ಜಾಣಕುರುಡುತನವನ್ನು ಬಿಟ್ಟು ಬಿಜೆಪಿಯನ್ನು ಬೆಂಬಲಿಸುವ ತಮ್ಮ ನೀತಿಯನ್ನು ವಿಮರ್ಶಿಸಿಕೊಳ್ಳದಿದ್ದರೆ ಜನತೆ ಖಂಡಿತವಾಗಿ ಇವರಿಗೆ ಪಾಠ ಕಲಿಸುತ್ತಾರೆ.

ದೇಶದ ಜಾತ್ಯಾತೀತ ಪರಂಪರೆಯನ್ನು ಈ ದೇಶದ ದೇಶಪ್ರೇಮಿ ಜನತೆ ಖಂಡಿತವಾಗಿಯೂ ಎತ್ತಿ ಹಿಡಿದು ಸಂಘ ಪರಿವಾರದ ಜನಾಂಗ ದ್ವೇಷ ನಿಲುವನ್ನು ಮಣ್ಣು ಮುಕ್ಕಿಸಲಿರುವುದು ನಿಶ್ಚಿತವಾಗಿದೆ.

ವಿ.ಪಿ.ಕುಲಕರ್ಣಿ

ರಾಷ್ಟ್ರೀಯ ಪಕ್ಷದ ಮಾನ್ಯತೆ
ಚುನಾವಣಾ ಆಯೋಗದ ತಿದ್ದುಪಡಿ

ರಾಜಕೀಯ ಪಕ್ಷಗಳ ರಾಷ್ಟ್ರೀಯ ಸ್ಥಾನಮಾನಗಳನ್ನು ಮಾನ್ಯ ಮಾಡುವ ನೀತಿಗಳನ್ನು ಸರಿಪಡಿಸಿ ಚುನಾವಣಾ ಆಯೋಗವು ತಿದ್ದುಪಡಿಗಳನ್ನು ಮಾಡಿದೆ. ಲೋಕಸಭೆಯಲ್ಲಿನ ಸಾಮರ್ಥ್ಯ ಮತ್ತು ಪ್ರಾತಿನಿಧ್ಯದ ಆಧಾರದಲ್ಲಿ ಹೆಚ್ಚು ವಾಸ್ತವಿಕವಾದ ಮತ್ತು ಬದಲಾದ ರಾಷ್ಟ್ರೀಯ ಸನ್ನಿವೇಶವನ್ನು ಪರಿಗಣಿಸಿ ಬಂದಿರುವ ಚುನಾವಣಾ ಆಯೋಗದ ಈ ತಿದ್ದುಪಡಿಗಳು ಸ್ವಾಗತಾರ್ಹ.

ಲೋಕಸಭೆಯಲ್ಲಿ 3ನೇ ಅತಿದೊಡ್ಡ ಪಕ್ಷವಾಗಿದ್ದರೂ ಸಿಪಿಐ(ಎಂ) ಮಾನ್ಯತೆ ರದ್ದುಗೊಳಿಸಿದ್ದ ಹಳೆಯ ನಿಷ್ಪ್ರಯೋಜಕ ನೀತಿಗಳನ್ನು ತಿದ್ದುಪಡಿ ಮಾಡಿರುವುದರಿಂದಾಗಿ ಸಿಪಿಐ(ಎಂ) ಪುನಃ ರಾಷ್ಟ್ರೀಯ ಪಕ್ಷದ ಮಾನ್ಯತೆಯನ್ನು ಪಡೆಯಲಿದೆ. ಈ ನಿಟ್ಟಿನಲ್ಲಿ ಪಕ್ಷವು ಚುನಾವಣಾ ಆಯೋಗಕ್ಕೆ ಅರ್ಜಿಯನ್ನು ಸಲ್ಲಿಸಲಿದೆ.

ಸಂಸದೀಯ ಪ್ರಜಾಸತ್ತೆಯನ್ನು ಪ್ರೋತ್ಸಾಹಿಸುವ ದಿಕ್ಕಿನಲ್ಲಿ ಹಳೆಯ ಮತ್ತು ಅಪ್ರಾಯೋಗಿಕ ನೀತಿಗಳನ್ನು ಸರಳಗೊಳಿಸಿರುವ ಆಯೋಗದ ಕ್ರಮ ಸ್ವಾಗತಾರ್ಹ. ಇಂತಹ ಹೆಚ್ಚು ವಾಸ್ತವಿಕವಾದ ತಿದ್ದುಪಡಿಗಳನ್ನು ತರಬೇಕೆನ್ನುವ ನಿಟ್ಟನಲ್ಲಿ ಸಿಪಿಐ(ಎಂ) ಪೊಲಿಟ್‌ಬ್ಯೂರೋ ವಿವರವಾಗಿ ಚುನಾವಣಾ ಆಯೋಗದೊಂದಿಗೆ ಚರ್ಚೆ ಮಾಡಿದ್ದನ್ನು ಮತ್ತು ಆಯೋಗವು ಈ ವಾದವನ್ನು ಸಕಾರಾತ್ಮಕವಾಗಿ ಪರಿಗಣಿಸಿರುವುದನ್ನು ನೆನಪಿಸಿಕೊಳ್ಳಬಹುದು.

ಚುನಾವಣಾ ಆಯೋಗದ ತೀರ್ಮಾನದಲ್ಲೇನಿದೆ? ರಾಷ್ಟ್ರೀಯ ಪಕ್ಷದ ಮಾನ್ಯತೆ ಪಡೆಯಬೇಕಾದರೆ:

1. ಒಂದು ರಾಜಕೀಯ ಪಕ್ಷವು ನಿರ್ದಿಷ್ಟ ರಾಜ್ಯದ ವಿಧಾನಸಭೆಗೆ ಅಥವಾ ಆ ರಾಜ್ಯದಿಂದ ಲೋಕಸಭೆಗೆ ನಡೆಯುವ ಸಾರ್ವತ್ರಿಕ ಚುನಾವಣೆಗಳಲ್ಲಿ ಕನಿಷ್ಠ ಶೇ 6 ರಷ್ಟು ಮತಗಳನ್ನು ಮತ್ತು ಜೊತೆಗೆ ಆ ರಾಜ್ಯದ ವಿಧಾಸಭೆಯಲ್ಲಿ 2 ಸ್ಥಾನಗಳನ್ನು ಹೊಂದಿರಬೇಕು.
2. ಮತ್ತೊಂದು ಮಾನದಂಡವೇನೆಂದರೆ, ಒಂದು ರಾಜಕೀಯ ಪಕ್ಷವು ವಿಧಾನಸಭೆಯ ಒಟ್ಟು ಸ್ಥಾನಗಳಲ್ಲಿ ಶೇ 3 ರಷ್ಟನ್ನು ಅಥವಾ 3 ಸ್ಥಾನಗಳನ್ನು (ಯಾವುದು ಹೆಚ್ಚೋ ಅದು) ಗೆಲ್ಲುವುದು.

ಚುನಾವಣಾ ಆಯೋಗದ ಈ ತಿದ್ದುಪಡಿಯು ಐದು ನೀತಿ ಸೂತ್ರಗಳನ್ನು ಒಳಗೊಂಡಿದೆ.

1. ಶಾಸಕಾಂಗ ಅಸ್ತಿತ್ವವು ರಾಷ್ಟ್ರೀಯ ಅಥವಾ ರಾಜ್ಯ ಪಕ್ಷವೆಂದು ಮಾನ್ಯತೆ ಮಾಡಲು ಅಗತ್ಯವಾಗಿದೆ.
2. ರಾಷ್ಟ್ರೀಯ ಪಕ್ಷಕ್ಕೆ ಲೋಕಸಭೆಯಲ್ಲಿ ಮತ್ತು ರಾಜ್ಯ ಪಕ್ಷಕ್ಕೆ ವಿಧಾನಸಭೆಯಲ್ಲಿ ಅಸ್ತಿತ್ವ ಇರಬೇಕು.
3. ಯಾವುದೇ ಚುನಾವಣೆಯಲ್ಲಿ ಒಂದು ಪಕ್ಷವು ತನ್ನ ಸದಸ್ಯರ ನಡುವಿನಿಂದ ಮಾತ್ರ ಅಭ್ಯರ್ಥಿಗಳನ್ನು ನಿಲ್ಲಿಸಬಹುದು.
4. ಮಾನ್ಯತೆಯನ್ನು ಕಳೆದುಕೊಳ್ಳುವ ಪಕ್ಷಕ್ಕೆ ಪುನಃ ಚಿಹ್ನೆಯನ್ನು ಪಡೆಯಲು 6 ವರ್ಷಗಳ ಕಾಲಾವಧಿಯನ್ನು ನೀಡುವುದು.
5. ಮಾನ್ಯತೆಯನ್ನು ಚುನಾವಣೆಗಳಲ್ಲಿ ಸ್ವಂತ ಸಾಧನೆಯ ಆಧಾರದಲ್ಲಿ ನೀಡುವುದು ಮತ್ತು ಇದು ಮತ್ತೊಂದು ಮಾನ್ಯತ ಪಕ್ಷದ ಕೂಡಿಬಂದ ಗುಂಪಿನ ಕಾರಣಕ್ಕಾಗಿ ಅಲ್ಲ.

ಮಹಿಳೆಯರ ಮತ್ತು ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ ಹಾಗೂ ಆರ್ಥಿಕ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಒತ್ತಾಯಿಸಿ ನವೆಂಬರ್ 22 ರಂದು ಅಹಮದಾಬಾದಿನಲ್ಲಿ AIDWA ನೇತೃತ್ವದಲ್ಲಿ ನಡೆದ ಮಹಿಳೆಯರ ರ್‍ಯಾಲಿ



ವಿನಾಶದತ್ತ ಅಡಿಕೆ, ತೆಂಗು, ರಬ್ಬನ್ ಬೆಳೆಗಾರರು – ಸಾವಿ

ಕರಾವಳಿಯ ದ.ಕನ್ನಡ, ಉಡುಪಿ, ಉ.ಕನ್ನಡ, ಮಲೆನಾಡಿನ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು ಹಾಗೂ ಬಯಲುಸೀಮೆಯ ತುಮಕೂರು ಜಿಲ್ಲೆ, ಚಿತ್ರದುರ್ಗ ಜಿಲ್ಲೆಯ ಹಿರಿಯೂರು, ಹೊಸದುರ್ಗ ತಾಲೂಕುಗಳಲ್ಲಿ ಅಡಿಕೆ, ತೆಂಗು, ಭತ್ತ ಇವು ಮುಖ್ಯವಾದ ಬೆಳೆಗಳು. ಮಲೆನಾಡಿನಲ್ಲಿ ರಬ್ಬರ್, ಕರಿಮೆಣಸು ಮತ್ತಿತರ ಸಾಂಬಾರ ಪದಾರ್ಥಗಳು ಮೇಲೆ ಹೇಳಿದ ಬೆಳೆಗಳ ಜೊತೆಗೆ ಮುಖ್ಯ ಬೆಳೆಗಳು. ಈ ಬೆಳೆಗಳು ಈ ಜಿಲ್ಲೆಯ ಅರ್ಥ ವ್ಯವಸ್ಥೆಯ ನಾಡಿಯಂತಿವೆ. ಇದನ್ನೇ ಹೊಂದಿಕೊಂಡು ಲಕ್ಷಾಂತರ ಕುಟುಂಬಗಳು ಬದುಕುತ್ತಿವೆ.

ಈ ಕೃಷಿಗಾಗಿ ನೀರಾವರಿ-ಕೆರೆಬಾವಿ, ಕೊಳವೆಬಾವಿ-ಪಂಪ್‌ಸೆಟ್, ಸ್ಪಿಂಕ್ಲರ್‌ಗಳಿಗಾಗಿ ಒಬ್ಬೊಬ್ಬ ರೈತರೂ ಲಕ್ಷಾಂತರ ರೂಪಾಯಿ ಸಾಲ ಮಾಡಿದ್ದಾರೆ. ಇದಲ್ಲದೆ ಅವರು ವಿದ್ಯುಚ್ಛಕ್ತಿಯ ಜೋಡಣೆ ಮತ್ತು ವಿದ್ಯುತ್ ಬಿಲ್ಲನ್ನು ಕಾಲಕಾಲಕ್ಕೆ ಪಾವತಿ ಮಾಡಬೇಕಾಗಿದೆ. ಬೇಸಾಯಕ್ಕಾಗಿ ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳಿಗಾಗಿ ಕಾಲಾನುಕಾಲಕ್ಕೆ ಹಣವನ್ನು ವೆಚ್ಚ ಮಾಡಬೇಕಾಗಿದೆ. ಈ ಕೃಷಿಯ ಪರಿಣಾಮವಾಗಿ ಲಕ್ಷಗಟ್ಟಲೆ ಕೃಷಿ ಕೂಲಿಕಾರರಿಗೆ ಕೆಲಸ ಸಿಕ್ಕಿ ಅವರಿಗೆ ಜೀವನೋಪಾಯ ಒದಗಿದೆ.

ಈ ಬೆಳೆಗಳನ್ನು ಬೆಳೆಯುವ ರೈತರಿಗೆ ಪಂಚವಾರ್ಷಿಕ ಯೋಜನೆಗಳ ಮೂಲಕ ನದಿಗಳಿಗೆ ಅಣೆಕಟ್ಟು ಕಟ್ಟಿ ವ್ಯವಸಾಯಕ್ಕೆ ಅಗತ್ಯವಿರುವ ನೀರನ್ನು ಒದಗಿಸುವುದು, ನಮ್ಮ ದೇಶದಲ್ಲಿ ರಾಸಾಯನಿಕ ಗೊಬ್ಬರಗಳನ್ನು ಕ್ರಿಮಿನಾಶಕ ವಸ್ತುಗಳನ್ನು ಉತ್ಪಾದನೆ ಮಾಡತಕ್ಕಂತಹ ಕಾರ್ಖಾನೆಗಳನ್ನು ಸ್ಥಾಪಿಸಿ ಬೆಳೆಸುವುದು, ಇವುಗಳನ್ನೆಲ್ಲಾ ಪಡೆದು ಉಪಯೋಗಿಸಲು ಸಾಧ್ಯವಾಗುವಂತೆ ಕೇಂದ್ರ ಸರ್ಕಾರವು ಬ್ಯಾಂಕ್‌ಗಳ ಮೂಲಕ ಸರಳ ಬಡ್ಡಿ ದರದಲ್ಲಿ ಹಣಕಾಸಿನ ಸಾಲವನ್ನು ರೈತರಿಗೆ ಸಿಕ್ಕುವಂತೆ ಮಾಡುವುದು, ಒಮ್ಮೊಮ್ಮೆ ಅತಿ ಉತ್ಪಾದನೆಯಾಗಿ ಬೆಲೆ ಕುಸಿದು ರೈತರಿಗೆ ಹಾನಿಯಾಗುವ ಸಂದರ್ಭದಲ್ಲಿ ಬೆಂಬಲಿತ ಬೆಲೆಯನ್ನು ನಿಗದಿ ಮಾಡಿದ ಸರಕಾರವೇ ಆ ಉತ್ಪನ್ನಗಳನ್ನು ಖರೀದಿ ಮಾಡುತ್ತಿತ್ತು ಎಂಬುದನ್ನು ಈಗ ನೆನಪಿಸುವುದು ಅಗತ್ಯವಾಗಿದೆ. ಇದರಿಂದಾಗಿ ತಮ್ಮ ಭವಿಷ್ಯ ಜೀವನ ಉತ್ತಮವಾಗುತ್ತದೆ ಎಂದು ರೈತರು ಕನಸು ಕಾಣುತ್ತಿದ್ದರು.

ಬದಲಾದ ಸ್ಥಿತಿ: 1991 ರ ನಂತರ ಜಾಗತಿಕ ಪರಿಸ್ಥಿತಿಯಲ್ಲಿ ತೀವ್ರವಾದ ಬದಲಾವಣೆಯಾಗಿ ಸೋವಿಯತ್ ಒಕ್ಕೂಟದ ನಾಯಕತ್ವದ ಸಮಾಜವಾದಿ ಶಿಬಿರ ಇಲ್ಲದಂತಾಗಿ ಸಾಮ್ರಾಜ್ಯಶಾಹಿಗಳು ಹಿಂದೆ ಯಾವುದನ್ನು ಸಾಧಿಸಲು ಆಗಲಿಲ್ಲವೋ ಅದನ್ನು ಈಗ ವಿಶ್ವಬ್ಯಾಂಕ್, ಜಾಗತಿಕ ಹಣಕಾಸು ಸಂಸ್ಥೆ, ವಿಶ್ವ ವ್ಯಾಪಾರೀ ಸಂಘಟನೆಗಳನ್ನು ಉಪಯೋಗಿಸಿ ಬಹುರಾಷ್ಟ್ರೀಯ ಸಂಸ್ಥೆಗಳ ಮೂಲಕ ಸಾಧಿಸಲು ಹೊರಟಿದ್ದಾರೆ. ಆದ್ದರಿಂದಲೇ ಈಗ ಮೇಲೆ ಹೇಳಿದ ಬೆಳೆಗಳ ಉತ್ಪನ್ನಗಳ ಬೆಲೆ ತೀರಾ ಕೆಳಗಿಳಿದಿದ್ದು ರಾಜ್ಯದಲ್ಲಿ ಲಕ್ಷಾಂತರ ರೈತ ಕುಟುಂಬಗಳು ಇಂದು ಕಂಗಾಲಾಗಿವೆ. ತಮ್ಮ ಜೀವನ ನಿರ್ವಹಣೆ, ಕೃಷಿ ಕೆಲಸಗಳನ್ನು ನಡೆಸುವುದು, ಮಾಡಿರುವ ಸಾಲಗಳ ಮರುಸಂದಾಯ ಇತ್ಯಾದಿ ರೈತರ ಮುಂದೆ ಭೂತಾಕಾರದ ಸಮಸ್ಯೆಗಳಾಗಿ ಬಂದು ನಿಂತಿವೆ.

ಪರಿಣಾಮವಾಗಿ ಶ್ರೀಲಂಕಾ, ಬಾಂಗ್ಲಾದೇಶ, ಮಲೇಶಿಯಾ, ಇಂಡೋನೇಶ್ಯಾ, ತಾಯ್ಲೆಂಡ್‌ನಂತಹ ರಾಷ್ಟ್ರಗಳಿಂದ ಈ ಉತ್ಪನ್ನಗಳು ನಮ್ಮ ದೇಶದ ಮಾರುಕಟ್ಟೆಯಲ್ಲಿ ಬಂದು ಸುರಿಯುತ್ತಿವೆ. ಈ ಸುರಿಸುವ ಕೆಲಸವನ್ನು ಮಾಡುತ್ತಿರುವುದು ಮತ್ತು ನಿಯಂತ್ರಿಸುತ್ತಿರುವುದು ಬಹುರಾಷ್ಟ್ರೀಯ ಸಂಸ್ಥೆಗಳಾಗಿವೆ.

ಈಗಿನ ಕೇಂದ್ರ ಸರಕಾರದ 'ಸ್ವದೇಶಿ' ಹೆಸರಿನಲ್ಲಿ ವಿಶ್ವ ವ್ಯಾಪಾರ ಸಂಘಟನೆ, ಜಾಗತಿಕ ಬ್ಯಾಂಕ್, ಅಂತರ್ರಾಷ್ಟ್ರೀಯ ಹಣಕಾಸು ಸಂಸ್ಥೆಗಳ ನಿರ್ದೇಶನದ ಪ್ರಕಾರ ನಡೆಯುತ್ತಿರುವ ಆರ್ಥಿಕ ಸುಧಾರಣೆಯ ಪರಿಣಾಮವಾಗಿ ಈ ನೀತಿಯು ಅಡಿಕೆ, ತೆಂಗು, ಜೊತೆಗೆ ಬೆಳೆಯಬಹುದಾದ ಎಲ್ಲಾ ಉಪಬೆಳೆಗಳ ಹಣೆಬರಹವೂ ಇದೇಆಗಿದೆ.

ಕಳೆದ ಮೂರು ದಶಕಗಳಿಂದ ಅಡಿಕೆ ಬೆಳೆಯ ಏರಿಳಿತದಿಂದ ಸಿಹಿಕಹಿ ಉಂಡ ರೈತ ತೆಂಗು, ಬಾಳೆ, ಕೊಕ್ಕೊ, ರಬ್ಬರ್ ಜೊತೆಗೆ ಉಪಬೆಳೆಯನ್ನಾಗಿ ಏಲಕ್ಕಿ, ಕರಿಮೆಣಸು, ಲವಂಗ, ಜಾಯಿಕಾಯಿಯಂತಹ ಕೃಷಿಗೆ ಕೈಹಾಕಿ ಕೈಸುಟ್ಟುಕೊಂಡಿದ್ದಾನೆ. ಇವುಗಳೆಲ್ಲದರ ಬೆಲೆಯೂ ತೀರಾ ಕುಸಿದಿದೆ. ಉಚ್ಛ್ರಾಯ ಸ್ಥಿತಿಯಲ್ಲಿ ಒಮ್ಮೆ ಗಗನಕ್ಕೇರಿದ ಚಿನ್ನದ ಬೆಲೆ ಈಗ ಪಾತಾಳಕ್ಕಿಳಿದು ಮಣ್ಣು ಸೇರುತ್ತಿದೆ. ಅದನ್ನು ನಂಬಿದ ರೈತ ಈಗ ದಿಕ್ಕು ಕಾಣದಂತಾಗಿದ್ದಾನೆ.

ಅಡಿಕೆ, ತೆಂಗು ಬೆಳೆಗಾರರ ಮುಂದಿರುವ ಜೀವನ ಸಮಸ್ಯೆಗಳು

ಕೆ.ಆರ್.ಶ್ರೀಯಾನ್


ಲಕ್ಷಾಂತರ ಮಂದಿ ಕೃಷಿ ಕೂಲಿಗಾರರಿಗೆ ಕೂಡಾ ಕೆಲಸವಿಲ್ಲದೆ ಅವರ ಜೀವನ ದುರ್ಭರವಾಗಿದೆ. ಇದಕ್ಕೆ ಈಗಿನ ಕೇಂದ್ರ ಸರ್ಕಾರವು ಅನುಸರಿಸುತ್ತಿರುವ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ನೀತಿಗಳೇ ಕಾರಣವಾಗಿವೆ ಎಂಬುದನ್ನು ಬೆಳೆಗಾರರು ತಿಳಿದುಕೊಳ್ಳಬೇಕಾಗಿದೆ. ಕೇಂದ್ರ ಸರ್ಕಾರವು ವಿಶ್ವವ್ಯಾಪಾರ ಸಂಘಟನೆಯ ಒಪ್ಪಂದದ ಪ್ರಕಾರ ಆಮದು ಸುಧಾರಣೆಗೆ 2004 ರ ವರೆಗೆ ಅವಕಾಶವಿದ್ದರೂ ಸಹ 714 ವಸ್ತುಗಳನ್ನು ಯಾವುದೇ ನಿಯಂತ್ರಣವಿಲ್ಲದೆ ವಿದೇಶಗಳಿಂದ ಆಮದು ಮಾಡಲು ಅವಕಾಶ ಕೊಟ್ಟಿದೆ. ಮಾತ್ರವಲ್ಲ ಮುಂದಿನ ವರ್ಷ ಇನ್ನೂ 715 ವಸ್ತುಗಳು ವಿದೇಶಗಳಿಂದ ಬರಲಿವೆ. ವಿದೇಶಗಳಿಂದ ಈಗಾಗಲೇ ಕೃಷಿ ಉತ್ಪನ್ನಗಳು ದೇಶದ ಮಾರುಕಟ್ಟೆಗೆ ಬಂದು ಬಿದ್ದಿವೆ. ಇವುಗಳನ್ನೇ ಬೆಳೆಯುವ ನಮ್ಮ ರೈತರು ತಮ್ಮ ಉತ್ಪನ್ನಗಳನ್ನು ಎಲ್ಲಿ ಮಾರಬೇಕು?

ಕೇಂದ್ರ ಸರ್ಕಾರದ ಈ ನೀತಿಯ ಪರವಾಗಿರುವ ಬರಹಗಾರರೂ, ಪತ್ರಕರ್ತರೂ ಅಡಿಕೆ, ತೆಂಗು, ರಬ್ಬರ್ ಸಾಮ್ರಾಜ್ಯಶಾಹಿ ದೇಶಗಳಲ್ಲಿ ಬೆಳೆಯುವುದಿಲ್ಲ. ಆ ಕಾರಣದಿಂದ ಈ ರೈತರ ಸಮಸ್ಯೆಗಳಿಗೂ, ಕೇಂದ್ರ ಸರಕಾರಕ್ಕೂ ಸಂಬಂಧವಿಲ್ಲವೆಂದು ವಾದ ಮಾಡುತ್ತಿದ್ದಾರೆ. ರೈತರಿಗೆ ಸುಲಭ ಬಡ್ಡಿಯ ಬ್ಯಾಂಕ್ ಸಾಲ ನಿಲ್ಲಿಸಿರುವುದು, ರಾಸಾಯನಿಕ ಗೊಬ್ಬರಗಳು, ಕ್ರಿಮಿನಾಶಕ ವಸ್ತುಗಳ ಉತ್ಪಾದನೆ ಮಾಡುವಂತಹ ಕೈಗಾರಿಕೆಗಳನ್ನು ಮುಚ್ಚಿಸುವ ಪರಿಸ್ಥಿತಿಗೆ ತಂದಿರುವುದು ಈ ಆರ್ಥಿಕ ನೀತಿಯ ಫಲವೇ ಆಗಿದೆ. ಈ ವಿಶ್ವವ್ಯಾಪಾರ ಸಂಘಟನೆಯ ಒಪ್ಪಂದದ ಕಾರ್ಯಗತವಾಗುತ್ತಿದ್ದು, ಇದು ಬದಲಾಗದೆ ರೈತ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರವಿಲ್ಲ.

ಅನೇಕ ವರುಷಗಳಿಂದ ಅಡಿಕೆ ಬೆಳೆಯೊಂದನ್ನೇ ನಂಬಿಕೊಂಡಿರುವ ಲಕ್ಷಾಂತರ ಕುಟುಂಬಗಳು ಬೆಲೆ ಕುಸಿತದಿಂದಾಗಿ ತಾವೇ ಕುಸಿದು ಬೀಳುವಂತಾಗಿದೆ. ಕಳೆದ ವರ್ಷ ಅಡಿಕೆಗೆ ಒಂದು ಕೆ.ಜಿ.ಗೆ 130 ರೂ. ಇದ್ದದ್ದು 25.30 ರೂ.ಗಳಿಗೆ ಕುಸಿದಿದೆ. ಪ್ರತಿ ಹಂತದಲ್ಲೂ ಒಂದಿಲ್ಲೊಂದು ಸಮಸ್ಯೆಯನ್ನು ಎದುರಿಸುತ್ತಿರುವ ಅಡಿಕೆ ಬೆಳೆಗಾರರಿಗೆ ಹಣ ಕೈಗೆ ಸಿಗುವವರೆಗೆ ಅನಿಶ್ಚಿತತೆ ಇರುತ್ತದೆ. ಅಡಿಕೆ ಕೃಷಿ ಹಲವಾರು ರೋಗಗಳಿಂದ, ಅತಿವೃಷ್ಟಿ, ಅನಾವೃಷ್ಟಿಗಳಿಂದ ಬೆಲೆಗಳಲ್ಲಿ ವಿಪರೀತ ಏರಿಳಿತಗಳಿಂದ ಉಂಟಾಗುವ ಅನಿಶ್ಚಿತತೆಯ ಮಧ್ಯೆಯೇ ರೈತ ಬಾಳಬೇಕಾಗಿದೆ. ಇದೊಂದು ಸೂಕ್ಷ್ಮ ಬೆಳೆ. ಬೆಲೆಗಳ ಕುಸಿತ ಒಂದು ಕಡೆಯಾದರೆ ಇನ್ನೊಂದು ಕಡೆ ಭೀಕರ ರೋಗಗಳಿಂದ ಇಡೀ ಅಡಿಕೆ ತೋಟಗಳೇ ಸರ್ವನಾಶವಾದ ಉದಾಹರಣೆಗಳಿವೆ. ಕೊಳೆಯಂತಹ ರೋಗಗಳು ಬಂದವೆಂದರೆ ವರ್ಷದ ಪೂರ್ಣ ಬೆಳೆಯನ್ನೇ ನಾಶ ಮಾಡಿ ಹೋಗುತ್ತವೆ. ಭಾರಿ ಹಣತರುವ ಬೆಳೆಯೆಂದು ಪ್ರಚಾರವಿದ್ದರೂ ಅದನ್ನು ಬೆಳೆಸುವ ರೈತರ ಸಮಸ್ಯೆಗಳಿಗೆ ಕೊನೆಯೇ ಇಲ್ಲದಂತಾಗಿದೆ. ಈ ಕೃಷಿಯನ್ನು ನಾಶ ಮಾಡುವ ಮಾರಕ ರೋಗಗಳಿಗೆ ಈ ತನಕವು ಪೂರ್ಣ ಪರಿಹಾರ ಕಂಡು ಹಿಡಿಯಲಾಗಿಲ್ಲ. ಸರಕಾರಗಳು ಈ ಬಗ್ಗೆ ಗಂಭೀರತೆ ತಾಳಿದಂತಿಲ್ಲ. ಈ ಬಗ್ಗೆ ಸಮಗ್ರ ಅಧ್ಯಯನ ನಡೆಸಿ, ರೈತರನ್ನು ಈ ಕೆಡುಕುಗಳಿಂದ ರಕ್ಷಿಸದಿದ್ದರೆ ಅವರ ಭವಿಷ್ಯವೇ ಕರಾಳಮಯವಾಗುತ್ತದೆ.

ಅಡಿಕೆಯಷ್ಟೇ ಪ್ರಮುಖವಾದ ತೆಂಗಿನ ಬೆಳೆಯು ಈಗ ನೆಲಕಚ್ಚಿದೆ. ಒಂದಕ್ಕೆ ರೂ. 2.50-3.00 ಗೆ ಕೇಳುವವರಿಲ್ಲದಂತಾಗಿದೆ.

ಇಂತಹ ಗಂಭೀರ ಪರಿಸ್ಥಿತಿಯಲ್ಲಿ ಸಂಕಷ್ಟಕ್ಕೆ ಸಿಲುಕಿದ ರೈತರನ್ನು ಪಾರು ಮಾಡಬೇಕಾಗಿರುವುದು ಸರಕಾರದ ಜವಾಬ್ದಾರಿ. ಅಡಿಕೆ,ತೆಂಗು ಬೆಳೆಗಾರರು



ಸಹಕಾರಿ ಸಂಘಗಳಿಂದ ಮತ್ತು ಬ್ಯಾಂಕ್‌ಗಳಿಂದ ಕೃಷಿಗಾಗಿ ಸಾಲ ಪಡೆದುಕೊಂಡಿದ್ದಾರೆ. ಅದನ್ನು ಅವರು ಹಿಂದಿರುಗಿಸುವ ಪರಿಸ್ಥಿತಿಯಲ್ಲಿಲ್ಲ. ಆದ್ದರಿಂದ ಈ ಸಾಲಗಳನ್ನು ದೀರ್ಘಾವಧಿ ಸಾಲಗಳಾಗಿ ಪರಿವರ್ತಿಸಬೇಕು. ಪರಿಸ್ಥಿತಿ ಸುಧಾರಿಸುವ ತನಕ ಅಡಿಕೆಗೆ ವಿಧಿಸಲಾಗಿರುವ ಶೇಕಡಾ 4 ರ ಮಾರಾಟ ತೆರಿಗೆ, ಮಾರುಕಟ್ಟೆ ಶುಲ್ಕ ಮತ್ತು ವಹಿವಾಟು ತೆರಿಗೆಗಳನ್ನು ಸರಕಾರ ಅಮಾನತುಗೊಳಿಸಬೇಕು. ಅಡಿಕೆ ಮತ್ತು ತೆಂಗು ಬೆಳೆಗಳಿಗೆ ಬೆಂಬಲ ಬೆಲೆಯನ್ನು ಸರಕಾರ ಘೋಷಿಸಬೇಕು. ಅಡಿಕೆ ವ್ಯಾಪಾರಸ್ಥರು, ಕಮಿಷನ್ ಏಜೆಂಟರುಗಳು ಈ ಪರಿಸ್ಥಿತಿಯ ದುರ್ಲಾಭ ಪಡೆಯಲು ಬೆಲೆ ಇನ್ನಷ್ಟು ಕುಸಿಯುವಂತೆ ಮಾಡುವ ಅವರ ಪಿತೂರಿಯನ್ನು ಈ ಮೂಲಕ ತಡೆಗಟ್ಟಬಹುದು. ಕೇಂದ್ರ ಸರಕಾರವು ವಿದೇಶಗಳಿಂದ ಆಮದಾಗುವ ಕೃಷಿ ಉತ್ಪನ್ನಗಳಿಗೆ ಶೇ 300 ರಷ್ಟು ಸುಂಕ ವಿಧಿಸಬೇಕು. ಈ ರೀತಿಯಾಗಿ ಕೆಲವು ತುರ್ತುಕ್ರಮಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಹಿಸುವಂತೆ ಅಡಿಕೆ ಮತ್ತು ತೆಂಗು ಬೆಳೆಗಾರರು ಒಗ್ಗಟ್ಟಿನಿಂದ ಇಂದು ಒತ್ತಾಯಿಸಬೇಕು.

ಕೇಂದ್ರ ಸರಕಾರವು ತನ್ನ ರೈತ ವಿರೋಧಿ ನೀತಿಯನ್ನು ಕೈಬಿಡಬೇಕೆಂದೂ ಆಗ್ರಹಪಡಿಸಲು ರೈತ ಸಮುದಾಯ ಒಗ್ಗಟ್ಟಾಗಿ ಚಳುವಳಿಯನ್ನು ನಡೆಸಬೇಕಾಗಿದೆ. ಇದೇ ಡಿಸೆಂಬರ್ ತಾ. 15, 2000ದಂದು ಮಂಗಳೂರು ಡಾನ್‌ಬೋಸ್ಕೊ ಹಾಲ್‌ನಲ್ಲಿ ನಡೆಯಲಿರುವ ಅಡಿಕೆ ಮತ್ತು ತೆಂಗು ಬೆಳೆಗಾರರ ರಾಜ್ಯ ಮಟ್ಟದ ಸಂಯುಕ್ತ ಸಮಾವೇಶವು ಸೂಕ್ತ ಕಾರ್ಯಕ್ರಮವನ್ನು ರೂಪಿಸಲೆಂದು ಹಾರೈಸೋಣ.



ತೆಂಗು ಬೆಳೆಗಾರರ ರಕ್ಷಿಸಿ ಕಾರ್ಯಕ್ರಮದಲ್ಲಿ ಪ್ರಾಂತ ರೈತ ಸಂಘದ ರಾಮಚಂದ್ರ ಉಚ್ಚಿಲ್, ಬಿ.ಎಂ.ಭಟ್ ಮತ್ತಿತರರು

...ತ್ತ ಕೃಷಿ ಕೂಲಿ ಕಾರ್ಮಿಕರು



...ಡಿಕೆ ಒಂದು ಪ್ರಮುಖ ವಾಣಿಜ್ಯ ಬೆಳೆ. ದ.ಕ ...ಲ್ಲೆಯಲ್ಲಿ ಇದುವೇ ರೈತರ ಜೀವನಾಡಿ. ಅಡಿಕೆ ...ಮ್ಮ ಆಚರಣೆಗಳು, ಸಂಸ್ಕೃತಿಯ ಒಂದು ಅಂಗವೂ ...ಗಿದೆ. ಅವರ ಪೂಜೆ-ಪುನಸ್ಕಾರ, ಹುಟ್ಟು, ಸಾವು, ...ದುವೆ ಎಲ್ಲಾ ಸಮಾರಂಭಗಳಲ್ಲಿ ಪ್ರಾಧಾನ್ಯತೆ ...ಡೆಯುವ ಈ ಅಡಿಕೆಯನ್ನು ಬೆಳೆಸುವ ಬೆಳೆಗಾರರು ...ಂದು ಅವನತಿಯತ್ತ ಸಾಗುತ್ತಿದ್ದಾರೆ. ಇಲ್ಲಿ ಅಡಿಕೆ ...ಳೆಗಾರರು ಈ ಬೆಳೆಯ ಜೊತೆಗೆ ತೆಂಗು, ರಬ್ಬರ್ ...ಳೆಸುತ್ತಾರೆ. ಆದರೆ ಈ ಎಲ್ಲಾ ಕೃಷಿ ಉತ್ಪನ್ನಗಳ ...ಲೆ ಇಳಿದು ರೈತರು ಬದುಕಲಾರದ ಸ್ಥಿತಿ ...ಲುಪಿದ್ದಾರೆ.

ಈ ಕೃಷಿಕರಿಂದಾಗಿ ಲಕ್ಷಾಂತರ ಕೃಷಿ ...ಲಿಕಾರ್ಮಿಕರು ತಮ್ಮ ಕುಟುಂಬವನ್ನು ...ಕುತ್ತಿದ್ದಾರೆ. ಆದರೆ ಅಡಿಕೆ ಬೆಳೆಗಾರರ ...ವನತಿಯಿಂದ ಈ ಕೃಷಿ ಕೂಲಿ ಕಾರ್ಮಿಕರು ...ಕ್ಕೆಟ್ಟು ಭವಿಷ್ಯದ ಚಿಂತೆ ಮಾಡುತ್ತಿದ್ದಾರೆ.

ಭೂಸುಧಾರಣೆ ಬರುವುದಕ್ಕಿಂತ ಮೊದಲು ...ವೇ ಜನರ ಬೆಳೆ ಆಗಿದ್ದ ಈ ಅಡಿಕೆ, ಇಂದು ...ಲ್ಲಾ ಭತ್ತ ಬೆಳೆಯುವ ಗದ್ದೆಗಳಲ್ಲಿ ಗುಡ್ಡ, ಬೆಟ್ಟದಲ್ಲಿ ...ಗು ಕಂಗಿನ ಮರಗಳು ಕಂಗೊಳಿಸುತ್ತಿವೆ. ಅಡಿಕೆ ...ಳೆ ಹೆಚ್ಚಿದಂತೆ ಉಪಯೋಗವು ಹೆಚ್ಚಾಗಿದೆ. ...ರತದಲ್ಲಿ ಎಲ್ಲಾ ಹೋಟೆಲುಗಳ ಮುಂದೆ, ...ಾರ್ಕೇಟುಗಳಲ್ಲಿ, ಬಸ್ ನಿಲ್ದಾಣ ಮೊದಲಾದ ...ದೇಶಗಳಲ್ಲಿ ಪಾನ್‌ಸ್ಟಾಲ್‌ಗಳು ಇವೆ. ಇಲ್ಲಿ ಎಲ್ಲಾ ...ಡಿಕೆ ಅನಿವಾರ್ಯ.

ಹೀಗಿದ್ದೂ ಅಡಿಕೆಯ ಬೆಲೆ ಕೇಂದ್ರ ಸರ್ಕಾರದ ...ಮದು ಮುಕ್ತ ನೀತಿಯ ಬಲೆಗೆ ಸಿಲುಕಿ ತುಂಬಾ ...ಇದಿದೆ. ಇನ್ನು ಕೃಷಿ ಮಾಡಲು ಮಾತ್ರವಲ್ಲ, ರೈತರು ...ದಕಲು ಕಷ್ಟವಾದ ಸ್ಥಿತಿ ನಿರ್ಮಾಣವಾಗಿದೆ.

ಉತ್ತರ ಕರ್ನಾಟಕದ ಕಡೆ ಗೋಟು ಅಡಿಕೆ ...ಡುವುದಿಲ್ಲ. ಕರಿ ಅಡಿಕೆಯನ್ನು ತಯಾರಿಸುತ್ತಾರೆ. ...ದಕ್ಕೆ ಪ್ರತ್ಯೇಕವಾದ ಬೆಲೆ ಸಿಗುತ್ತದೆ.

ಸುಮಾರು 20 ವರ್ಷಗಳ ಮೊದಲು 1 ಕೆ.ಜಿ.ಗೆ ...ಡಿಕೆಗೆ ರೂ. 12 ರಿಂದ 15 ಇತ್ತು. ನಂತರ ...ತ್ಪಾದನಾ ವಸ್ತುಗಳಿಗೆ ಬೆಲೆ ಏರಿದಂತೆ ಅಡಿಕೆಯ ...ರೆಯು ಏರಿತು. ಕಳೆದ ವರ್ಷ ಒಂದು ಕೆಜಿಗೆ ...0 ರಿಂದ 170 ರ ತನಕ ಇತ್ತು.

ಅಡಿಕೆ ಬೆಳೆಗಾರರ ಸಂಕಷ್ಟದ ಸಮಯ ...ಸದ್ಭಾವನಂತೆ ಅಡಿಕೆ ಬೆಳೆಗಾರರೇ ಸ್ಥಾಪಿಸಿದ ...ಸ್ಥೆಯೇ ಕ್ಯಾಂಪ್ಕೋ, ಈಗ ಆಮದು ಮುಕ್ತ ನೀತಿಯ ...ಾಟೆಯಲ್ಲಿ ಕ್ಯಾಂಪ್ಕೋವು ಏನೂ ಮಾಡಲಾರದ ... ನಿರ್ಮಾಣವಾಗಿದೆ.

ಈ ವರ್ಷ ಅಡಿಕೆಯ ಬೆಲೆ ಒಂದು ಕೆ.ಜಿ.ಗೆ .... 40 ಕ್ಕೆ ಇಳಿದಿದೆ. (ವಿದೇಶಿ ಅಡಿಕೆ ರೂ. 40 ...ಬರುತ್ತಿರುವಾಗ ದೇಶಿಯ ಅಡಿಕೆಗೆ ಬೆಲೆ ...ಎಂದ?) ರೈತರ ದುಡಿತದ ಖರ್ಚೆ ಬಾರದ ರೀತಿ ...ರಂತ ಬಂದೊದಗಲು ಅನುಮತಿ ನೀಡಿದ ಕೇಂದ್ರ ...ಸರ್ಕಾರ ಅಡಿಕೆ ಬೆಳೆಗಾರರನ್ನು ಇಲ್ಲಿ ...ಡಿಯುತ್ತಿರುವ ಲಕ್ಷಾಂತರ ಕಾರ್ಮಿಕರನ್ನು ಬಲಾತ್ಕಾರವಾಗಿ ಕೊಲ್ಲುತ್ತಿದೆ.

ಕೇಂದ್ರ ಸರ್ಕಾರ ಜಾರಿ ಮಾಡಿದ ಆಮದು ನಿರ್ಬಂಧ ತೆಗೆದ 714 ವಸ್ತುಗಳಲ್ಲಿ ಈ ಅಡಿಕೆ, ತೆಂಗು ಕೂಡ ಸೇರಿದೆ.

ಕಾಂಗ್ರೆಸ್-ಬಿಜೆಪಿ ಯಾರ ಪರ?

ಅಡಿಕೆ ಕೇವಲ ಜಗಿದು ಬಿಸಾಡುವ ಬೆಳೆ ಆದರೂ ಲಕ್ಷಾಂತರ ಕುಟುಂಬಗಳನ್ನು ಸಾಕುತ್ತಿದ್ದ ಬೆಳೆ ಆಗಿದೆ. ಕೆಲವು ಮದ್ದು ಕಲರುಗಳಿಗೆ ಉಪಯೋಗವಿರುವ ಈ ಬೆಳೆ ಇಂದು ಈ ಪರಿ ಆದೀತೆಂದು ಅಡಿಕೆ ಬೆಳೆಗಾರ ಯೋಚಿಸಿರಲಿಕ್ಕಿಲ್ಲ. ಆದರೆ ಕರ್ನಾಟಕ ಪ್ರಾಂತ ರೈತ ಸಂಘ ಈ ಹಿಂದೆಯೇ ರೈತರಿಗೆ ಎಚ್ಚರಿಕೆ ನೀಡಿತ್ತು. ಬಿಜೆಪಿ, ಕಾಂಗ್ರೆಸ್ ಪಕ್ಷಗಳು ಅಧಿಕಾರಕ್ಕೆ ಬಂದರೆ ರೈತರು ಕಾರ್ಮಿಕರು ಸಂಕಷ್ಟಕ್ಕೆ ಒಳಗಾಗಲಿದ್ದಾರೆ. ಈ

ಬಿ.ಎಂ.ಭಟ್, ಬೆಳ್ತಂಗಡಿ

ಬಂಡವಾಳಶಾಹಿ ಪಕ್ಷಗಳು ಈಗ ಸಾಮ್ರಾಜ್ಯಶಾಹಿಗಳಿಗೆ ಮಣಿದಿದ್ದಾರೆ. ಆದರೆ ದ.ಕ.ದಲ್ಲಿ ಅಡಿಕೆ ಬೆಳೆಗಾರರಿಗೆ ಪ್ರಿಯವಾದ ಪಕ್ಷ ಬಿಜೆಪಿ ಕೂಡಾ ಆಗಿತ್ತು. ಈ ಬಿಜೆಪಿ ಕಾಂಗ್ರೆಸ್‌ಗಳು ಎಂದೂ ರೈತರ ಪರವಾಗಿಲ್ಲ ಎಂಬುದಕ್ಕೆ ರೈತ ಸಮುದಾಯವು ಕಾರ್ಮಿಕ ಸಂಘಟನೆಗಳ ವಿರೋಧಗಳ ನಡುವೆಯೇ ಡಬ್ಲ್ಯುಟಿಓ ಒಪ್ಪಂದಕ್ಕೆ ಒಪ್ಪಿಗೆ ನೀಡಿದ್ದಾಗಿದೆ. ಈಗ ರೈತರು ಈ ಬಂಡವಾಳಶಾಹಿ ಪಕ್ಷಗಳಿಂದ ಹಿಂದೆ ಸರಿಯುತ್ತಿದ್ದಾರೆ.

ರೈತರ ಉತ್ಪಾದನಾ ಸಲಕರಣೆಗಳಿಗೆ, ಪೈಪ್, ಸ್ಪಿಂಕ್ಲರ್‌ಗಳಿಗೆ ವಿದ್ಯುತ್‌ಗೆ ಪಂಪ್ ಸೆಟ್ ಗೆ ದುಬಾರಿ ಬೆಲೆ ಏರಿಸಿ ಸಬ್ಸಿಡಿ ಕೂಡಾ ರದ್ದುಪಡಿಸಿ ರಸಗೊಬ್ಬರಗಳ ದರವನ್ನೂ ಏರಿಸಿದೆ. ಇದು ಯಾರ ಪರವಾಗಿರುವ ಸರಕಾರ ಎಂಬುದನ್ನು ಈ ಪರಿಯಿಂದ ಅರ್ಥ ಮಾಡಿಕೊಳ್ಳಲು ರೈತ ತಯಾರಾಗಬೇಕು. ಈ ರೈತರು ಕೃಷಿ ಕೂಲಿ ಕಾರ್ಮಿಕರಿಗೆ ಅನಿವಾರ್ಯವಾದ ರೇಷನ್ ವಸ್ತುಗಳ ದರವನ್ನೂ ಏರಿಸಿ ಈ ವಿಭಾಗ ಕಂಗಾಲಾಗಿದೆ.

ಅಡಿಕೆಗೆ ಕೆ.ಜಿ.ಗೆ ರೂ. 100 ಆದರೂ ಬೆಂಬಲ ಬೆಲೆ ಸಿಗಬೇಕು. ರೈತರ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿಸಬೇಕು. ಬಡ್ಡಿ ಮನ್ನಾ ಮಾಡಬೇಕು. ರಸಗೊಬ್ಬರಗಳಿಗೆ ಸಬ್ಸಿಡಿ ನೀಡಬೇಕು. ರೈತರ ಪಂಪ್‌ಸೆಟ್‌ಗೆ ಹಿಂದಿನಂತೆ ಉಚಿತ ವಿದ್ಯುತ್ ನೀಡಬೇಕು ಎಂದು ಸರಕಾರವನ್ನು ಒತ್ತಾಯಿಸುವುದು ರೈತರ ಮೊದಲ ಕೆಲಸವಾಗಿದೆ. ಜೊತೆಗೆ ಈ ವಿದೇಶೀಕರಣ, ಉದಾರೀಕರಣದ ವಿರುದ್ಧ ಹೋರಾಡಲು ರೈತರನ್ನು ಅಣಿನೆರೆಸಬೇಕಿದೆ.

ಕಂಗಾಲಾಗಿರುವ ತೆಂಗು, ರಬ್ಬರ್, ಬೆಳೆಗಾರರು


ಇದೇ ರೀತಿಯ ಸಮಸ್ಯೆ ತೆಂಗು, ರಬ್ಬರ್ ಬೆಳೆಗಾರರದ್ದೂ ಆಗಿದೆ. ತೆಂಗಿಗೂ ಅಡಿಕೆ ಬೆಳೆಯ ಕೃಷಿಯಂತೆ ಎಲ್ಲಾ ಖರ್ಚುಗಳಿವೆ. ಒಂದು ತೆಂಗಿನ ಕಾಯಿಗೆ ಕನಿಷ್ಟ 6 ರೂ. ಆದರೂ ಸಿಗಬೇಕು. ಆದರೆ ಈಗ ಒಂದ ತೆಂಗಿನ ಕಾಯಿಗೆ ರೂ. 2 ಕೂಡ ಸಿಗದ ಸ್ಥಿತಿ ನಿರ್ಮಾಣವಾಗಿದೆ. ವಿದೇಶಿ ಪಾಮಾಯಿಲ್ ಎಣ್ಣೆಯ ದೆಸೆಯಿಂದ ತೆಂಗಿನ ಎಣ್ಣೆಗೂ ಬೆಲೆ ಇಲ್ಲದಾಗಿದೆ. ಕರ್ನಾಟಕ ಪ್ರಾಂತ ರೈತ ಸಂಘ ಬೆಳ್ತಂಗಡಿ ತಾಲೂಕು ಸಮಿತಿ ದೇಶದ ರೈತರ ರಕ್ಷಣೆಗೆ ಸಹಕರಿಸಿರಿ ಎಂಬ ಘೋಷಣೆಯೊಂದಿಗೆ 'ವಿದೇಶಿ ಪೆಪ್ಸಿ, ಕೋಕೋ ಕೋಲ ಬಹಿಷ್ಕರಿಸಿ, ರೈತರ ಎಳನೀರು ಕುಡಿಯಿರಿ ಎಂಬ ಬ್ಯಾನರಿನಡಿಯಲ್ಲಿ ಬಾವುಟ ಏರಿಸಿ ಎಳನೀರು ಮಾರುವ ವ್ಯವಸ್ಥೆ ಬೆಳ್ತಂಗಡಿಯಲ್ಲಿ ನಡೆಯುತ್ತಿದೆ. 'ವಿದೇಶಿ ವ್ಯಾಪಾರಿಗಳ ಸರಕನ್ನು ಧಿಕ್ಕರಿಸಿ ರೈತ ಕಾರ್ಮಿಕರನ್ನು ರಕ್ಷಿಸಿ ಎಳನೀರು ಕುಡಿಯಿರಿ' ಇವೆಲ್ಲಾ ಸ್ಲೋಗನ್ನುಗಳು ಎಳನೀರು ಮಾರಾಟದ ಬಳಿ.

ಇನ್ನು ರಬ್ಬರ್ ಕೃಷಿಯು ಕಷ್ಟದಾಯಕವೇ, ಬೆಳಿಗ್ಗೆ 4 ಗಂಟೆಯಿಂದ ಟ್ಯಾಪಿಂಗ್ ಮಾಡತೊಡಗಿದರೆ ಮಧ್ಯಾಹ್ನ ತನಕ ದುಡಿಯುತ್ತಾರೆ. ಈ ಎಲ್ಲಾ ಸಮಸ್ಯೆಗಳಿಂದ ಬಳಲುತ್ತಿರುವ ರೈತರು ಇಂದು ರೈತ ಸಂಘಟನೆಯತ್ತ ಬರುತ್ತಿದ್ದಾರೆ. ಜನ ಅತೃಪ್ತಿಯ ದಾರಿ ತಪ್ಪಿಸದಂತೆ ಈ ಜನರನ್ನು ಸಂಘಟಿಸುವ ನೈಜ ಹೋರಾಟದ ಕಣಕ್ಕೆ ಧುಮುಕಬೇಕಿದೆ. ○

ವರ್ಷವಿಡೀ ದುಡಿತ ಬೇಡುವ ಬೆಳೆ

ಅಡಿಕೆ ಬೆಳೆಗಳಲ್ಲಿ ನಾನಾ ತರದ ಜಾತಿಗಳ ಸಸಿಗಳಿವೆ. ಇದರ ಕೃಷಿ ಮಾಡಿದರೆ ಉತ್ಪತ್ತಿ ಬರಲು 5 ವರ್ಷಗಳಿಂದ 9 ವರ್ಷಗಳು ಬೇಕಾಗುತ್ತವೆ. ಒಳ್ಳೆಯ ಆದಾಯ ಬರಲು 7 ವರ್ಷಗಳಷ್ಟಾದರೂ ಕಾಯಬೇಕು. 1 ಎಕ್ರೆ ಜಮೀನಿನಲ್ಲಿ ಸಾಂಪ್ರದಾಯಿಕವಾಗಿ 400 ಸಸಿಗಳು ನೆಡುತ್ತಿದ್ದರು. ಆದರೆ ಇಂದಿನ ವೈಜ್ಞಾನಿಕ ಕೃಷಿಯಲ್ಲಿ 500, 600 ಸಸಿಗಳು ಹಿಡಿಯುತ್ತವೆ. 1 ಎಕ್ರೆಯಲ್ಲಿ ಸುಮಾರು 10 ರಿಂದ 12 ಕ್ವಿಂಟಾಲ್ ಅಡಿಕೆ ಬೆಳೆ ಬರುತ್ತದೆ.

ಅಡಿಕೆ ಕೃಷಿ ರೈತನಿಗೆ ವರ್ಷದ 365 ದಿನವೂ ಕೆಲಸ ನೀಡುತ್ತದೆ. ಮಳೆಗಾಲದಲ್ಲಿ ಬುಡ ಬಿಡಿಸಿ, ಗೊಬ್ಬರ, ಸೊಪ್ಪು, ರಸಗೊಬ್ಬರ ಎಲ್ಲಾ ಹಾಕಿ ಹೊಸ ಮಣ್ಣು ಹಾಕಬೇಕು. ಅಲ್ಲಿ ಬೆಳೆದ ಹುಲ್ಲು, ಬಲ್ಲೆ ತೆಗೆಯಬೇಕು. 2 ವರ್ಷಕ್ಕೊಮ್ಮೆ ಮಣ್ಣು ನುಸುಲು ಮಾಡಿ ಕೊಡಬೇಕು. ಮುಖ್ಯವಾಗಿ ಮಳೆಗಾಲದಲ್ಲಿ ಬಾದಿಸುವ ಕೊಳೆ ರೋಗ ತಡೆಯಲು, ಕ್ರಿಮಿನಾಶ, ಮೈಲುತುತ್ತು ಸುಣ್ಣದ ಮಿಶ್ರಣವನ್ನು ಅಡಿಕೆಗೆ ಸಿಂಪಡಿಸಬೇಕು.



ಅಪಾರ ಉತ್ಪಾದನಾ ವೆಚ್ಚ:

ಮದ್ದು ಸಿಂಪಡಿಸಲು ಸಿಂಪಡಿಸುವ ಕೂಲಿ ಕಾರ್ಮಿಕನಿಗೆ ದಿನಕ್ಕೆ ಎಲ್ಲಾ ಖರ್ಚು ನೀಡಿ ರೂ. 150 ಸಂಬಳ ನೀಡಬೇಕು. 1 ಎಕ್ರೆ ಜಮೀನಿಗೆ ಮದ್ದು ಸಿಂಪಡಿಸಲು 2 ದಿನ ಬೇಕು. ಇವರ ಜೊತೆಗೆ ರೂ. 60 ರ ಕೂಲಿ ಕಾರ್ಮಿಕರು ಮೂರು ಜನ ಬೇಕಾಗುತ್ತದೆ. ಬುಡದ ಕೆಲಸಕ್ಕೆ ಅದಕ್ಕೆ ಗೊಬ್ಬರ ಇತ್ಯಾದಿ ಹಾಕಲು ಒಂದು ಮರಕ್ಕೆ ರೂ. 30 ರಂತೆ ಖರ್ಚು ಬೀಳುತ್ತದೆ.

ಬೇಸಿಗೆ ಕಾಲದಲ್ಲಿ ಅಡಿಕೆ ಕ್ಯೊಲು ಮುಖ್ಯ ಕೆಲಸ. ವರ್ಷದಲ್ಲಿ 3 ಅಥವಾ 4 ಬಾರಿ ಅಡಿಕೆ ಫಸಲು ತೆಗೆಯಲು ಸಿಗುತ್ತದೆ. ಮರ ಹತ್ತಿ ತೆಗೆಯುವವನಿಗೆ ದಿನಕ್ಕೆ 150 ರೂ. ಮಜೂರಿ ನೀಡಬೇಕು. 1 ಎಕ್ರೆ ಜಮೀನಿನ ಅಡಿಕೆ ಫಸಲು ತೆಗೆಯಲು 2 ದಿನ ಬೇಕು. ಮತ್ತೆ ಅದನ್ನು ಹೆಕ್ಕಿ ಸಾಗಿಸಲು ಮೂವರು ಬೇಕಾಗುತ್ತದೆ. ಇದರ ಮಜೂರಿ ದಿನಕ್ಕೆ ರೂ. 50 ರಿಂದ 60. 40 ದಿನ ಬಿಸಿಲಿನಿಂದ ಅದು ಒಣಗಬೇಕು. ನಂತರ ಅಡಿಕೆ ಸುಲಿಯಲು 1 ಕೆ.ಜಿ.ಗೆ 2 ರೂ. ಸಂಬಳ ನೀಡಬೇಕು.

ಇನ್ನು ಬೇಸಿಗೆ ಕಾಲದಲ್ಲಿ ಪುನಃ ಮಳೆಗಾಲ ಬರುವ ತನಕ ಗಿಡ ಮರಗಳಿಗೆ ನೀರು ಸಿಂಪಡಿಸಬೇಕು. ಮಳೆಗಾಲ ಹತ್ತಿರ ಬಂದಾಗ ಮಳೆಗಾಲದ ನೀರು ಹೋಗಲು ಕಣಿ ರಿಪೇರಿ ಮಾಡಿಸಬೇಕು. ಒಟ್ಟಾರೆ ವರ್ಷದ 365 ದಿನವೂ ಕೆಲಸ ಇದೆ. ಒಂದು ಎಕ್ರೆಗೆ ಜಮೀನಿಗೆ ಕನಿಷ್ಟ ಇಬ್ಬರು ದಿನ ಕೆಲಸ ಮಾಡಬೇಕು. ಅಡಿಕೆಯನ್ನು ಮಾರ್ಕೆಟ್‌ಗೆ ಸಾಗಿಸಬೇಕು. ರಸಗೊಬ್ಬರಗಳನ್ನು ಮಾರ್ಕೆಟ್‌ನಿಂದ ತೋಟಕ್ಕೆ ತರಬೇಕು. ಈ ಎಲ್ಲಾ ಖರ್ಚುಗಳು ಅನಿವಾರ್ಯವೆ.

ಈ ಎಲ್ಲಾ ಖರ್ಚುಗಳಿಗೆ ಕರೆಂಟ್ ಬಿಲ್ಲು ಎಲ್ಲಾ ಸೇರಿ ಒಂದು ಎಕ್ರೆ ಕೃಷಿಗೆ ಸುಮಾರು ರೂ. 80,000 ಖರ್ಚು ಒಂದು ವರ್ಷಕ್ಕೆ ಬೇಕಾಗುತ್ತದೆ. ಅಡಿಕೆಗೆ (ಕೆ.ಜಿ.ಗೆ ರೂ. 100 ರಂತೆ ಸಿಕ್ಕಿದರೆ ಮಾತ್ರ) ಆದಾಯ ರೂ. ಒಂದು ಲಕ್ಷದಿಂದ ಒಂದು ಲಕ್ಷದ ಇಪ್ಪತ್ತು ಸಾವಿರ. (ಒಂದು ಎಕ್ರೆಯಲ್ಲಿ 10 ರಿಂದ 12 ಕ್ವಿಂಟಾಲ್ ಅಡಿಗೆ ಆದಾಗ)

ಇನ್ನು ಹಾಕಿದ ಬಂಡವಾಳ ಪ್ರತ್ಯೇಕ ಇರುತ್ತದೆ. ಅಡಿಕ ಶೇಖರಿಸಿಡಲು ಗೋಡಾನುಗಳು ಅಗತ್ಯ. ಪಂಪ್‌ಸೆಟ್ ಪೈಪ್ಸ್, ಸ್ಪಿಂಕ್ಲರ್ಸ್ ಗಳಿಗೆ ಮಾಡಿದ ಸಾಲಗಳ ಕಂತುಗಳನ್ನು ಕಟ್ಟಬೇಕು. ಒಂದು ಎಕ್ರೆ ಅಡಿಕೆ ತೋಟಕ್ಕೆ ಪೈಪ್ ಸ್ಪಿಂಕ್ಲರ್ಸ್‌ಗಳನ್ನು ಒಮ್ಮೆ ಅಳವಡಿಸಲು 1200 ಬೇಕು. ಪಂಪ್ ಸೆಟ್ ಬೇಕು, ಕೆರೆ, ಬೋರ್‌ವೆಲ್ ತೆಗೆಸಿ ನೀರಿಗೆ ವ್ಯವಸ್ಥೆ ಮಾಡಿದ್ದರೆ ಇದಕ್ಕೂ ಬ್ಯಾಂಕಿನ ಸಾಲ ತೆಗೆದು ರೈತ ಸಾಲದ ಬಲೆಯಲ್ಲಿ ಇರುವಾಗಲೇ ಅಡಿಕೆ ಬೆಳೆಯ ಬೆಲೆ ಕುಸಿದು ರೈತನೇ ಕುಸಿದಿದ್ದಾನೆ. ○

ನಾಗರ ಏನನ್ನು ಕಕ್ಕೀತು ವಿಷವನ್ನಲ್ಲದೆ?

ಆರ್.ಎಸ್.ಎಸ್. ಒಂದು ವಿಷವೃಕ್ಷ. ಆಕ್ರಮಣಕಾರಿ ಹಿಂದುತ್ವವೇ ಅದರ ಸಿದ್ಧಾಂತ. ಇತಿಹಾಸದಲ್ಲಿ ಅದರ ಕಪ್ಪು ದಾಖಲೆಗಳನ್ನು ಅಳಿಸಿಹಾಕುವ ಪ್ರಯತ್ನದ ಭಾಗವಾಗಿ ದೇಶಾದ್ಯಂತ ಅದು ರಾಷ್ಟ್ರ ಜಾಗರಣ ಅಭಿಯಾನ ನಡೆಸುತ್ತಿದೆ. ದೇಶಕ್ಕೆ ಕಿಚ್ಚು ಹಚ್ಚುವ ಅದರ ಈ ಕಾರ್ಯಕ್ರಮಕ್ಕೆ ಹಿಡಿದ ಕನ್ನಡಿ ಈ ಲೇಖನ.

ನಿತ್ಯಾನಂದ ಸ್ವಾಮಿ

'ಕಿಸೆಗಳ್ಳರಿದ್ದಾರೆ, ಸೂಟ್‌ಕೇಸ ಎತ್ತುವವರಿದ್ದಾರೆ, ನಿಮ್ಮ ಗಮನವನ್ನು ಬೇರೆಡೆಗೆ ಸೆಳೆದು ಬೆಲೆ ಬಾಳುವ ನಿಮ್ಮ ವಸ್ತುಗಳನ್ನು ಅಪಹರಿಸುವವರಿದ್ದಾರೆ, ಎಚ್ಚರಿಕೆ" ರಾಜ್ಯ ರಸ್ತೆ ಸಾರಿಗೆಯ ಬೆಂಗಳೂರು ಬಸ್ ನಿಲ್ದಾಣದಲ್ಲಿ ಧ್ವನಿವರ್ಧಕದ ಮೂಲಕ ಈ ಮಾತುಗಳು ಆಗೊಮ್ಮೆ ಈಗೊಮ್ಮೆ ಬಿತ್ತರಿಸಲ್ಪಟ್ಟಾಗ ಬಸ್ಸುಗಳಿಗಾಗಿ ಕಾಯುತ್ತಿರುವ ಪ್ರಯಾಣಿಕರು ಒಮ್ಮಿಂದೊಮ್ಮೆಲೆ ಗಾಬರಿಗೊಂಡು ತಮ್ಮ ಜೇಬುಗಳನ್ನು ಮುಟ್ಟಿ ನೋಡುತ್ತಾರೆ. ತಮ್ಮ ಬ್ಯಾಗುಗಳನ್ನು ತಮ್ಮ ಪಕ್ಕಕ್ಕೆ ಸರಿಸಿಟ್ಟುಕೊಳ್ಳುತ್ತಾರೆ. ನಿಮ್ಮ ಗಮನವನ್ನು ಬೇರೆಡೆಗೆ ಸೆಳೆದು ದೋಚುವುದು ಇಂದಿನ ಅಪರಾಧ ಜಗತ್ತಿನ ಹೊಸ ಸಂಶೋಧನೆ! ರಸ್ತೆಯಲ್ಲಿ ಬಿದ್ದಿರುವ ಚಿಲ್ಲರೆ ನಾಣ್ಯದತ್ತ ನಿಮ್ಮ ಗಮನ ಸೆಳೆದು ಸಾವಿರಾರು ರೂಪಾಯಿಗಳನ್ನು ತುಂಬಿರುವ ನಿಮ್ಮ ಬ್ಯಾಗನ್ನು ಅಪಹರಿಸಲಾಗುತ್ತದೆ. ನೀವು ತೊಟ್ಟ ಬಟ್ಟೆಗೆ ಗಲೀಜು ಹಚ್ಚಿ, ನೀವು ಅದನ್ನು ತೊಳೆಯಲು ಹೋಗುವಂತೆ ಮಾಡಿ, ನೀವು ಪಕ್ಕದಲ್ಲಿಟ್ಟಿರುವ ನಿಮ್ಮ ಸೂಟ್‌ಕೇಸನ್ನು ನಾಪತ್ತೆ ಮಾಡಲಾಗುತ್ತದೆ. ಹೀಗೆ ಒಂದಲ್ಲ, ಎರಡಲ್ಲ, ಹಲವು ರೀತಿಯ ತಂತ್ರಗಳನ್ನು ಬಳಸಿ ಹಾಡುಹಗಲೇ ದರೋಡೆಗಳು ನಡೆಯುತ್ತವೆ. ನಾವು ಎಚ್ಚರಗೊಳ್ಳುವಷ್ಟರಲ್ಲಿ ಏನನ್ನಾದರೂ ಕಳೆದುಕೊಂಡಿರುತ್ತೇವೆ.

'ಕಳ್ಳರು ಬರುತ್ತಿದ್ದಾರೆ, ಮನೆ ಮನೆಗೆ! ಖದೀಮರು ಬರುತ್ತಿದ್ದಾರೆ ಹಳ್ಳಿ ಹಳ್ಳಿಗೆ! ನಿಮ್ಮ ಗಮನವನ್ನು ಬೇರೆಡೆಗೆ ಸೆಳೆದು ದೋಚಿಕೊಂಡು ಹೋಗಲಿದ್ದಾರೆ ನೀವು ಶತಮಾನಗಳಿಂದ ಉಳಿಸಿಕೊಂಡು ಬೆಳೆಸಿಕೊಂಡು ಬಂದಿರುವ ಮಾನವೀಯ ಮೌಲ್ಯಗಳನ್ನು, ಕೋಮು ಸಾಮರಸ್ಯವನ್ನು, ವೈವಿಧ್ಯತೆಯಲ್ಲಿನ ಏಕತೆಯನ್ನು! ಎಚ್ಚರ!! ಎಚ್ಚರ!! "ಅವರುದಾರಿಯಲ್ಲಿ ದೋಚುತ್ತಾರೆ. ಇವರು ಮನೆ ಮನೆಗೆ ಕನ್ನ ಹಾಕುತ್ತಾರೆ.

ಆರ್.ಎಸ್.ಎಸ್. ನವರು ಬರುತ್ತಿದ್ದಾರೆ. ಮನೆ ಮನೆಗೆ, ಹಳ್ಳಿ ಹಳ್ಳಿಗೆ! ಈಗಾಗಲೇ ಆರಂಭವಾಗಿರುವ ಅವರ ರಾಷ್ಟ್ರ ಜಾಗರಣ ಅಭಿಯಾನದ ಅಂಗವಾಗಿ 4.5 ಲಕ್ಷ ಹಳ್ಳಿಗಳ 30.4 ಕೋಟಿ ಮನೆಗಳಿಗೆ ಭೇಟಿ ಮಾಡುವ ಉದ್ದೇಶವಿದೆಯಂತೆ. ನವೆಂಬರ್ 12 ರಿಂದ ಕರ್ನಾಟಕದಲ್ಲಿ ಆರಂಭವಾಗಿರುವ ಅಭಿಯಾನ ಕಾರ್ಯಕ್ರಮವು ಜನವರಿ ತಿಂಗಳಿಗೆ ಕೊನೆಗೊಳ್ಳಲಿದೆಯಂತೆ. ಕರ್ನಾಟಕದಲ್ಲಿ ಈಗಾಗಲೇ 25 ಲಕ್ಷ ಮನೆಗಳನ್ನು ಸಂಪರ್ಕಿಸಲಾಗಿದೆ ಎಂದು ಹೇಳಲಾಗುತ್ತಿದ್ದು ಬೆಂಗಳೂರು ನಗರದಲ್ಲಿ 10,000 ಸ್ವಯಂ ಸೇವಕರು ಒಂದೇ ಒಂದು ದಿನದಲ್ಲಿ 1.5 ಲಕ್ಷ ಮನೆಗಳ ಬಾಗಿಲು ತಟ್ಟಿದ್ದಾರಂತೆ. ದ.ಕ ಮತ್ತು ಉಡುಪಿ ಜಿಲ್ಲೆಯಲ್ಲಿ ಪ್ರತಿಯೊಂದು ಮನೆಯನ್ನು ತಲುಪುವ ಗುರಿಯನ್ನು ಇಟ್ಟುಕೊಳ್ಳಲಾಗಿದೆಯಂತೆ. ದೇಶದ ಹಿತ, ಜನತೆಯ ನೆಮ್ಮದಿ ಬಯಸುವವರಿಗೆ ಇದು ಅತ್ಯಂತ ಆತಂಕದ ಸುದ್ದಿಯಾಗಿದೆ. ನಾಗರ ಹಾವು ಏನನ್ನು ಕಕ್ಕೀತು ವಿಷವನ್ನಲ್ಲದೇ?

ದೇಶದಲ್ಲಿ ನಡೆಯುತ್ತಿರುವ ಪ್ರತಿಯೊಂದು ಕೋಮುಗಲಭೆಯ ಆಳದಲ್ಲಿ ಕನಿಷ್ಟ ಒಬ್ಬ ಆರ್.ಎಸ್.ಎಸ್. ಸ್ವಯಂ ಸೇವಕನ ಪಾತ್ರ ಇದ್ದೇ ಇರುತ್ತದೆ. ಅವನೊಬ್ಬ ಸರ್ಕಾರಿ ಅಧಿಕಾರಿಯಾಗಿರಬಹುದು ಅಥವಾ ಶಾಲಾ ಮಾಸ್ತರ್ ಆಗಿರಬಹುದು. ಆತನೊಬ್ಬ ಮಠಾಧಿಪತಿಯಾಗಿರಬಹುದು, ಅಥವಾ ಸಮಾಜ ಸೇವಕನ ಮುಖವಾಡ ಧರಿಸಿದ ಆರ್.ಎಸ್.ಎಸ್. ಪೂರ್ಣಕಾಲದ ಕಾರ್ಯಕರ್ತನಿರಬಹುದು. ವಿಷ ಕಾರುವ ದೈತ್ಯ ಸಂಘಟನೆಯೊಂದು ದೇಶದ ಹಳ್ಳಿಗಾಡಿನಲ್ಲೆಲ್ಲಾ ಸಂಚರಿಸಿದರೆ ಆಗಬಹುದಾದ ಅನಾಹುತ ಊಹಿಸಲು ಸಾಧ್ಯವಿಲ್ಲ. ಈ ವಿಷವೃಕ್ಷದ ನೆರಳು ಸಹ ವಿಷಪೂರಿತವಾಗಿರುತ್ತದೆ. ಅಂದು ಬೀಜ, ಇಂದು ವಟವೃಕ್ಷವಂತೆ! ಇಂದು ವಿಷವೃಕ್ಷವಾಗಿ ಬೆಳೆದು ಭಾರತೀಯ ಭ್ರಾತೃತ್ವದ ಶತ್ರುವಾಗಿದೆ.



ಆರ್.ಎಸ್.ಎಸ್. ಬಗ್ಗೆ ಕೆಲಶಕ್ತಿಗಳು ಜನತೆಯಲ್ಲಿ ಮೂಡಿಸುತ್ತಿರುವ ತಪ್ಪು ಭಾವನೆಗಳನ್ನು ಹೋಗಲಾಡಿಸಿ, ಜನತೆಗೆ ಸಂಘದ ವಿಚಾರ ಧಾರೆಯನ್ನು ತಿಳಿಸುವುದು ಈ ರಾಷ್ಟ್ರ ಜಾಗರಣ ಅಭಿಯಾನದ ಉದ್ದೇಶವಂತೆ! ಆದರೆ ಅಭಿಯಾನದ ಅಂಗವಾಗಿ ಇವರು ಮುದ್ರಿಸಿ ಹಂಚುತ್ತಿರುವ ನಾಲ್ಕು ಪುಟಗಳ ಕರಪತ್ರವನ್ನು ಓದುವ ಪ್ರತಿಯೊಬ್ಬ ಓದುಗನಿಗೆ ಸಂಘದ ಬಗ್ಗೆ ಗೌರವ ಭಾವನೆ ಮೂಡುವುದು ಅಸಾಧ್ಯ. ಇಡೀ ಕರಪತ್ರವು ಸುಳ್ಳಿನ ಒಂದು ಕಂತೆಯಾಗಿದ್ದು ಜನರ ಗಮನವನ್ನು ಅವರ ಮೂಲಭೂತ ಸಮಸ್ಯೆಗಳಿಂದ ಬೇರೆಡೆಗೆ ಸೆಳೆಯುವ ದುರುದ್ದೇಶವನ್ನು ಹೊಂದಿದೆ.

ಭಾರತ ಹಿಂದುಗಳೇ ಕಟ್ಟಿ ಬೆಳೆಸಿದ ರಾಷ್ಟ್ರವೇ?

ಭಾರತ ಮುಂಚಿನಿಂದಲೂ ಹಿಂದೂಗಳೇ ಕಟ್ಟಿ ಬೆಳೆಸಿದ ರಾಷ್ಟ್ರವಂತೆ! ಮುಗ್ಧ ಹಿಂದುಗಳು ಇದನ್ನು ನಂಬಬಹುದು ಎಂಬುದು ಅವರ ನಿರೀಕ್ಷೆ. ಮುಂಚಿನಿಂದಲೂ ಭಾರತ ಎಂಬ ರಾಷ್ಟ್ರ ಇರಲಿಲ್ಲ. ಅದನ್ನು ಮುಂಚಿನಿಂದ ಹಿಂದುಳೇ ಕಟ್ಟಿ ಬೆಳೆಸಿದರು ಎಂಬುದು ಅಪ್ಪಟ ಸುಳ್ಳು. ಇಂದು ಭಾರತ ಎಂದು ಕರೆಯಲ್ಪಡುವ ಈ ಪ್ರದೇಶದಲ್ಲಿ ಹಿಂದುಗಳೆಂದು ಕರೆಯಲ್ಪಟ್ಟ ಜನರು ಮಾತ್ರ ವಾಸಿಸುತ್ತಾ ಬಂದ ಕಾಲದಲ್ಲಿ ಇದು ಒಂದು ರಾಷ್ಟ್ರ ಅಥವಾ ಒಂದು ದೇಶವಾಗಿರಲಿಲ್ಲ. ಇದು ಹಲವು ದೇಶೀಯತೆಗಳ ಹಲವು ಸಂಸ್ಕೃತಿಗಳ ತೊಟ್ಟಿಲಾಗಿತ್ತು. ಇಲ್ಲಿಯ ಹಿಂದುರಾಜರುಗಳು ತಮ್ಮ ತಮ್ಮ ಸಾಮ್ರಾಜ್ಯಗಳನ್ನು ಕಟ್ಟಿಕೊಂಡು ಪರಸ್ಪರ ಕಾದಾಡುತ್ತಾ ಇದ್ದರೆ ಹೊರತು ತಾವೆಲ್ಲರೂ ಒಂದೇ ಎಂಬ ಭಾವನೆ ಹೊಂದಿದವರಾಗಿರಲಿಲ್ಲ. ಈ ಪ್ರದೇಶ ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆಗೆ ಒಳಪಟ್ಟಾಗ ಮಾತ್ರ ಭಾರತಕ್ಕೆ ಒಂದು ರಾಷ್ಟ್ರದ ಚೌಕಟ್ಟು ದೊರೆಯುವಂತಾಯಿತು. ಆಡಳಿತಾತ್ಮಕವಾಗಿ ಅದು ಒಂದು ಘಟಕವಾಗಿ ಹೊರಹೊಮ್ಮುವಂತಾಯಿತು. ಮುಂದೆ ಬ್ರಿಟಿಷ್ ಆಳ್ವಿಕೆಯ ವಿರುದ್ಧ ನಡೆದ ಹೋರಾಟದಲ್ಲಿ ಇಲ್ಲಿಯ ವಿಭಿನ್ನ ದೇಸೀಯತೆಗಳ ಹಾಗೂ ವಿಭಿನ್ನ ಕೋಮುಗಳ ಜನ ಒಟ್ಟಾಗಿ, ಒಂದಾಗಿ ಹೋರಾಟ ಮಾಡುವ ಮೂಲಕ ಆಧುನಿಕ ಭಾರತ ಎಂಬ ರಾಷ್ಟ್ರವನ್ನು ಕಟ್ಟಿದರು. ಆದ್ದರಿಂದ ಈ ದೇಶದಲ್ಲಿ ಬಾಳಿ ಬದುಕಲು ಹಿಂದುಗಳಂತೆ ಇತರ ಎಲ್ಲಾ ಕೋಮುಗಳ ಜನತೆಗೂ ಸಮಾನವಾದ ಹಕ್ಕುಗಳಿವೆ. ಈ ಹಕ್ಕುಗಳನ್ನು ಕಿತ್ತುಕೊಳ್ಳಲಾಗದು.

ಕಿತ್ತು ತಿನ್ನುವ ಸಮಸ್ಯೆಗಳಿಗೆ ಕಾರಣ

ನಾವು ಹಿಂದುಗಳು ಎಂಬ ನೈಜ ರಾಷ್ಟ್ರೀಯತೆಯನ್ನು ಮರೆತದ್ದೇ ದೇಶವನ್ನು ಕಿತ್ತು ತಿನ್ನುತ್ತಿರುವ ಇಂದಿನ ಸಮಸ್ಯೆಗಳಿಗೆ ಮುಖ್ಯಕಾರಣವಂತೆ! ಇನ್ನೊಂದು ದೊಡ್ಡ ಸುಳ್ಳು ಹಿಂದುಗಳಲ್ಲಿ ನಾವೆಲ್ಲರು ಹಿಂದುಗಳು ಎಂಬ ಪ್ರಜ್ಞೆ ಜಾಗೃತವಾದರೆ ಅವರನ್ನು ಕಿತ್ತು ತಿನ್ನುತ್ತಿರುವ ಬಡತನ, ದಾರಿದ್ರ್ಯ, ನಿರಕ್ಷರತೆ, ನಿರುದ್ಯೋಗದಂತಹ ಸಮಸ್ಯೆಗಳಿಗೆ ಪರಿಹಾರ ದೊರಕುವುದೆ? ಅದೇನಾದರೂ ಸಾಧ್ಯ ಎಂದಿದ್ದೇ ಆದರೆ ಎಲ್ಲಾ ಹಿಂದುಯೇತರರು ಹಿಂದುಗಳಾಗಿ ಮತಾಂತರಗೊಳ್ಳಲು ಕ್ಯೂ ನಿಲ್ಲುವರು. ಆದರೆ ಅದು ಸಾಧ್ಯವಿಲ್ಲ. ಭಾರತವನ್ನು ಆರ್.ಎಸ್.ಎಸ್. ಕಲ್ಪನೆಗೆ ಅನುಗುಣವಾಗಿ ಹಿಂದು ರಾಷ್ಟ್ರ ಕಾಡುತ್ತಿರುವ ಬಡತನ, ನಿರುದ್ಯೋಗದಂತಹ ಸಮಸ್ಯೆಗಳು ಪರಿಹಾರವಾಗಲಾರವು. ಇಸ್ಲಾಂ ರಾಷ್ಟ್ರ ಎಂದು ಘೋಷಿಸಲ್ಪಟ್ಟಿರುವ ಪಾಕಿಸ್ತಾನ ತಮ್ಮ ಹಿಂದು ಪ್ರಜೆಗಳ ಮೇಲೆ ದೌರ್ಜನ್ಯ ನಡೆಸುತ್ತಿರಲಿಲ್ಲವೇ? ಹಿಂದೂ ಜಮೀನ್ದಾರರು ಹಿಂದೂ ಗೇಣಿದಾರರ ಸುಲಿಗೆ ಮಾಡುತ್ತಿಲ್ಲವೇ? ಕಾರ್ಮಿಕರಿಗೆ ಅವರು ತನ್ನ ಕೋಮಿನವರು ಎಂಬ ಕಾರಣಕ್ಕಾಗಿ ಅವರಿಗೆ ಅಗತ್ಯವಿರುವಷ್ಟು ಸಂಬಳ

ಗೋಸುಂಬೆಗೀಗ ಅಭಿಯಾನದ ಬಣ್ಣ

ಎತ್ತಿ ಋತ್ವಿಕನನು ಎಸೆ ಹೋಮಕುಂಡಕ್ಕೆ
ಅಷ್ಟ ಗ್ರಹಕೂಟ ದೋಷ ಪರಿಹಾರಕ್ಕೆ
ಓ ಬೆಪ್ಪ

ರಾಷ್ಟ್ರ ಜಾಗರಣ ಅಭಿಯಾನದ ಹೆಸರಿನಲ್ಲಿ ತಾವೇನೋ ಕಿಸಿದಿದ್ದೇವೆಂದು ಪ್ರಚುರಪಡಿಸುತ್ತಿರುವ ರಾಷ್ಟ್ರೀಯ ಸ್ವಯಂ ಸೇವಕ ಸಂಘ(ಆರ್‌ಎಸ್‌ಎಸ್)ಕ್ಕೆ ಕುವೆಂಪುರವರ ಈ ಪದ್ಯವನ್ನು ಜ್ಞಾಪಿಸಬೇಕಿದೆ.

'ನಿಮ್ಮ ಹಿತಾಸಕ್ತಿಗಳ ಹಿಂದೂ ಢಮುಗ ಮೊಳಗಿದರೆ ಭಾರತೀಯರ ಎದೆ ಒಡೆಯುತ್ತದೆ. ಏಕೆಂದರೆ ನೀವು ನಯವಂಚಕತನದಿಂದ ಅದೇ ಹಳೆಯ ಜಾತಿ, ಧರ್ಮಗಳ ಬೀಜ ಬಿತ್ತುತ್ತೀರಿ. ಪಾರ್ಥೇನಿಯಂನಂತೆ ಕೋಮು ವಿಷಜ್ವಾಲೆ ಹರಡುತ್ತದೆ. ನಿಮ್ಮ ಪ್ರಚಾರದಲ್ಲಿ ಪ್ರಾಮಾಣಿಕವಾಗಿ ಏನನ್ನು ಹೇಳಿಕೊಂಡಿದ್ದೀರಿ? ನೂರು ತಪ್ಪುಗಳನ್ನು ಮುಚ್ಚಿಟ್ಟು ಮೂರು ಸತ್ಕಾರ್ಯಗಳ ಬಗ್ಗೆ ವಿವರಿಸಿದ್ದೀರಿ. ಆದರೆ ನಿಮ್ಮನ್ನೂ ಸೇರಿಸಿ ಭಾರತೀಯರೆಲ್ಲರಿಗೂ ಗೊತ್ತು ನಿಮ್ಮ ಕರಾಳ ಇತಿಹಾಸ.

ನಿಮ್ಮ ಅಭಿಯಾನದಲ್ಲೇಕೆ ಭಜರಂಗ ದಳ, ಬಿಜೆಪಿಗಳನ್ನು ನಿಮ್ಮ ಪರಿವಾರವೆಂದು ಎದೆತಟ್ಟಿ ಹೇಳಿಕೊಳ್ಳಲಾಗಿಲ್ಲ.

ಹಿಂದೂ ಧರ್ಮ ಪ್ರಾಚೀನವೆಂದು ಹೇಳಿಕೊಳ್ಳುತ್ತೀರಿ. ಗ್ರೀಕ್-ರೋಮನ್ ಪುರಾತನ ಸಂಸ್ಕೃತಿಯೊಳಗೆ ಓರಫಿಕ್ ಪಂಥೀಯರಲ್ಲಿ ಭಾರತದ ಆಚರಣೆಯದ್ದೇ ತರಹದ ಲಿಂಗ-ಯೋನಿ ಪೂಜೆ ಇದೆ(ಶಿವಲಿಂಗವೆಂದು ಬೇರೆ ಹೇಳಬೇಕಾಗಿಲ್ಲ) ಈಜಿಪ್ಟಿನ ಪುರಾತನ ಸಂಸ್ಕೃತಿಯಲ್ಲಿ, ಆದಿಶೇಷ ನಾಗ, ಸರ್ಪಾಲಿಂಗಿಕ ಸೂರ್ಯನ ಚಿತ್ರವಿದೆ. ಇದಕ್ಕೆ ನಿಮ್ಮ ಉತ್ತರವೇನು?

ಇಷ್ಟಕ್ಕೂ 1868 ರಲ್ಲಿ ಪ್ರಕಟವಾದ ಬ್ರಿಟಿಷ್ ಲೇಖಕನ ಕಾನೂನು ಗ್ರಂಥದಲ್ಲಿ 'ಹಿಂದೂ' ಎಂಬ ಪದ ಬಳಕೆಗೆ ಅಧಿಕೃತವಾಗಿ ಜಾರಿಗೆ ತರುವ ಮುಂಚೆ ಎಷ್ಟರಮಟ್ಟಿಗೆ ಇದು ಬಳಕೆಯಲ್ಲಿತ್ತು?(A Treatise on the Hindu Law of Inheritaule is a Gready 1868- Madras page 47)

ಸೇವೆಯ ಹೆಸರಿನಲ್ಲಿ ನೀವು ಹರಡಬಹುದಾದ ಧರ್ಮ ಗಾಂಧೀಜಿಯವರ ಭಗವದ್‌ಗೀತೆಯ ತಳಹದಿಯದೋ? ಮನು ವಿರಚಿತ ಜಾತಿಮತದ ಕೆಸರಿನಲ್ಲಿ ಹೊರಳಾಡುತ್ತಿರುವ ಧರ್ಮವೋ? ಅಥವಾ ಟಿಳಕರ ವೇದಗಳು ಮಾನ್ಯವಿದ್ದವರದೊ? ನೀವು ತೀರ್ಮಾನಿಸಿಕೊಂಡಿದ್ದೀರಿ.

ಏಕೆಂದರೆ ಭಾರತೀಯನಿಗೆ ಬೇಕಾಗಿರುವುದು ಹಸಿವೆ ಹೋಗಲಾಡಿಸುವ ಸ್ವಾಭಿಮಾನದಿಂದ ಬದುಕುವ, ಬಡತನ ನೀಗಿಸಿಕೊಳ್ಳುವ ಅವಶ್ಯಕತೆ ಮಾತ್ರ.

ನೀವು ಯಾವಾಗ ಈ ದೇಶವನ್ನು ಅಧೋಗತಿಗೆ ತಳ್ಳಲು ಅಥವಾ ಕಳಂಕಕ್ಕೀಡೆ ಮಾಡಿಕೊಡಲು ಬಯಸುತ್ತೀರೋ ಆಗಲೇ ಧರ್ಮದ ಮೊರೆ ಅಥವಾ ಗ್ರಂಥದ ಮೊರೆ ಹೋಗಿದ್ದೀರಿ. ನಿಷೇಧಕ್ಕೊಳಗಾದಾಗ ಸತ್ಯನಾರಾಯಣ ಪೂಜೆ, ರಾಮಚರಿತ ಮಾನಸ, ಅಧಿಕಾರ ಬೇಕೆಂದಾಗ ರಾಮಮಂದಿರ ಇನೇ ನಿಮ್ಮ ಕಾರ್ಯಸೂಚಿ.

ತನ್ನನ್ನು ಒಂದು ಸಾಮಾಜಿಕ ಸಾಂಸ್ಕೃತಿಕ ಸಂಘಟನೆ ಎಂದು ಕರೆದುಕೊಳ್ಳುವ ಆರ್.ಎಸ್‌ಎಸ್ ಅಂಗಸಂಸ್ಥೆ ಭಜರಂಗದಳದ ಪ್ರಮೋದ್ ಮುತಾಲಿಕ್, ಒಂದು ಪತ್ರಿಕೆ ಸತ್ಯ ಬರೆದುದ್ದಕ್ಕಾಗಿ ಹೇಳುತ್ತಾರೆ "ಲಂಕೇಶ್ ಪತ್ರಿಕೆಯನ್ನು ಯಾರೂ ಓದೋಹಾಗಿಲ್ಲ, ಮಾರೋಹಾಗಿಲ್ಲ, ಕದ್ದು ಮುಚ್ಚಿ ಓದಿದವರ ನಾಲಿಗೆ ಸೀಳುತ್ತೇವೆ. ಮಾರುವ ಏಜೆಂಟರ ಕಾಲು ಕೈ ಮುರಿದು ಅವರ ಮನೆಗಳಿಗೆ ಬೆಂಕಿ ಹಚ್ಚುತ್ತೇವೆ" ಎಂದಿದ್ದಾರೆ.

ಹಿಂದೂ ವಿರೋಧಿಗಳನ್ನು ಕೊಚ್ಚಿ ಹಾಕಿ ಎಂದವರ ಕೈಗೆ ಪ್ರಜಾಪ್ರಭುತ್ವದ ಕೀಲಿ ಕೊಟ್ಟರೆ ಏನಾಗಬಹುದು?


ಇವರು ಹಬ್ಬಿಸಿದ ವಿಷಬಳ್ಳಿ, ಬಜೆಪಿ ಚುನಾವಣೆ ಬಂದರೆ ಕಾರ್ಗಿಲ್ ಸಮಸ್ಯೆ, ಇಲ್ಲಾ ರಾಮಮಂದಿರದ ತಯಾರಿ ಅಥವಾ ಫೋಟೋ ಬಾವುಟಗಳ ದೇಶಾಭಿಮಾನ.

ನಿಮ್ಮ ಕರಪತ್ರದಲ್ಲಿದೆ 'ಹಿಂದೂಗಳಾದ ನಾವೆಲ್ಲರೂ ಸೋದರರು ಎಂಬುದನ್ನು ಸಂಘದಲ್ಲಿ ಬಲವಾಗಿ ಮಂಡಿಸುತ್ತೇವೆ" ನನ್ನ ಅನುಭವ. ನಮ್ಮೂರಿನ ದೇವಸ್ಥಾನಗಳಲ್ಲಿ ನಮಗೆ ಪ್ರವೇಶವಿಲ್ಲ. ಅಂದರೆ ಸಂಘದಲ್ಲಿ ಸೋದರರು ಸಮಾಜದಲ್ಲಿ ಸೋದರರಲ್ಲ ಎಂದರ್ಥವೇ?

ಅಸಲು ಹಿಂದೂ ಎಂದರೆ ಯಾರು? ಈ ಪ್ರಶ್ನೆಗೆ ಉತ್ತರ ಬೇಕಿದೆ. 1939 ರಲ್ಲಿ ಅಂಬೇಡ್ಕರ್ ನಿಮ್ಮ ಶಿಬಿರ ಮೆಚ್ಚಿಕೊಂಡರು. ಓ.ಕೆ. ಅವರ‍್ಯಾಕೆ ಬೌದ್ಧ ಧರ್ಮಾವಲಂಬಿಯಾದರು? ಇಂದು ದೇಶ ನಿಜವಾದ ಸಂಕಷ್ಟದಲ್ಲಿದೆ. ಸಮಾಜ ವೇಗ ಗತಿಯಲ್ಲಿ ವಿಜ್ಞಾನದಿಂದ ಪ್ರಗತಿಯೆಡೆಗೆ ಸಾಗುತ್ತಿದೆ.

ನಿಮ್ಮಿಂದ ಭಾರತಕ್ಕೆ ಬೆಂಕಿ ಬೀಳದಿರಲಿ
ರೈತನೂ-ಕಾರ್ಮಿಕನೂ
ನಾಳಿನ ಜೀವ, ಇಂದು ತುಳಿತಕ್ಕೊಳಗಾದವನು
ಹೆಮ್ಮೆಯಿಂದ ಹೇಳುವಂತಾಗಲಿ
ನಮ್ಮ ದೇಶ ಭಾರತ.

ಬಿ.ಆರ್.ರಾಜಕುಮಾರ್,
ಸಾಲಗಾಮ


ರಾಷ್ಟ್ರ ಜಾಗರಣ ಅಭಿಯಾನ

ಸವಲತ್ತು ಕೊಡುವುದಿಲ್ಲ. ಹಿಂದುಗಳಲ್ಲದವರನ್ನು ಈ ದೇಶದಿಂದ ಹೊರಹಾಕಿದರೂ ಈ ದೇಶದ ಜನತೆ ಮೂಲಭೂತ ಸಮಸ್ಯೆಗಳಿಗೆ ಪರಿಹಾರ ದೊರಕದು. ಬಡತನ, ನಿರುದ್ಯೋಗದಂತಹ ಸಮಸ್ಯೆಗಳು ವರ್ಗಸಮಾಜದ ಅನಿಷ್ಟಗಳು. ಎಲ್ಲಾ ಕೋಮುಗಳಲ್ಲಿ ಬಡವರಿದ್ದಾರೆ, ನಿರುದ್ಯೋಗಿಗಳಿದ್ದಾರೆ. ಎಲ್ಲಾ ಕೋಮುಗಳಿಗೆ ಸೇರಿದ ಶೋಷಿತರು ಒಂದಾಗಿ ಶೋಷಕ ವರ್ಗವನ್ನು ನಿರ್ನಾಯಕವಾಗಿ ಸೋಲಿಸಿ, ವರ್ಗರಹಿತ ಸಮಾಜವನ್ನು ನಿರ್ಮಾಣ ಮಾಡಲು ಸಾಧ್ಯವಾದಾಗ ಮಾತ್ರ ಇಂತಹ ಮೂಲಭೂತ ಸಮಸ್ಯೆಗಳಿಗೆ ಪರಿಹಾರ ಸಾಧ್ಯ. ದೇಶದಲ್ಲಿ ಇಂದು ಶೋಷಿತ ವರ್ಗಗಳಲ್ಲಿ ವರ್ಗ ಜಾಗೃತಿ ಹೆಚ್ಚುತ್ತಿದ್ದು ಅವರು ತಮ್ಮ ಕೋಮು ಬೇಧಗಳನ್ನು ಬದಿಗಿಟ್ಟು ಒಂದಾಗುತ್ತಿರುವಾಗ ಅವರ ಗಮನವನ್ನು ಬೇರೆ ಕಡೆಗೆ ಸೆಳೆಯುವುದೇ ಆರ್.ಎಸ್.ಎಸ್. ಉದ್ದೇಶವಾಗಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಆರ್.ಎಸ್.ಎಸ್. ಭಾಗವಹಿಸಿರಲಿಲ್ಲ ಎಂಬ ಸತ್ಯ ಸಂಗತಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮುಖಂಡರಿಗೆ ನುಂಗಲಾರದ ತುತ್ತು. ಈ ಸತ್ಯ ಸಂಗತಿಯನ್ನು ಚರಿತ್ರೆಯಿಂದ ಹೇಗಾದರೂ ಮಾಡಿ ಅಳಿಸಿ ಹಾಕಲು ಅದು ಈಗ ಕಾರ್ಯೋನ್ಮುಖವಾಗಿದೆ. ಇತಿಹಾಸವನ್ನು ತಿರುಚಿ ಬರೆಯುವ ಕೆಲಸ ಭರದಿಂದ ಸಾಗಿದೆ. ಸುಳ್ಳು ಇತಿಹಾಸದ ಪುಸ್ತಕಗಳನ್ನು ಬರೆದು ಪ್ರಕಟಿಸಲು ಕೋಟಿಗಟ್ಟಲೆ ರೂಪಾಯಿಗಳನ್ನು ಖರ್ಚು ಮಾಡಲಾಗುತ್ತಿದೆ. ರಾಷ್ಟ್ರ ಜಾಗರಣ ಅಭಿಯಾನ ಕರಪತ್ರದಲ್ಲಿಯೂ ಕ್ವಿಟ್ ಇಂಡಿಯಾದಂತಹ ಚಳುವಳಿಗಳಲ್ಲಿ ಸಂಘವು ಭಾಗಿಯಾಗಿತ್ತು ಎಂದು ನಂಬಿಸುವ ಪ್ರಯತ್ನ ಮಾಡಲಾಗಿದೆ. ಆದರೆ ಸ್ವಾತಂತ್ರ್ಯ ಚಳುವಳಿಯಲ್ಲಿ ಆರ್.ಎಸ್.ಎಸ್. ಭಾಗವಹಿಸಿದ್ದನ್ನು ಸಾಬೀತು ಪಡಿಸಲು ಯಾವ ಸಾಕ್ಷ್ಯಾಧಾರಗಳೂ ಇವರ ಬಳಿಯಲ್ಲಿ ಇಲ್ಲ. ಲಭ್ಯವಿರುವ ದಾಖಲೆಗಳ ಪ್ರಕಾರ ಆರ್.ಎಸ್.ಎಸ್. ಬ್ರಿಟಿಷರ ದಲ್ಲಾಳಿಯಾಗಿ ಕೆಲಸ ಮಾಡಿತೇ ಹೊರತು ಬ್ರಿಟಿಷರ ಪ್ರಧಾನ ವೈರಿಯಾಗಿ ಎಂದೂ ಗುರುತಿಸಲಿಲ್ಲ. ಕಮ್ಯುನಿಸ್ಟರ ವಿರುದ್ಧ ಹಾಗೂ ಅಲ್ಪಸಂಖ್ಯಾತ ಮುಸಲ್ಮಾನರ ವಿರುದ್ಧ ತಮ್ಮ ದ್ವೇಷವನ್ನು ಸಾಧಿಸಲು ಅದು ಬ್ರಿಟಿಷ್ ಆಳ್ವಿಕೆಯನ್ನು ಬಳಸಿಕೊಳ್ಳಲು ಹಿಂದೇಟು ಹಾಕಲಿಲ್ಲ. ಸಂಘದ 'ಹಿಂದುರಾಷ್ಟ್ರ' ಕಲ್ಪನೆಯು ಹಿಂದುಗಳನ್ನು ಆಕರ್ಷಿಸುವಲ್ಲಿ ವಿಫಲವಾದ ಕಾರಣದಿಂದಾಗಿ ಸಂಘವು ಮುಸ್ಲಿಂ ವಿರೋಧಿ ಪ್ರಚಾರವನ್ನು ತೀವ್ರಗೊಳಿಸಿತು. ಬ್ರಿಟಿಷ್ ವಸಾಹತು ಆಳ್ವಿಕೆಯ ವಿರುದ್ಧ ಬೆಳೆದುಬರುತ್ತಿದ್ದ ಹಿಂದು ಮುಸಲ್ಮಾನರ ಜಂಟೀ ಪ್ರತಿರೋಧ ಸಂಘಕ್ಕೆ ಸ್ವೀಕಾರಾರ್ಹವಾಗಿರಲಿಲ್ಲ. ಆದ್ದರಿಂದ ಅದು ರಾಷ್ಟ್ರೀಯ ಆಂದೋಲನದಿಂದ ದೂರ ಉಳಿಯಿತು. ಆರ್.ಎಸ್.ಎಸ್.ಗೆ ಸಹಾನುಭೂತಿ ಹೊಂದಿರುವ ಚರಿತ್ರೆಗಾರರು ಸಹ ಸ್ವಾತಂತ್ರ್ಯ ಚಳುವಳಿಯಲ್ಲಿ ಆರ್.ಎಸ್.ಎಸ್. ಭಾಗವಹಿಸಿರಲಿಲ್ಲವೆಂದು ಮತ್ತು ಅದರ ಬದಲಾಗಿ ಬ್ರಿಟಿಷರಿಂದ ರಿಯಾಯ್ತಿಗಳನ್ನು ಪಡೆದುದನ್ನು ಕುರಿತು ಬರೆದಿದ್ದಾರೆ. ನಾನಾಜಿ ದೇಶ್‌ಮುಖ್ ಸಹ 'ಆರ್.ಎಸ್.ಎಸ್. ಒಂದು ಸಂಘಟನೆಯಾಗಿ ರಾಷ್ಟ್ರೀಯ ವಿಮೋಚನಾ ಚಳುವಳಿಯಲ್ಲಿ ಏಕೆ ಭಾಗವಹಿಸಲಿಲ್ಲ?'' ಎಂದು ಪ್ರಶ್ನಿಸಿದ್ದಾರೆ. 'ಸಂಘವು ತನ್ನನ್ನು ಕಾನೂನಿನ ಚೌಕಟ್ಟಿನೊಳಗೆ ಇಟ್ಟುಕೊಂಡಿತ್ತು. ಮತ್ತು 1942 ರ ಆಗಸ್ಟ್ ನಲ್ಲಿ ನಡೆದ ಗಲಭೆಗಳಲ್ಲಿ ಭಾಗವಹಿಸಿರಲಿಲ್ಲ'' ಎಂದು 1942 ಕ್ವಿಟ್ ಇಂಡಿಯಾ ಚಳುವಳಿಯ ಕುರಿತಾದ ಬಾಂಬೆ ಗೃಹ ಇಲಾಖೆಯ ದಾಖಲೆ ಸ್ಪಷ್ಟಪಡಿಸುತ್ತದೆ. 'ಹಿಂದೂ ರಾಷ್ಟ್ರ' ನಿರ್ಮಾಣದ ಗುರಿಯು ಸಂಘವನ್ನು ಬ್ರಿಟಿಷರ ಮಿತ್ರರನ್ನಾಗಿಸಿತ್ತು. ಕಾಂಗ್ರೆಸ್ ನೇತೃತ್ವದ ಚಳುವಳಿಯಿಂದಾಗಿ ಸಂಘಕ್ಕೆ ತನ್ನ ಗುರಿ ಸಾಧನೆಗೆ ಅಡ್ಡಿಯಾಗುವುದೆಂಬ ಅಭಿಪ್ರಾಯ ಬಲವಾಗಿತ್ತು. ಕಾಂಗ್ರೆಸ್ 1931 ರ ತನ್ನ ಕರಾಚಿ ಅಧಿವೇಶನದಲ್ಲಿ ಸ್ವತಂತ್ರ ಭಾರತವು ಒಂದು ಸೆಕ್ಯೂಲರ್ ಪ್ರಜಾಸತ್ತಾತ್ಮಕ ಗಣರಾಜ್ಯವಾಗಲಿದೆ ಎಂಬ ಘೋಷಣೆ ಮಾಡಿದಂದಿನಿಂದ ಸಂಘವು ರಾಷ್ಟ್ರೀಯ ಆಂದೋಲನವನ್ನು ಬಹಿರಂಗವಾಗಿ ವಿರೋಧಿಸತೊಡಗಿತು. ಇದರ ಪರಿಣಾಮವಾಗಿಯೇ ಹಿಂದು ರಾಷ್ಟ್ರದ ಬದಲು ಸೆಕ್ಯೂಲರ್ ಭಾರತವನ್ನು ಆಯ್ಕೆ ಮಾಡಿಕೊಂಡಿದ್ದ, ಹಿಂದುಗಳಲ್ಲೇ ಮಹಾನ್ ಹಿಂದು, ಮಹಾತ್ಮಗಾಂಧಿಯವರ ಕಗ್ಗೊಲೆಯಾಯಿತು.

ಭಾರತದ ರಾಷ್ಟ್ರೀಯ ವಿಮೋಚನಾ ಚಳುವಳಿಯಲ್ಲಿ ಎಲ್ಲಿಯೂ ಕಾಣಿಸಿಕೊಂಡಿರದ ಆರ್.ಎಸ್.ಎಸ್. ಭಾರತೀಯರ ಹೃದಯಗಳಲ್ಲಿ ಅತ್ಯಂತ ಗೌರವದ ಸ್ಥಾನ ಹೊಂದಿರುವ ಕೆಲವು ಕ್ರಾಂತಿಕಾರಿಗಳಿಗೆ ಕೇಸರಿ ಬಣ್ಣ ಹಚ್ಚುವ ವ್ಯರ್ಥ ಪ್ರಯತ್ನ ನಡೆಸುತ್ತಿದೆ. ಭಾರತ ಯುವಕರಿಗೆ ಇಂದಿಗೂ ಸ್ಫೂರ್ತಿಯ ಸೆಲೆಯಾಗಿರುವ ಭಗತ್ ಸಿಂಗ್, ರಾಜಗುರುರಂತಹ ಕ್ರಾಂತಿಕಾರಿಗಳು ಎಲ್ಲಾ ಜಾತಿ, ಮತಧರ್ಮದ ಎಲ್ಲೆಗಳನ್ನು ಮೀರಿ ಬೆಳೆದವರು? ಕೋಮುವಾದ ವಿರೋಧಿಸಿದವರು, ಸಮಾಜವಾದಿ ತತ್ವಗಳನ್ನು ಒಪ್ಪಿದ್ದವರು. ಆದರೆ ರಾಷ್ಟ್ರೀಯ ಜಾಗರಣ ಅಭಿಯಾನಕ್ಕಾಗಿ ಆರ್.ಎಸ್.ಎಸ್. ಪ್ರಕಟಿಸಿರುವ ಕರಪತ್ರಗಳಲ್ಲಿ ಭಗತ್ ಸಿಂಗ್, ರಾಜಗುರು, ಮೊದಲಾದವರು ಆರ್.ಎಸ್.ಎಸ್.ಗೆ ನಿಷ್ಠೆಯುಳ್ಳವರಾಗಿದ್ದರು ಎಂಬ ಅಪ್ಪಟ ಸುಳ್ಳನ್ನು ಯಾವುದೇ ನಾಚಿಕೆ ಇಲ್ಲದೆ ಪ್ರಕಟಿಸಿದೆ. ಲಾಲಾ ಲಜಪತರಾಯರ ಹತ್ಯೆಯ ಸೇಡು ತೀರಿಸಿಕೊಳ್ಳುವ ವಿಷಯದಲ್ಲಿ ಭಗತ್ ಸಿಂಗ್ ಅವರು ಆರ್.ಎಸ್.ಎಸ್.ಸ್ಥಾಪಕ ಕೆ.ಬಿ. ಹೆಡೆಗೆವಾರರನ್ನು ನಾಗ್ಪುರದಲ್ಲಿ ಕಂಡಿದ್ದರು ಎಂದೂ ರಾಜಗುರು ಅವರು ಬೋನ್ಸ್ಲೆ ವೇದಶಾಲೆಯಲ್ಲಿ ಆರ್.ಎಸ್.ಎಸ್. ಸ್ವಯಂಸೇವಕರಾದರೂ ಎಂದೂ, ಹೆಡಗೆವಾರ ಅವರು ರಾಜಗುರು ಅವರಿಗೆ ಭೂಗತರಾಗಿರಲು ನೆರವಾದರೆಂದೂ ಆನಂತರ ಹೆಡಗೆವಾರರು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಆರ್.ಎಸ್.ಎಸ್. ಸಂಘವನ್ನು ಸ್ಥಾಪನೆ ಮಾಡಿದ್ದಾರೆ ಎಂದು ಸುಳ್ಳು ಬರೆದಿದ್ದಾರೆ. ಭಾರತದ ಸ್ವಾತಂತ್ರ್ಯ ಹೋರಾಟದ ಸಾಗರಕ್ಕೆ ನೂರಾರು ನದಿಗಳು ಹರಿದು ಬಂದಿದ್ದರೂ ಅವುಗಳಲ್ಲಿ ಎಲ್ಲಿಯೂ ಆರ್.ಎಸ್.ಎಸ್. ಸುಳಿವು ಇಲ್ಲ. ಆರ್.ಎಸ್.ಎಸ್. ತನ್ನ ದುಷ್ಟ ಉದ್ದೇಶವನ್ನು ಮರೆಮಾಚಲು ಹತಾಶ ಪ್ರಯತ್ನ ನಡೆಸುತ್ತಿದೆ ಎನ್ನುವುದು ಈ ಸುಳ್ಳುಗಳಿಂದ ಸಾಬೀತಾಗುತ್ತದೆ.

ಸುಳ್ಳನ್ನು ಪದೆ ಪದೆ ಪುನರುಚ್ಚರಿಸುವ ಮೂಲಕ ಜನ ಅದನ್ನು ನಂಬುವಂತೆ ಮಾಡಬಹುದು ಎಂಬ ಹಿಟ್ಲರನ ಪ್ರಚಾರ ಮಂತ್ರಿಯಾಗಿದ್ದ ಗೋಬೆಲ್ಸ್‌ನ ತಂತ್ರವನ್ನು ಆರ್.ಎಸ್.ಎಸ್. ಹುಟ್ಟಿದಾಗಿನಿಂದ ತನ್ನದಾಗಿಸಿಕೊಂಡಿದೆ. ಈಗ ರಾಷ್ಟ್ರ ಜಾಗರಣ ಅಭಿಯಾನ ಎಂಬ ನಾಟಕದಲ್ಲಿ ಮತಾಂಧತೆಯನ್ನು ತುಂಬಲು ಅದೇ ತಂತ್ರವನ್ನು ಬಳಸಲಾಗುತ್ತಿದೆ. ಆದರೆ ಹಿಂದುಗಳು ಎಲ್ಲರೂ ಬುದ್ದಿಗೇಡಿಗಳು ಎಂದು ಆರ್.ಎಸ್.ಎಸ್. ತಿಳಿದುಕೊಂಡಿದ್ದರೆ ಅದು ಅದರ ಭ್ರಮೆ ಅಷ್ಟೇ. ಹಿಂದುಯೇತರರ ಬಗ್ಗೆ ಸಹನೆ ಇಲ್ಲದ, ಆಕ್ರಮಣಕಾರಿ ಹಿಂದುತ್ವವನ್ನು ಸ್ವಾಮಿ ವಿವೇಕಾನಂದರಂತಹ ಒಬ್ಬ ಸಂತನು ಸಹ ಬೋಧಿಸಿಲ್ಲ ಎಂಬ ವಿಚಾರ ಒಬ್ಬ ಸಾಮಾನ್ಯ ಹಿಂದುವಿಗೂ ಗೊತ್ತಿದೆ. ಹಿಂದು ಧರ್ಮವಾಗಲೀ, ಧರ್ಮಗ್ರಂಥಗಳಾಗಲಿ, ಧರ್ಮಬೋಧಕರಾಗಲಿ ಮುಸಲ್ಮಾನರ ಮಸೀದಿಗಳನ್ನು ಉರುಳಿಸಬೇಕೆಂದಾಗಲಿ, ಕ್ರೈಸ್ತರ ಪಾದ್ರಿಗಳನ್ನು ಜೀವಂತ ಸುಡಬೇಕೆಂದಾಗಲಿ ಹೇಳುವುದಿಲ್ಲವಲ್ಲ. ಇವರು ಬೋಧಿಸುವ ಹಿಂದೂ ರಾಷ್ಟ್ರದ ಕಲ್ಪನೆ ಹಿಟ್ಲರನ ಫ್ಯಾಸಿಸ್ಟ್ ಕಲ್ಪನೆಯಾಗಿದೆ. ಯಾವ ಒಬ್ಬ ಒಳ್ಳೆಯ ಹಿಂದು ಸಹ ಒಪ್ಪಲಾಗದ ಕಲ್ಪನೆ.

ಬ್ರಿಟಿಷರಿಗೆ ತುಂಬಾ ಬೇಕಾದವರಾಗಿ ನಡೆದುಕೊಂಡಿದ್ದ ಈ ಸಂಘಕ್ಕೆ ದೇಶವು ಮತ್ತೊಮ್ಮೆ ಸಾಮ್ರಾಜ್ಯವಾದಿ ರಾಷ್ಟ್ರಗಳ ಗುಲಾಮಗಿರಿಗೆ ತುತ್ತಾಗುತ್ತಿರುವ ಬಗ್ಗೆ ಎಳ್ಳಷ್ಟು ಚಿಂತೆಯಿಲ್ಲ. ಜಾಗತೀಕರಣ, ಉದಾರೀಕರಣದ ನೀತಿಗಳಿಂದಾಗಿ ದೇಶವು ತನ್ನ ಆರ್ಥಿಕ ಸ್ವಾತಂತ್ರ್ಯ ಹಾಗೂ ಸಾರ್ವಭೌಮತೆಯನ್ನು ಕಳೆದುಕೊಳ್ಳುವ ಅಪಾಯಕ್ಕೆ ಸಿಲುಕಿರುವಾಗ ಜನತೆಯನ್ನು ಆ ಬಗ್ಗೆ ಎಚ್ಚರಿಸಿ, ಅವರ ಐಕ್ಯತೆಯನ್ನು ಬಲಪಡಿಸಿ ಸಾಮ್ರಾಜ್ಯಶಾಹಿಗಳು ಒಡ್ಡಿರುವ ಸವಾಲುಗಳನ್ನು ಎದುರಿಸಲು ಅವರನ್ನು ಸಜ್ಜುಗೊಳಿಸುವ ಬದಲು ಭಾರತೀಯರನ್ನು ಕೋಮು ಆಧಾರದಲ್ಲಿ ವಿಭಜಿಸಿ ರಾಷ್ಟ್ರವನ್ನು ದುರ್ಬಲಗೊಳಿಸಲು ಹೊರಟಿದ್ದಾರೆ. ದೇಶ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡರೆ ಅವರು ದುಃಖ ಪಡುವುದಿಲ್ಲ. ಏಕೆಂದರೆ ಸ್ವಾತಂತ್ರ್ಯವನ್ನು ಪಡೆಯಲು ಅವರು ಯಾವ ತ್ಯಾಗವನ್ನು ಮಾಡಿಲ್ಲ. ಯಾವುದಾದರೂ ವಿದೇಶಿ ಶಕ್ತಿಯ ನೆರವು ಪಡೆದು ಭಾರತವನ್ನು ಹಿಂದೂ ರಾಷ್ಟ್ರ ಮಾಡಲು ಸಾಧ್ಯವಾಗುವುದಾದರೆ ಅದಕ್ಕೂ ಅವರು ಹೇಸುವವರಲ್ಲ.

ಎಳೆಯ ಮನಸುಗಳಿಗೆ ವಿಷ ಉಣಿಸುತ್ತಿದ್ದಾರೆ ಜೋಕೆ!

ನಾವು ನಮ್ಮ ಮಕ್ಕಳನ್ನು ಶಾಲೆ-ಕಾಲೇಜುಗಳಿಗೆ ಕಳುಹಿಸುತ್ತೇವೆ. ಆದರೆ ನಮ್ಮ ಮಕ್ಕಳು ಶಾಲೆ-ಕಾಲೇಜುಗಳಲ್ಲಿ ಏನನ್ನು ಕಲಿಯುತ್ತಾರೆ, ಅವರ ಎಳೆಯ ಮನಸ್ಸುಗಳಲ್ಲಿ ಏನನ್ನು ತುಂಬಲಾಗುತ್ತದೆ ಎಂದು ನಾವು ತಿಳಿಯುವುದು ಹೇಗೆ?

ಪಂಜಾಬದಲ್ಲಿ ಕಳೆದ ನವೆಂಬರ್ ತಿಂಗಳಲ್ಲಿ ಶಾಲಾ ಮಕ್ಕಳಿಗಾಗಿ ಒಂದು ಜನರಲ್ ನಾಲೇಜ್ ಪರೀಕ್ಷೆಯೊಂದನ್ನು ನಡೆಸಲಾಯಿತು. ಸುಮಾರು 55 ಸಾವಿರ ಶಾಲಾ ಮಕ್ಕಳು ಈ ಪರೀಕ್ಷೆಯಲ್ಲಿ ಭಾಗವಹಿಸಿದ್ದರು. ಪರೀಕ್ಷೆಯಲ್ಲಿ ಅತಿ, ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗೆ ಹತ್ತು ಸಾವಿರ ರೂ. ಬಹುಮಾನ! ಎರಡನೇ ಸ್ಥಾನ ಪಡೆದವನಿಗೆ ರೂ. 7.500! ಮೂರನೇ ಸ್ಥಾನಕ್ಕೆ ರೂ. 5000! ಒಂದೊಂದು ಜಿಲ್ಲೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗೆ ರೂ. 1000! ಎರಡನೇ ಸ್ಥಾನಕ್ಕೆ ರೂ. 750, ಮೂರನೇ ಸ್ಥಾನಕ್ಕೆ ರೂ. 500. ಪರೀಕ್ಷೆಯಲ್ಲಿ ಭಾಗವಹಿಸಿ ಶೇಕಡಾ 60 ಕ್ಕೂ ಹೆಚ್ಚು ಅಂಕ ಪಡೆಯುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಒಂದು ಸರ್ಟಿಫಿಕೇಟ್!

'ಚತ್ತರ್ ಶಕ್ತಿ' ಎಂಬ ಆರ್.ಎಸ್.ಎಸ್. ಅಂಗಸಂಸ್ಥೆಯು ಪಂಜಾಬದಲ್ಲಿ ಈ ರೀತಿಯ ಸರಣೀಯ ಪರೀಕ್ಷೆಗಳನ್ನು ನಡೆಸುತ್ತಿದೆ. ಪರೀಕ್ಷೆಯಲ್ಲಿ ಉತ್ತರಿಸಬೇಕಾಗುವ ಪ್ರಶ್ನೆಗಳಿಗೆ ಉತ್ತರ ಪಡೆಯಲು ಚತ್ತರ್ ಶಕ್ತಿ ಪ್ರಕಟಿಸಿರುವ ಒಂದು ಇತಿಹಾಸ ಪುಸ್ತಕವನ್ನು ಒದಗಿಸಲಾಗುತ್ತದೆ. ಸುಮಾರು 70% ಪ್ರಶ್ನೆಗಳನ್ನು ಈ ಪುಸ್ತಕದಿಂದ ಕೇಳಲಾಗುತ್ತದೆ.

ಈ ಪುಸ್ತಕದೊಳಗಿರುವ ವಿಚಾರಗಳ ಸ್ಯಾಂಪಲ್ಸ್ ಹೀಗಿವೆ.

- ರಾಮ ಜನ್ಮಭೂಮಿಯ ವಿಮೋಚನೆಗಾಗಿ ಇಲ್ಲಿಯವರೆಗೆ 1526 ಬೃಹತ್ ಕದನಗಳು ನಡೆದಿವೆ.
- ದಾದ್ರ ಮತ್ತು ನಗರಹವೇಲಿ ದ್ವೀಪ ಸಮುದಾಯವನ್ನು ಆರ್.ಎಸ್.ಎಸ್. 1954 ರಲ್ಲಿ ಪೋರ್ಚುಗೀಸರಿಂದ ವಿಮೋಚನೆ ಮಾಡಿ ಭಾರತೀಯ ಸೈನ್ಯಕ್ಕೆ ಒಪ್ಪಿಸಿತು.
- ಗೋವಾ ವಿಮೋಚನೆಯ ರೂಪುರೇಷೆಗಳನ್ನು ಆರ್.ಎಸ್.ಎಸ್. ಸಿದ್ಧಪಡಿಸಿತ್ತು.

ಆರ್.ಎಸ್.ಎಸ್. ದೇಶದ ಇತಿಹಾಸವನ್ನು ತನಗೆ ಅನುಕೂಲವಾಗುವಂತೆ ಬರೆಯುವ ಭಾರಿ ಪ್ರಯತ್ನದಲ್ಲಿ ತೊಡಗಿದೆ. ದೇಶದ ಸ್ವಾತಂತ್ರ್ಯ ಚಳುವಳಿಗೆ ಅದು ಮಾಡಿರುವ ದ್ರೋಹದ ದಾಖಲೆಯನ್ನು ಅಳಿಸಿಹಾಕುವ ದುಸ್ಸಾಹಸಕ್ಕೆ ಅದು ಇಳಿದಿದೆ. ಆರ್.ಎಸ್.ಎಸ್. ನ ಕಟ್ಟುಕತೆಗಳನ್ನು ಯಾರೂ ನಂಬುವ ಸಾಧ್ಯತೆ ಇಲ್ಲ. ಮೇಲೆ ಕೊಟ್ಟಿರುವ ಸ್ಯಾಂಪಲ್ಸ್ ಇನ್ನೊಮ್ಮೆ ಗಮನಿಸಿ. ಸುಳ್ಳು ಇತಿಹಾಸದ ಸೃಷ್ಟಿ!

ಸುಳ್ಳನ್ನು ಸತ್ಯವಾಗಿಸಲು ಅದರ ಮುದ್ರಣ ನೆರವಾಗುತ್ತದೆ. ಮುದ್ರಿತ ವಿಷಯಗಳನ್ನು ಜನ ಸುಲಭವಾಗಿ ನಂಬುತ್ತಾರೆ. ಆರ್.ಎಸ್.ಎಸ್. ಇತಿಹಾಸವನ್ನು ತಿರುಚುವ ತನ್ನ ಹತಾಶ ಪ್ರಯತ್ನದ ಅಂಗವಾಗಿ ಸುಳ್ಳುಗಳ ಸರಮಾಲೆಯೊಂದನ್ನು ಹೆಣೆದು ಇತಿಹಾಸದ ಪುಸ್ತಕವಾಗಿ ಮಕ್ಕಳ ಕೈಯಲ್ಲಿ ಕೊಟ್ಟು ಅವರ ಎಳೆಯ ಮನಸ್ಸುಗಳಲ್ಲಿ ಅಲ್ಪಸಂಖ್ಯಾತ ಮುಸಲ್ಮಾನರ ಬಗ್ಗೆ ಕ್ರೈಸ್ತರ ಬಗ್ಗೆ ದ್ವೇಷ ತುಂಬುವ ಕೆಲಸ ಮಾಡುತ್ತಿದೆ. ಅನೇಕ ಶಾಲಾ ಕಾಲೇಜುಗಳ ಶಿಕ್ಷಕರು, ಉಪನ್ಯಾಸಕರೇ ಕೋಮು ವಾದಿಗಳಾಗಿದ್ದು, ಅವರ ಬಳಿ ಹೋಗುವ ನಮ್ಮ ಮಕ್ಕಳಿಗೆ ಅಪಾಯವಿದೆ. ಮಕ್ಕಳಲ್ಲಿ ಕೋಮು ದ್ವೇಷವನ್ನು ಬೆಳೆಸುವ ಶಿಕ್ಷಕರ ಬಗ್ಗೆ ಪಾಲಕರು ಎಚ್ಚರಿಕೆ ವಹಿಸಬೇಕು. ಅವರಿಗೆ ಸರಿಯಾಗಿ ತಾಕೀತು ಮಾಡಬೇಕು. ನಮ್ಮ ಮಕ್ಕಳು ಯಾವ ಪುಸ್ತಕಗಳನ್ನು ಓದುತ್ತಾರೆ ಎಂಬುದರ ಬಗ್ಗೆ ಗಮನ ನೀಡಬೇಕು. ನಮ್ಮ ಮಕ್ಕಳು ಕೋಮುವಾದಿ ಜಾತಿವಾದಿ ಸಂಘಟನೆಗಳೊಂದಿಗೆ ಸಂಪರ್ಕ ಇಟ್ಟುಕೊಳ್ಳದಂತೆ ನೋಡಿಕೊಳ್ಳಬೇಕು. ಅವರು ಪ್ರಗತಿಪರ ವಿದ್ಯಾರ್ಥಿ ಯುವಜನ ಸಂಘಟನೆಗಳಲ್ಲಿ ಕ್ರಿಯಾಶೀಲರಾಗಿರುವಂತೆ ನೋಡಿಕೊಳ್ಳಬೇಕು.

ಮತಾಂಧತೆಯ ಮಾರಾಟ

ಕೇಂದ್ರದ ನೀತಿಗಳ ವಿರುದ್ಧ ಎಲ್ಲಾ ರಂಗಗಳಲ್ಲಿ ತೀವ್ರ ಬೇಸರ, ಅಸಂತೃಪ್ತಿ, ಪ್ರತಿಭಟನೆ ವ್ಯಕ್ತವಾಗುತ್ತಿರುವಾಗ ಜನರ ಗಮನ ಬೇರೆಡೆಗೆ ಸೆಳೆಯಲು ಆರ್‌ಎಸ್‌ಎಸ್ ತನ್ನ ಅಭಿಯಾನ ಕಾರ್ಯಕ್ರಮವನ್ನು ಹಳ್ಳಿ ಹಳ್ಳಿಗೆ-ಮನೆ ಮನೆಗೆ 2 ರೂಪಾಯಿ ಕೊಡಿರೆಂದು ಭಾರತ ಮಾತೆಯ ಫೋಟೋ ಇರುವ ಕ್ಯಾಲೆಂಡರ್‌ನ್ನು ಮಾರಾಟ ಮಾಡುತ್ತಿದ್ದಾರೆ. ನಮ್ಮ ಹಳ್ಳಿಗರು ಅದನ್ನು ಜಗನ್ಮಾತೆ 'ದೇವಿ' ಯ ಆದಿಶಕ್ತಿ ಫೋಟೋವೆಂದು ಭಕ್ತಿಯಿಂದ ಪಡೆಯುತ್ತಿದ್ದಾರೆ. ಹಲವು ವರ್ಣಗಳಿಂದ ಆಕರ್ಷಕವಾಗಿ ಪ್ರಿಂಟ್ ಮಾಡಲಾಗಿದೆ. ಅಲ್ಲಿನ ಭಾರತ ಬಾಂಗ್ಲಾದೇಶ, ಪಾಕಿಸ್ತಾನ, ಅಫಘಾನಿಸ್ತಾನ, ಬರ್ಮಾಗಳನ್ನು ಒಳಗೊಂಡಿದೆ. ಭಕ್ತಿಯಿಂದ ಪಡೆದು ತಪ್ಪುಪಲ್ಲಿ ದೇವರ ಫೋಟೋಗಳ ಜೊತೆ ತೂಗುಹಾಕುತ್ತಿದ್ದಾರೆ. ನಂತರ ವಿದ್ಯಾರ್ಥಿ-ಯುವಜನರು, ನೌಕರರು, ಮಧ್ಯಮ ವರ್ಗ ಜನರನ್ನು ತೊಡಗಿಸಿಕೊಂಡು ಹಳ್ಳಿಗಳಿಗೆ, ಗುಡಿಸಲುಗಳಿಗೆ ಹೋಗುತ್ತಿದ್ದಾರೆ. ಈಗಾಗಲೇ ಪ್ರತಿ ಊರು, ಓಣಿಗಳಲ್ಲಿ ಅವ್ಯಾಹತವಾಗಿ ಕನಿಷ್ಟ-1 ತಾಸು ಕಾಲ ಹಿಂದೂರಾಷ್ಟ್ರದ ಕುರಿತು ಭಾಷಣ ಮಾಡಲಾಗುತ್ತದೆ. ಜನರ ಭಾವನೆಯಲ್ಲಿ ಮುಸ್ಲಿಂ, ಕ್ರಿಶ್ಚಿಯನ್ ವಿರುದ್ಧ ಮತಾಂಧತೆಯನ್ನು ತುರುಕಲಾಗುತ್ತಿದೆ. ಸಾಧ್ಯವಿದ್ದಲ್ಲಿ ಉದಾ: ಕುರುಗೋಡಿನಲ್ಲಿ ಚರ್ಚ್ ಕಟ್ಟುವುದನ್ನು ವಿರೋಧಿಸಲು ಗ್ರಾಮಪಂಚಾಯತ್‌ಗೆ ತಕರಾರು ಸಲ್ಲಿಸಲು ಪ್ರಚೋದಿಸಲಾಗಿದೆ. ಕುಡುತಿನಿ ಗ್ರಾಮದಲ್ಲಿ ಅಲ್ಲಿನ ಜನರು ಹಳೆಯ ಖಾಲಿಯಿರುವ ದೇವಸ್ಥಾನವನ್ನು ಮಸೀದಿ ಮಾಡಿಕೊಳ್ಳಲಾಗಿದೆಯೆಂದು ಅದನ್ನು ತೆರವು ಮಾಡಬೇಕೆಂದು ಇದಕ್ಕೆ ಹಿಂದೂಗಳೆಲ್ಲ ಒಂದಾಗಬೇಕೆಂದು ಕರೆ ಕೊಡಲಾಗುತ್ತಿದೆ. ಕರಪತ್ರಗಳನ್ನು ಹಂಚಲಾಗುತ್ತಿದೆ. ಪ್ರತಿಯೊಂದು ಹೋಟೆಲ್‌ಗಳಲ್ಲಿ ಸುಂದರವಾದ ಪೋಸ್ಟರ್‌ಗಳನ್ನು ಹಾಕಲಾಗಿದೆ. ಸಭೆಯಲ್ಲಿ ಪಾಲ್ಗೊಂಡವರಿಗೆ ಹಿಂದೂರಾಷ್ಟ್ರದ ಕುರಿತು ಪುಸ್ತಕಗಳನ್ನು ಕಡಿಮೆ ಬೆಲೆಗೆ, ದುಡ್ಡಿಲ್ಲದವರಿಗೆ ಉಚಿತವಾಗಿ ಹಂಚಲಾಗುತ್ತಿದೆ. ಒಟ್ಟಾರೆ ಕೆಲಸವನ್ನು ಬಹಳ ಗಂಭೀರವಾಗಿ ಪ್ರತಿ ಹಳ್ಳಿಗೂ ಎಡೆಬಿಡದೆ ತಾಲೂಕಿನಲ್ಲಿ ಒಂದನ್ನು ಬಿಡದೆ ಪ್ರಚಾರ ಕಾರ್ಯಕ್ರಮದಲ್ಲಿ ಅಳವಡಿಸಿಕೊಂಡಿರುವುದು ಕಾಣುತ್ತಿದೆ. ನಮ್ಮ ಹಳ್ಳಿಗಳ ಯುವಕರು, ಅವರ ಭಾಷಣದ ಪ್ರಭಾವಕ್ಕೆ ಒಳಗಾಗುತ್ತಿದ್ದಾರೆ. ಆದರೆ ಅವರಿಗೆ ಗೊಂದಲವಿದೆ. ಪೂರ್ಣ ಅವರ ಬೆಂಬಲಕ್ಕೆ ಹೋಗದೆ ಕೆಲವು ಅವರ ತರ್ಕಗಳನ್ನು ಮೆಲುಕು ಹಾಕುವುದು ಕಂಡು ಬರುತ್ತದೆ. ಒಟ್ಟಾರೆ ಇದು ಒಂದು ಗಂಭೀರವಾಗಿ ಪರಿಗಣಿಸಬೇಕಾದ ಅಪಾಯಕಾರಿ ಪ್ರಚಾರವಾಗಿದೆ.

ಎರಡನೇ 'ಇಂತಿಫದಾ'-ಇನ್ನೆಷ್ಟು ದಿನ ಪ್ಯಾಲೆಸ್ಟೇನ್ನರ ರಕ್ತಪಾತ?

ಕಳೆದ ಕೆಲವು ವಾರಗಳಲ್ಲಿ ಇಸ್ರೇಲಿನ ಭದ್ರತಾ ಪಡೆಗಳು ಪ್ಯಾಲೆಸ್ಟೇನಿನ 200 ನಾಗರಿಕರನ್ನು ಸಾಯಿಸಿದ್ದಾರೆ. ಐದು ಸಾವಿರ ಪ್ಯಾಲೆಸ್ಟೇನರನ್ನು ಗಾಯಗೊಳಿಸಿದ್ದಾರೆ. ಪ್ಯಾಲೆಸ್ಟೇನ್ನರ ಮೇಲೆ ಇಸ್ರೇಲಿ ಪಡೆಗಳು ನಡೆಸುತ್ತಿರುವ ಬರ್ಬರ ದಾಳಿ, ಶತಮಾನದ ಅತ್ಯಂತ ಹೀನ ಮಾನವ ಹಕ್ಕುಗಳ ಉಲ್ಲಂಘನೆಗಳಲ್ಲೊಂದು. ಇದಕ್ಕೆ ಪ್ರತಿರೋಧವಾಗಿ 'ಎರಡನೇ ಇಂತಿಫದಾ'(ಸಶಸ್ತ್ರ ಹೋರಾಟ) ಭುಗಿಲೆದ್ದಿದೆ. ಐವತ್ತು ವರ್ಷದಿಂದ ಪ್ಯಾಲೆಸ್ಟೇನ್ನರು ರಕ್ತ ಸುರಿಸುತ್ತಾ ಬಂದಿದ್ದರೂ, ಅವರಿಗೆ ತಾಯ್ನಾಡು ಒದಗಿ ಬಂದಿಲ್ಲ. ಅಮೆರಿಕದ ದಲ್ಲಾಳಿತನದ ಮೂಲಕ ಕೆಲವು ವರ್ಷಗಳ ಹಿಂದೆ ಮೂಡಿಬಂದ ಶಾಂತಿ ಒಪ್ಪಂದವೂ ಇನ್ನೂ ಹೆಚ್ಚಿನ ಅಶಾಂತಿ ತಂದಿದೆ. ಈ ಸಮಸ್ಯೆಯ ಚಾರಿತ್ರಿಕ ಹಿನ್ನೆಲೆ, ಈಗಿನ ಸ್ಥಿತಿ, ಪರಿಹಾರಗಳ ಬಗ್ಗೆ ಬೆಳಕು ಚೆಲ್ಲುವ ಲೇಖನ.

ಸೆಪ್ಟೆಂಬರ್ 28 ರಿಂದ ಆರಂಭವಾದ ಇಸ್ರೇಲಿ ಸರ್ಕಾರದ ಭಾರಿ ಹಿಂಸಾಚಾರ ಪ್ಯಾಲೆಸ್ಟೇನ್ನರ ಸ್ವಾತಂತ್ರ್ಯ ಹೋರಾಟದ ಹೊಸ ಮಜಲಿಗೆ ತಂದಿರಿಸಿದೆ. ಜೇರುಸಲಂನಲ್ಲಿರುವ ಪವಿತ್ರಮಸೀದಿಗೆ ಪ್ಯಾಲೆಸ್ಟನ್ನರಿಗೆ ಭೇಟಿ ನೀಡಲು ಅವಕಾಶ ನೀರಾಕರಿಸಿದ್ದು, ಸಾವಿರ ಪೋಲೀಸರೊಂದಿಗೆ



ಇಸ್ರೇಲಿನ ಮಾಜಿ ರಕ್ಷಣಾಮಂತ್ರಿ ಶರೋನ್‌ರ ಪ್ರಚೋದನಕಾರಿ ಭೇಟಿ - ಇವೆಲ್ಲದ್ದಕ್ಕೆ ಪ್ಯಾಲೆಸ್ಟನ್ನರ ಪ್ರತಿಭಟನೆಗೆ ಸಿಕ್ಕಿದ ಪ್ರತಿಫಲ ಇಸ್ರೇಲ್ ಪಡೆಗಳ ಫ್ಯಾಸಿಸ್ಟ್ ಹಿಂಸಾಚಾರ ಈ ಘಟನಾವಳಿಗಳೊಂದಿಗೆ ಕೆಲವು ವರ್ಷಗಳಿಂದ ನಡೆಯುತ್ತಿದ್ದ 'ಶಾಂತಿ ಮಾತುಕತೆಗಳ ಪ್ರಕ್ರಿಯೆ'ಯನ್ನು ಇಸ್ರೇಲ್ ಏಕಪಕ್ಷೀಯವಾಗಿ ನಾಶ ಮಾಡಲು ಉದ್ದೇಶ ಹೊಂದಿದೆ ಎಂದು ಸ್ಪಷ್ಟವಾಗಿದೆ.

ಇದು ಸಾಮ್ರಾಜ್ಯಶಾಹಿ ಟಿ.ವಿ., ಪತ್ರಿಕೆಗಳು ಬಿಂಬಿಸುವಂತೆ ಫ್ಯಾಲೆಸ್ಟೇನ್‌ಜ್ಯೂಗಳ ನಡುವಣ ಜನಾಂಗೀಯ ದ್ವೇಶದ ಪ್ರಶ್ನೆಯಲ್ಲ. ಇಂದು ನಡೆಯುತ್ತಿರುವುದು ವಸಾಹತುಶಾಹಿ ನರಮೇಧ. ಈ ನರಮೇಧ ಬ್ರಿಟಿಷರು ಕಳೆದ ಶತಮಾನದ ಎರಡನೇ ದಶಕದಲ್ಲಿ ಪಂಜಾಬಿನಲ್ಲಿ ನಡೆಸಿದ 'ಜಲಿಯನ್ ವಾಲಾಬಾಗ್ ಹತ್ಯಾಕಾಂಡ' ದಂತೆ. ಅದು ಒಂದು ದಿನ ನಡೆದರೆ ಪ್ಯಾಲೆಸ್ಟೇನ್‌ನಲ್ಲಿ ಪ್ರತಿದಿನ ಹತ್ಯಾಕಾಂಡ ನಡೆಯುತ್ತಿದೆ. ಪಂಜಾಬಿನಂತೆ ಈ ಹತ್ಯಾಕಾಂಡಗಳಿಗೆ ಸಶಸ್ತ್ರ ಪ್ರತಿರೋಧ ಸಹ ಕಂಡುಬಂದಿದೆ. ಇದಕ್ಕೆ 'ಇಂತಿಫದಾ' ಎಂದು ಕರೆಯಲಾಗುತ್ತಿದೆ. ಈಗಿನ ಹಂತವನ್ನು 'ಎರಡನೇ ಇಂತಿಫದಾ' ಎಂದು ಕರೆಯಲಾಗುತ್ತಿದೆ. 1987 ರಿಂದ 1992 ರ ಅವಧಿಯಲ್ಲಿ ನಡೆದ 'ಮೊದಲ ಇಂತಿಫದಾ' ದಂತೆ, ಈ 'ಎರಡನೇ ಇಂತಿಫದಾ'ದಲ್ಲೂ ಪ್ಯಾಲೆಸ್ಟೇನ್ ಜನಸಾಮಾನ್ಯರ ಆಯುಧ ಕಲ್ಲುಗಳು, ದೊಣ್ಣೆ, ಸಣ್ಣ ಮದ್ದುಗುಂಡಿನ ಶಸ್ತ್ರಗಳು. ಆದರೆ ಪ್ರಮುಖ ವ್ಯತ್ಯಾಸವೆಂದರೆ ಆಗ ಸಾಮ್ರಾಜ್ಯಶಾಹಿಗೆ ಜಗತ್ತಿನಲ್ಲಿ ಸಮಾಜವಾದಿ ದೇಶಗಳ ಬಣದ, ಅಲಿಪ್ತ ದೇಶಗಳ ಪ್ರಬಲ ಪ್ರತಿರೋಧದ ಅಂತರ್‌ರಾಷ್ಟ್ರೀಯ ಹಿನ್ನಲೆಯಲ್ಲಿ ಪ್ಯಾಲೆಸ್ಟೇನ್ ಹೋರಾಟ ನಡೆಯುತ್ತಿತ್ತು. ಆ ಹೋರಾಟ 'ಶಾಂತಿಒಪ್ಪಂದ'ದತ್ತಚಲಿಸುವಂತೆ ಒತ್ತಾಯಹೇರಿತ್ತು. ಆದರೆ ಈಗ ಸಂಪೂರ್ಣ ಬದಲಾದ ಸನ್ನಿವೇಶದಲ್ಲಿ ಈ ಹೋರಾಟ ನಡೆಯುತ್ತಿದೆ. ಒಂದೆ ಸೂಪರ್‌ಪವರ್‌ನ ಅಧಿಪತ್ಯದಲ್ಲಿರುವ ಸನ್ನಿವೇಶ ಇದು.

ಸಾಮ್ರಾಜ್ಯಶಾಹಿಯ ಒಡೆದು ಆಳುವ ನೀತಿಯ ಫಲ

ಪ್ಯಾಲೆಸ್ಟೇನ್ ಸಮಸ್ಯೆಯ ಮೂಲ ಇರುವುದು ಸಾಮ್ರಾಜ್ಯಶಾಹಿಯ ಒಡೆದು ಆಳುವ ನೀತಿಯಲ್ಲಿ. ಯುರೋಪಿಯನ್ ಸಾಮ್ರಾಜ್ಯಶಾಹಿಗಳು ಅರಬ್ ದೇಶಗಳಿಗೆ ನುಗ್ಗಿದ್ದು ಮೊದಲನೆಯ ಮಹಾಯುದ್ಧದ ನಂತರ. ತುರ್ಕಿ ಸಾಮ್ರಾಜ್ಯಶಾಹಿ ಕುಸಿಯಲಾರಂಭಿಸಿದಾಗ. ತುರ್ಕಿ ಸಾಮ್ರಾಜ್ಯಶಾಹಿಯ ವಿರುದ್ಧ ಅರಬರ ರಾಷ್ಟ್ರೀಯತಾ ಹೋರಾಟಕ್ಕೆ ಬೆಂಬಲ ನೀಡಿದ ಇಂಗ್ಲೀಷರು ಪಶ್ಚಿಮ ಏಶ್ಯಾವನ್ನು ಯುದ್ಧಾ-ನಂತರ ತಮ್ಮ ಮತ್ತು ಫ್ರೆಂಚರ ನಡುವೆ ಅರಬ್ ಪ್ರದೇಶವನ್ನು ಹರಿದು ಹಂಚಿಕೊಂಡರು, ಯುರೋಪಿಯನ್ ಸಾಮ್ರಾಜ್ಯಶಾಹಿಗಳಿಗೆ ಅರಬ್ ಪ್ರದೇಶಗಳ ಮೇಲೆ ಆಯಕಟ್ಟಿನಜಾಗ ಎಂದು ಮೊದಲಿನಂದಲೂ ಕಣ್ಣು ಇತ್ತು. 20ನೇ ಶತಮಾನದ ಆದಿಭಾಗದಲ್ಲಿ ಏಶ್ಯಾದ ಮಾರುಕಟ್ಟೆ, ಸಂಪನ್ಮೂಲಗಳಿಗೆ ಹತ್ತಿರದ ಭೂ-ಹಾದಿ ಎಂಬ ದೃಷ್ಟಿಯಿಂದ. ಆಮೇಲೆ ತೈಲ ನಿಕ್ಷೇಪಗಳು ಕಂಡು ಹಿಡಿದ ಮೇಲೆ ತೈಲ ಸಂಪನ್ಮೂಲಗಳ ಮೇಲೆ ನಿಯಂತ್ರಣ ಸಾಧಿಸುವುದು ಅವರ ಗುರಿಯಾಯಿತು. ಅರಬ್ ಪ್ರದೇಶಗಳ ಮೇಲೆ ನಿಯಂತ್ರಣ ಸಾಧಿಸಲು ಅರಬರಲ್ಲೇ ಒಡೆದು ಆಳುವ ನೀತಿ ಮೊದಲು ಪ್ರಯತ್ನಿಸಿದರು. ಪ್ರಬಲ ಅರಬ್ ರಾಷ್ಟ್ರೀಯತೆಯ ವಿರುದ್ಧ ಅದು ಹೆಚ್ಚು ಫಲ ಕೊಡದೆ ಹೋಯಿತು. ಇದಕ್ಕಾಗಿ ಅವರುಜ್ಯೂಗಳಿಗೆ 'ತಾಯ್ನಾಡು' ಸೃಷ್ಟಿಸುವ ಕೆಲಸಕ್ಕೆ ಕೈಹಾಕಿದರು. ಜ್ಯೂ ಮೂಲಭೂತವಾದಿಗಳನ್ನು 'ಝಿಯೋನಿಸ್ಟರು' ಎನ್ನುತ್ತಾರೆ. ಜ್ಯೂಗಳಿಗೆ ತಾಯ್ನಾಡನ್ನು ಜ್ಯೂಗಳ 'ಮೂಲ ಪ್ರದೇಶ'ವಾದ ಜೆರುಸಲೆಂ ಸುತ್ತಲೂ ಕೊಡಬೇಕೆಂದು ಹಠ ಹಿಡಿಯುವಂತೆ ಕುಮ್ಮಕ್ಕು ಕೊಟ್ಟರು. ಎರಡನೇ ಮಹಾಯುದ್ಧದ ನಂತರ ಫ್ಯಾಲೆಸ್ಟೇನ್ನರು ಇಂದಿನ ಅರಬ್ ಪ್ರದೇಶವನ್ನು ಜ್ಯೂಗಳಿಗೆ ತಾಯ್ನಾಡು ಕಟ್ಟಲು ಬ್ರಿಟಿಷರು-ಫ್ರೆಂಚರು ಅನುವು ಮಾಡಿಕೊಟ್ಟರು. ಆ ಮೂಲಕ ಅರಬ್ ಪ್ರದೇಶವನ್ನು ದುರ್ಬಲಗೊಳಿಸುವ, ಇಸ್ರೇಲನ್ನು ಹುಟ್ಟುಹಾಕಿದರು. ಅರಬರ-ಜ್ಯೂಗಳ ನಡುವೆ ಶಾಶ್ವತ ವೈರ ಸಮಸ್ಯೆ ಹುಟ್ಟಿಹಾಕಿದರು.

ಇವತ್ತಿಗೂ ಸಾಮ್ರಾಜ್ಯಶಾಹಿ(ಅಮೆರಿಕನ್, ಯುರೋಪಿಯನ್) ಆರ್ಥಿಕ, ಮಿಲಿಟರಿ ಬೆಂಬಲ ಇಸ್ರೇಲಿಗೆ ಇದೆ. ಆ ಬೆಂಬಲ ಇಲ್ಲದಿದ್ದರೆ ಪ್ಯಾಲೆಸ್ಟೇನ್ ಸಮಸ್ಯೆ ಸುಲಭವಾಗಿ ಪರಿಹಾರವಾಗಬಹುದು. ಪಶ್ಚಿಮ ಏಶ್ಯಾದ ತೈಲ ಪ್ರದೇಶದ ಮೇಲೆ ನಿಯಂತ್ರಣವಿಡಲು ಸಾಮ್ರಾಜ್ಯಶಾಹಿಗೆ ಈ ಸಮಸ್ಯೆ ಮುಂದುವರೆಯಬೇಕು, ಆದ್ದರಿಂದಲೇ ಪ್ಯಾಲೆಸ್ಟೇನ್‌ನ ಸ್ವಯಮಾಡಳಿತದ, ಸ್ವಾತಂತ್ರ್ಯದ ನಿಜವಾದ ಬೇಡಿಕೆಗಳನ್ನು ಬದಿಗೊತ್ತಿ, ಇಸ್ರೇಲಿಗೆ ಅನುಕೂಲವಾದ 'ಸಾಂತಿ ಒಪ್ಪಂದ' ಹೊರಿಸಲು ಹೊರಟಿದೆ.

ಪ್ಯಾಲೆಸ್ಟೇನ್ ಸ್ವಾತಂತ್ರ್ಯ ಸಮರಕ್ಕೆ ನಾವು ಬೆಂಬಲ ಕೊಡಬೇಕು.

ದಕ್ಷಿಣ ಆಫ್ರಿಕಾದಲ್ಲಿ ವಣಭೇದ ನೀತಿಗೆ ಸಾಮ್ರಾಜ್ಯಶಾಹಿಗೆ ನೇರ-ಪರೋಕ್ಷ ಪ್ರಬಲ ಬೆಂಬಲವಿದ್ದ, ಅತ್ಯಂತ ಪ್ರತಿಕೂಲ ಪರಿಸ್ಥಿತಿಯಲ್ಲಿ ವರ್ಣಬೇಧ ನಾಶವಾಯಿತು. ಅದೇ ರೀತಿ ಝಿಯೋನಿಸಂಗೂ ಕಾಲ ಬಂದಿದೆ. ಝಿಯೋನಿಸಂ ಹೋಗಲೇಬೇಕು. ಹೋಗುತ್ತೆ. ಪೂರ್ವ ಜೇರುಸಲೆಂನ್ನು ಪ್ಯಾಲೆಸ್ಟೇನ್ ರಾಜಧಾನಿಯಾಗಿಸುವುದು, ಇಸ್ರೇಲ್ ಆಕ್ರಮಿಸಿಕೊಂಡಿರುವ ಪ್ರದೇಶಗಳನ್ನು, ಹಿಂದಿರುಗಿಸುವುದು, ಪ್ಯಾಲೆಸ್ಟೇನ್ ನಿರಾಶ್ರಿತರನ್ನು ತಮ್ಮ ಮನೆಗಳಿಗೆ ಹಿಂದಿರುಗಲು ಅನುವು ಮಾಡಿಕೊಡುವುದು ಸರಿಯಾದ ಬೇಡಿಕೆಗಳು. ಅವು ಈಡೇರಲೇಬೇಕು.

ಪ್ಯಾಲೆಸ್ಟೇನರ ಮಾನವಹಕ್ಕು, ರಕ್ಷಣೆ, ಸ್ವಾತಂತ್ರ್ಯ-ಸಾರ್ವಭೌಮತೆ ಮೇಲೆ ಆಕ್ರಮಣ ಮಾಡುತ್ತಿರುವ ಇಸ್ರೇಲಿನ ಮೇಲೆ ಅಂತರ್‌ರಾಷ್ಟ್ರೀಯ ಒತ್ತಡ ತರಬೇಕಾಗಿದೆ.

ದುರದೃಷ್ಟವಶಾತ್, ಭಾರತ ಸರ್ಕಾರ ಈ ನಿಟ್ಟಿನಲ್ಲಿ ಕನಿಷ್ಠ ಕೆಲಸ ಮಾಡಲು ತಯಾರಾಗಿಲ್ಲ. ಅದು ಸಾಮ್ರಾಜ್ಯಶಾಹಿಗಳ ಜತೆ ಅವರ ನೀತಿ ಅನುಸರಿಸುತ್ತಿದೆ. ಅವರಿಗೆ ತಮ್ಮಂತಹುದೇ ಧಾರ್ಮಿಕ-ಮೂಲಭೂತವಾದಿಗಳೆಂದರೆ ಅಕ್ಕರೆ. ಬಿಜೆಪಿ ನಾಯಕರಿಗೆ ಇಸ್ರೇಲ್ ಮೇಲೆ ಬಹಳ ಅಭಿಮಾನ. ಆದ್ದರಿಂದ ನಮ್ಮ ಸರ್ಕಾರದ ನೀತಿ ಧಿಕ್ಕರಿಸಿ, ಪ್ಯಾಲೆಸ್ಟೇನ್ ಜನತೆಯೊಂದಿಗೆ ಸೌಹಾರ್ದತೆ ತೋರಿಸಬೇಕಿದ.

ರೈತರ ಬವಣೆಗಳು.........

ಪುಟ 3 ರಿಂದ

32 ಜನ ರೈತರು ಕೂಲಿಕಾರರು, ವಿದ್ಯಾರ್ಥಿಯುವಜನರು 13 ದಿನಗಳ ಕಾಲ ಬಳ್ಳಾರಿ ಸೆಂಟ್ರಲ್ ಜೈಲು ವಾಸ ಅನುಭವಿಸಿದರು. ಇಲ್ಲಿನ ಭೂಮಾಲಕ ಬಂಡವಾಳ ಶಾಹಿಗಳು ಸಿಪಿಎಂ ಪಾರ್ಟಿಯೋರಿಗೆ ತಲೆಕೆಟ್ಟೆತೆ. ಎಲ್ರನೂ ಜೈಲಿಗೆ ಕರ್‍ಕಂಡು ಹೊಂಟಾರ ಅಂತ ಮಾತಾಡಲಿಕ್ಕೆ ಶುರು ಮಾಡಿದ್ದರು.

ಯಾವ ರಾಜ್ಯ-ರಾಷ್ಟ್ರೀಯ ಪತ್ರಿಕೆಗಳು (ಐಕ್ಯರಂಗ ಹೊರತುಪಡಿಸಿ) ಈ ಹೊಸ ಆರ್ಥಿಕ ನೀತಿಗಳ ಬಗ್ಗೆ ಚಕಾರವೆತ್ತಲಿಲ್ಲ. ಟಿ.ವಿ. ಮಾಧ್ಯಮಗಳು ಕೂಡ ಮೌನ ವ್ರತ ಆಚರಿಸಿದವು. 1994 ರ ಕೊನೆಯಲ್ಲಿ ಚುನಾವಣೆಗಳು ನಡೆದಂತ ಸಂದರ್ಭದಲ್ಲಿ ಒಡೆದು ತುಂಡಾಗಿದ್ದ ಜನತಾದಳದ ಹೆಗಡೆ-ದೇವೇಗೌಡ ನಾವು ಒಂದಾಗಿದ್ದೀವಿ ಎಂದು ಹಗರಿಬೊಮ್ಮನಹಳ್ಳಿಗೆ ಬಂದಿದ್ದರು. ವೇದಿಕೆಯಲ್ಲಿದ್ದ ಯಾವೊಬ್ಬ ಜನತಾ ದಳದ ಮುಖಂಡನು ಗ್ಯಾಟ್‌ನ ವಿಚಾರಗಳನ್ನು ಮಾತಾಡಲಿಲ್ಲ. ಕಾಂಗ್ರೆಸ್‌ನ್ನು ಟೀಕಿಸುವ ಕೆಲಸವೊಂದೇ ನಡೆದಿತ್ತು. ಬಳ್ಳಾರಿ ಜಿಲ್ಲೆಯ ಬುದ್ಧಿಜೀವಿಯೆನಿಸಿಕೊಂಡ ಎಂ.ಪಿ. ಪ್ರಕಾಶ ಕೂಡ ಮಾತಾಡಲಿಲ್ಲ. ಭಾಷಣ ಕೇಳಲು ಹೋದ ನನ್ನಂಥವನಿಗೆ ಒಂದು ರೀತಿಯ ಇರಿಸು ಮುರಿಸುಂಟಾಗಿತ್ತು. ಬ್ಯಾಂಕ್, ಕೆ.ಇ.ಬಿ., ಕೆಎಸ್‌ಆರ್‌ಟಿಸಿ ಖಾಸಗೀಕರಣದ ಬಗ್ಗೆಯಾಗಲೀ, ಗ್ಯಾಟ್ ಒಪ್ಪಂದ ಮತ್ತು ಇದರಿಂದ ಕಾರ್ಖಾನೆಗಳ ಮುಚ್ಚುವಿಕೆ ಬಗ್ಗೆಯಾಗಲೀ ಎಲ್ಲೂ ಇವರ ಭಾಷಣದ ಸಂದರ್ಭಗಳಲ್ಲಿ ಪ್ರಸ್ತಾಪವಾಗಲಿಲ್ಲ. ತಮ್ಮ ತಮ್ಮ ಸರ್ಕಾರದ ಸಾಧನೆಗಳ ಬಗ್ಗೆ ಮಾತ್ರವೇ ಸೀಮಿತವಾಗಿತ್ತು. ನನಗೂ ಕೂಡ ಒಮ್ಮೊಮ್ಮೆ ಅನಿಸಿದ್ದುಂಟು ಇಷ್ಟೊಂದು ದುಷ್ಪರಿಣಾಮ ಬೀರುವ ನೀತಿಗಳು ನಮ್ಮದೇಶದಲ್ಲಿ ಜಾರಿಗೆ ಬರುತ್ತಿವೆಯೋ ಎಂದು!

ಆದರೆ, ಇಂದು ಎಲ್ಲವೂ ಬದಲಾಗಿದೆ. ಕೇಂದ್ರ ಸರ್ಕಾರ ಹೊಸ ಆರ್ಥಿಕ ನೀತಿಗಳನ್ನು ಭರದಿಂದ ಜಾರಿ ಮಾಡತೊಡಗಿದ್ದಾರೆ. ಅವರ ಆರ್ಥಿಕ ನೀತಿಗಳು ಹಗರಿಬೊಮ್ಮನಹಳ್ಳಿ ತಾಲೂಕಿಗೆ, ತಾಲೂಕಿನ ಎಲ್ಲಾ ಗ್ರಾಮ, ಮನೆಗಳಿಗೂ ತಲುಪಿವೆ. ಪ್ರತಿಯೊಬ್ಬ ಮನುಷ್ಯನು ಖಾಸಗೀಕರಣದ ಬಗ್ಗೆ ಮತಾನಾಡತೊಡಗಿದ್ದಾನೆ. ಪ್ರತಿಯೊಬ್ಬ ರೈತನೂ ರಫ್ತು-ಆಮದು ನೀತಿಗಳ ಬಗ್ಗೆ ಮಾತನಾಡತೊಡಗಿದ್ದಾನೆ. ತಾಲೂಕಿನ ಮುಖ್ಯ ಬೆಳೆಗಳಾದ ಭತ್ತ, ಶೇಂಗಾ, ಜೋಳ, ರಾಗಿ, ಎಳ್ಳು, ಉಳ್ಳಾಗಡ್ಡೆ, ಸಜ್ಜೆಯ ಬೆಲೆಗಳು ಸಂಪೂರ್ಣವಾಗಿ ಇಳಿದುಹೋಗಿದೆ. ಬೆಂಬಲಿತ ಬೆಲೆ ಕೊಡುವುದಾಗಿ ಹೇಳಿದ ಸರ್ಕಾರ ಮೆಕ್ಕೆಜೋಳಕ್ಕೆ ಮಾತ್ರ ಬೆಂಬಲಿತ ಬೆಲೆ ಕೇಂದ್ರ ತೆಗಿದಿದ್ದು ಚೀಟಿಗಾಗಿ ತಿಂಗಳುಗಟ್ಟಲೆ ಕಾದು ಹಣಕ್ಕಾಗಿ ಎರಡು ತಿಂಗಳು ಕಾಯಬೇಕಾಗಿದೆ. ರಫ್ತು ಆಮದು ನೀತಿಯಿಂದಾಗಿ ಹಗರಿಬೊಮ್ಮನ ಹಳ್ಳಿಯ 8 ಎಣ್ಣೆ ಗಿರಣಿಗಳು ಮುಚ್ಚಿ ಹೋಗಿವೆ. ಕೆಪಿಟಿಸಿಎಲ್ ನಲ್ಲಿ ದಿನಗೂಲಿ ನೌಕರರಂತೆ ನೇಮಕಕಗಳು ನಡೆದಿವೆ. ಬಳ್ಳಾರಿ ಜಿಲ್ಲೆಯ ಕೆಎಸ್‌ಆರ್‌ಟಿಸಿಯಲ್ಲಿ ಕೂಡ ದಿನಗೂಲಿ ನೌಕರರಂತೆ 75 ಕ್ಕೂ ಹೆಚ್ಚು ಜನರನ್ನು ಜಿಲ್ಲಾಧಿಕಾರಿ ನೇಮಕ ಮಾಡಿಕೊಂಡಿದ್ದಾರೆ. ರೈತರ ಸಾಲಕ್ಕೆ ಬ್ಯಾಂಕ್‌ಗಳಿಂದ ವಸೂಲಾತಿ ಜೋರಾಗಿ ನಡೆದಿದೆ. ಆದರೆ ಯಾವುದೇ ತರಹದ ಹೊಸ ಸಾಲ ಮಾತ್ರ ಇಲ್ಲ. ಯಾರಿಗೆ ಆಸ್ತಿ ಇರುತ್ತದೆಯೋ ಅವರಿಗೆ ಮಾತ್ರ ಸಾಲ ಸಿಗತೊಡಗಿದೆ. ಇವೆಲ್ಲವೂ ಈ ಪ್ರತಿಯೊಬ್ಬರ ಬಾಯಲ್ಲಿ ಚರ್ಚಿತವಾಗುತ್ತಿರುವ ವಿಷಯಗಳು.

ಹೊಸ ಆರ್ಥಿಕ ನೀತಿಗಳ ಬಗ್ಗೆ ಮೊದಲೆಲ್ಲ ಮಾತಾಡದಿದ್ದ ಜನತಾದಳದವರು ಇಂದು ಜೋರಾಗಿ ಮಾತಾಡತೊಡಗಿದ್ದಾರೆ. ಇದು ಒಂದು ಹೊಸ ಬದಲಾವಣೆ. ನವೆಂಬರ್ 20ರಂದು ಸಿಪಿಐ(ಎಂ) ಮತ್ತು ಜೆ.ಡಿ.(ಎಸ್) ಜಂಟಿಯಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನಾ ಸಮಾವೇಶವನ್ನು ಹಮ್ಮಿಕೊಂಡಿತ್ತು. ಎಸ್.ವೈ.ಗುರುಶಾಂತ, ಜೆಡಿ(ಎಸ್) ರಾಜ್ಯ ಅಧ್ಯಕ್ಷ ಮಾಜಿ ಉಪಮುಖ್ಯಮಂತ್ರಿಗಳಾದ ಎಸ್.ಸಿದ್ದರಾಮಯ್ಯ, ಮಾಜಿ ಸಚಿವರಾದ ಡಾ. ಹೆಚ್.ಸಿ.ಮಹದೇವಪ್ಪ, ಎನ್.ಎಂ.ನಬಿ ಆಗಮಿಸಿ ಇವತ್ತಿನ ಬೆಲೆ ಕುಸಿತಕ್ಕೆ ಕೇಂದ್ರ ಸರ್ಕಾರದ ನೀತಿಗಳೇ ಕಾರಣ ಎಂದು ವಿವರಿಸಿದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವೈ.ಗುರುಶಾಂತ್ ಐಕ್ಯ ಹೋರಾಟದ ಮಹತ್ವವನ್ನು ವಿವರಿಸಿದರು. ಸಿಪಿಐ(ಎಂ) ಮತ್ತು ಜೆ.ಡಿ.(ಎಸ್) ನ ಜಂಟಿ ಹೋರಾಟ ಕೇವಲ ಕೂಡ್ಲಿಗಿ ಕ್ಷೇತ್ರಕ್ಕಲ್ಲ ಬಳ್ಳಾರಿ ಜಿಲ್ಲೆಯ ಚಳುವಳಿಗೆ ಸ್ಫೂರ್ತಿ ನೀಡುವಂತಹ ಪ್ರತಿಭಟನಾ ಸಮಾವೇಶ ಇದಾಗಿದೆ. ಜನರ ಚಳುವಳಿಗಳು ದೇಶದ ರಾಜಕೀಯವನ್ನು ನಿರ್ಧರಿಸುತ್ತದೆ. ಮೂರನೇ ರಂಗ ಎಲ್ಲಿ ಎಂದು ಹೆಗಡೆಯಂತಹ ಬುದ್ಧಿ ಜೀವಿಗಳು ಮಾತನಾಡುತ್ತಿದ್ದಾರೆ. ಮೂರನೇ ರಂಗವನ್ನು ದೇಶದ ಚಳುವಳಿಗಳು ರೂಪಿಸುತ್ತವೆ. ಅದಕ್ಕೆ ಸ್ವಲ್ಪ ಕಾಯಬೇಕು ಅಷ್ಟೆ ಎಂದರು. ಅಮೆರಿಕಾದ ಅಧ್ಯಕ್ಷರು 22 ವರ್ಷಗಳ ಕಾಲ ಭಾರತ ದೇಶಕ್ಕೆ ಬರುವ ಧೈರ್ಯವನ್ನು ಮಾಡಿರಲಿಲ್ಲ ಆದರೆ ಸ್ವದೇಶಿ ಎಂದು ಹೇಳಿಕೊಳ್ಳುವ ಬಿಜೆಪಿಯವರಿಗೆ ಅಮೆರಿಕಾ ಹೆಚ್ಚು ಪ್ರಿಯವಾಗಿದೆ. ಇದರಿಂದ ಕ್ಲಿಂಟನ್ ಭಾರತಕ್ಕೆ ಬರಲು ಸಾಧ್ಯವಾಯಿತು. ಹಲವಾರು ವಿನಾಶಕಾರಿ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ. ಬಹುರಾಷ್ಟ್ರೀಯ ಕಂಪನಿಗಳು, ವಿಶ್ವಬ್ಯಾಂಕ್, ಡಬ್ಲ್ಯೂಟಿಓ ಒತ್ತಡಕ್ಕೆ ಮಣಿದು ಎಲ್ಲಾ ರೀತಿಯ ಸಬ್ಸಿಡಿಗಳನ್ನು ತೆಗೆದುಹಾಕಿ ಬೆಲೆ ಏರಿಕೆಗೆ ಕಾರಣವಾದರು ಕೇಂದ್ರದ ಬಿಜೆಪಿಯವರು. ಜನಸಾಮಾನ್ಯರಿಗೆ ಕೊಟ್ಟ ದೊಡ್ಡ ಕಾಣಿಕೆ ಇದು ಎಂದರು. ಜೆ.ಡಿ.(ಯು) ಇಬ್ಬಗೆ ನೀತಿ ಕೈಬಿಡಲು ಕರೆ ನೀಡಿದರು. ರಾಜ್ಯ ಸರ್ಕಾರದ ನೀತಿಗಳನ್ನು ಟೀಕಿಸಿದರು.

ಎಸ್.ಸಿದ್ದರಾಮಯ್ಯನವರು ತಮ್ಮದೇ ಆದ ಗ್ರಾಮೀಣ ಭಾಷೆ ಶೈಲಿಯಲ್ಲಿ ಮಾತನಾಡಿ, ರಾಜ್ಯ-ಕೇಂದ್ರ ಸರ್ಕಾರದ ಆರ್ಥಿಕ ನೀತಿಗಳನ್ನು ಎಳೆ ಎಳೆಯಾಗಿ ಜನರ ಮುಂದೆ ಬಿಚ್ಚಿಟ್ಟರು. ಕಾಂಗ್ರೆಸ್ ಮತ್ತು ಬಿಜೆಪಿ ಒಂದೇ ನಾಣ್ಯದ ಎರಡು ಮುಖಗಳು ಈ ದೇಶವನ್ನು ಹೆಚ್ಚು ಕಾಲ ಆಳಿದ ಕಾಂಗ್ರೆಸ್‌ನಿಂದ ಇಲ್ಲಿನ ಸಮಾಜ ಬದಲಾಗಲಿಲ್ಲ. ಯುವಜನರು ನಿರೀಕ್ಷೆ ಇಟ್ಟುಕೊಂಡಿದ್ದ ಬಿಜೆಪಿಯಿಂದಲೂ ಇದು ಸಾಧ್ಯವಾಗುವುದಿಲ್ಲ. ವರ್ಷಕ್ಕೆ ಒಂದು ಕೋಟಿ ಉದ್ಯೋಗ ಕೊಡುತ್ತೇವೆ ಎಂದು ಬಡಾಯಿ ಕೊಚ್ಚಿಕೊಂಡಿದ್ದ ಇವರು ಇರುವ ಉದ್ಯೋಗಗಳನ್ನೇ ಕಳೆಯುತ್ತಾ ಬಂದಿದ್ದಾರೆ. 714 ಸಾಮಾನ್ಯ ವಸ್ತುಗಳನ್ನು ರಫ್ತು-ಆಮದು ನೀತಿಯಲ್ಲಿ ಸೇರಿಸಿ ದೇಶಕ್ಕೆ ಬೆನ್ನೆಲುಬಾಗಿದ್ದ ರೈತರನ್ನು ದಿವಾಳಿ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ಇವರಿಗೆ ಪಾಠ ಕಲಿಸುವಂತಾಗಬೇಕು. ಕಾಂಗ್ರೆಸ್ ಬಿಜೆಪಿ ಹೊರತುಪಡಿಸಿದ ಮೂರನೇ ರಂಗ ದೇಶಕ್ಕೆ ಅವಶ್ಯಕವಾಗಿ ಬೇಕಾಗಿದೆ ಎಂದರು.

ಸಾವಿರಾರು ಸಂಖ್ಯೆಯಲ್ಲಿ ಬಂದಿದ್ದ ರೈತ ಕೂಲಿಕಾರರು ಈಶ್ವರ ಗುಡಿಯಿಂದ ವರ್ಣರಂಜಿತ ಮೆರವಣಿಗೆ ಮುಖ್ಯಬೀದಿಯ ಮುಖಾಂತರ ಪ್ರತಿಭಟನಾ ಸಮಾವೇಶದ ಸ್ಥಳದಲ್ಲಿ ಸೇರಿತ್ತು. ಜೆ.ಡಿ.(ಎಸ್) ತಾಲೂಕು ಅಧ್ಯಕ್ಷ ಹೆಚ್.ಎಂ.ವೀರಭದ್ರಯ್ಯ ಸ್ವಾಗತಿಸಿದರೆ ಮಾಜಿ ತಾಲೂಕು ಪಂಚಾಯ್ತಿ ಅಧ್ಯಕ್ಷ ಟಿ.ಪ್ರಭಾಕರ ವಂದನಾರ್ಪಣೆ ಮಾಡಿದರು. ಸಿಪಿಐ(ಎಂ) ಮುಖಂಡ ಆರ್.ಎಸ್.ಬಸವರಾಜು ಕಾರ್ಯಕ್ರಮ ನಿರೂಪಣೆ ಮಾಡಿದರು.

ಕಿತ್ತು ತಿನ್ನುವ ಬಡತನ ಚಾಪ್ಲಿನ್ ಹಾಗೂ ಅವನ ತಾಯಿಯನ್ನು ಎಲ್ಲೆಲ್ಲೋ ತಿರುಗುವಂತೆ ಮಾಡಿತು. ಒಂದು ತುಂಡು ಬ್ರೆಡ್ಡಿಗೂ ಪರದಾಡಿಸಿತು. ಮನೆಯಲ್ಲಿ ಇದ್ದಬದ್ದ ಸಾಮಾನು, ಬಟ್ಟೆಗಳನ್ನು ಮಾರಬೇಕಾಯಿತು. ಗಿರಾಕಿಗಳನ್ನು ಒಲಿಸಲು ಚಾಪ್ಲಿನ್ ತಾನೇ ನಿಂತ. ಹೀಗೆ ನಂತರದಲ್ಲಿ ಮರದ ಕೆಲಸಗಳ ಮಾಡುವವರೊಂದಿಗೆ ಸಂಬಂಧ ಏರ್ಪಟಿು. 'ವರ್ಕ್‌ಶಾಪ್' ನ 'ಬಾಸ್' ಹಾಸ್ಯ ನಾಟಕವಿದ್ದ ಮ್ಯೂಸಿಕ್ ಹಾಲ್‌ಗೆ ಕೆಲಸಗಾರರನ್ನು ಕರೆದೊಯ್ಯ. ಇದು ಚಾಪ್ಲಿನ್‌ಗೆ ರಂಗದೊಂದಿಗೆ ಸಂಬಂಧ ಏರ್ಪಟ್ಟಿತು. ಹಂತಹಂತವಾಗಿ ಚಾಪ್ಲಿನನ್ನು ಹೊಸ ಲೋಕವೇ ಸೆಳೆಯಿತು.



ಇತಿಹಾಸದ ಪುಟಗಳಿಂದ

ಚಾರ್ಲಿ ಚಾಪ್ಲಿನ್
ಬಡತನದ ಬೇಗೆಯಲ್ಲಿ ಅರಳಿದ ಮಹಾ ಪ್ರತಿಭೆ

ವಾರಗಳು ಉರುಳಿದಂತೆ... ಏತುಗಳು ಬದಲಾದಂತೆ ಹನ್ನಾಳ ಸಂಸಾರದ ನಿರ್ವಹಣೆ ದುಸ್ತರವಾಗುತ್ತಾ ಹೋಯಿತು. ಆಕೆ ಕೂಡಿಟ್ಟಿದ್ದ ಅಪದ್ಧನವೂ ಕರಗಿಹೋಯಿತು. ಚಿಕ್ಕಪುಟ್ಟ ಒಡವೆಗಳು ಗಿರವಿ ಅಂಗಡಿಯ ಪಾಲಾದರೂ ಆಶಿಯ ಕಂಠ ಸುದಾರಿಸಲೇ ಇಲ್ಲ.

ಹೆಚ್ಚು ಬಾಡಿಗೆಯ ಮೂರು ಕೋಣೆಗಳ ಮನೆಯಿಂದ ಕಡಿಮೆ ಬಾಡಿಗೆಯ ಎರಡು ಕೋಣೆಗಳ ಪುಟ್ಟಮನೆಗೆ ಸಂಸಾರ ಸ್ಥಳಾಂತರಗೊಂಡಿತು. ಮನೆಯಲ್ಲಿದ್ದ ಸಾಮಾನುಗಳು ಒಂದೊಂದಾಗಿ ಕರಗುತ್ತಾ ಹೋದವು.

ಆಯಾಸ ಮತ್ತು ಹಸಿವಿನಿಂದ ನಲುಗಿದ್ದ ಅವರು ಊಟ ಮಾಡಲು ಮನೆಯಲ್ಲಿ ಕೈಯಲ್ಲಿ ಕಿಲುಬು ಕಾಸು ಇರಲಿಲ್ಲ. ಸಿಡ್ನಿಯ ಸಾಪ್ತಾಹಿಕ ಆದಾಯ ಅವಧಿಗೆ ಮೊದಲೆ ಖರ್ಚಾಗಿತ್ತು. ಹೊಟ್ಟೆ ತಾಳಹಾಕುತ್ತಿದ್ದರೂ ಸ್ಪೆನ್ಸರ್ ಬಾಯಿಬಿಟ್ಟು ಕೇಳುವ ಸ್ಥಿತಿಯಲ್ಲಿ ಇರಲಿಲ್ಲ. ತಾಯಿಯ ಪರಿಸ್ಥಿತಿ ಅರ್ಥಮಾಡಿಕೊಂಡಿದ್ದ ಅವನು ತುಟಿ ಬಿಚ್ಚದೆ ಮೌನವಾಗಿದ್ದ. ಮಗನ ಮೌನವನ್ನು ಅರ್ಥಮಾಡಿಕೊಂಡ ಹನ್ನಾ ಅಸಹಾಯಕತೆಯಿಂದ ಒದ್ದಾಡಿದಳು. ಮಾರುವಂಥ, ಗಿರವಿ ಇಡುವಂಥ ಯಾವುದೇ ವಸ್ತು ಮನೆಯಲ್ಲಿ ಉಳಿದಿರಲಿಲ್ಲ. ಮಹಾ ಸ್ವಾಭಿಮಾನಿ ಹೆಂಗಸಾದ ಆಕೆ ಅಕ್ಕಪಕ್ಕದ ಮನೆಯವರಿಂದ ಎಂದೂ ಕೈಗಡ ಪಡೆದಾಕೆಯಲ್ಲ. ಕೈಗಡ ಪಡೆದರೆ ತೀರಿಸುವ ಬಗೆಯಾದರೂ ಹೇಗೆ?

ಅದೇ ಸಮಯಕ್ಕೆ ಸರಿಯಾಗಿ, ಅವರ ಅದೃಷ್ಟವೋ ಎಂಬಂತೆ ಗುಜರಿ ಸಾಮಾನು ಕೊಳ್ಳುವವನೊಬ್ಬ ಹಿತ್ತಾಳೆ, ತಾಮ್ರ, ಸಿಲವಾರ ಎಂದು ಮುಂತಾಗಿ ಕೂಗುತ್ತಾ ಬೀದಿಯಲ್ಲಿ ನಡೆದದ್ದು ಕಿವಿಗೆ ಬಿತ್ತು. ಹನ್ನಾ ಮಗನ ಮೂಲಕ ಆ ಗುಜರಿ ವ್ಯಾಪಾರಿಯನ್ನು ತಲೆಬಾಗಿಲಿಗೆ ಕರೆಸಿಕೊಂಡು 'ಬತ್ತಿ ಸ್ಟೌವ್' ಅನ್ನು ತೋರಿಸಿ ಎಷ್ಟು ಕೊಡುತ್ತೀಯಾ ಎಂದು ಹೇಳಿದಳು. ಚೌಕಾಸಿ ತುಸು ಹೊತ್ತು ನಡೆಯಿತು. ಕೊನೆಗೆ ಹನ್ನಾ ಆ ಅಮೂಲ್ಯ ಆಸ್ತಿಯನ್ನು ಅರ್ಧ ಪೆನ್ನಿಗೆ ಮಾರಿದಳು. ಆ ಹಣದಿಂದ ಸ್ಪೆನ್ಸರ್ ಬ್ರೆಡ್ ತಂದ. ತಾಯಿ ಮಗ ಅದನ್ನು ಹಂಚಿಕೊಂಡು ತಿಂದರು. ಹೊಟ್ಟೆ ತುಂಬ ನೀರು ಕುಡಿದರು.

ಮತ್ತೆ ಮುಂದೊಂದು ದಿನ ಆರ್ಥಿಕ ಸಮಸ್ಯೆ ಕೆಟ್ಟದಾಗಿ ಮರುಕಳಿಸಿ ತನ್ನ ಭೀಕರ ಪ್ರತಾಪ ತೋರಿಸಲಾರಂಭಿಸಿತು. ಅಂದು ಶನಿವಾರದ ಬೆಳಿಗ್ಗೆ ತಿನ್ನಲು ಮನೆಯಲ್ಲಿ ಏನೂ ಇರಲಿಲ್ಲ. ಚಾಪ್ಲಿನ್‌ಗೆ ಒಂದು ಯೋಚನೆ ಹೊಳೆಯಿತು. ಮನೆಯಲ್ಲಿರುವ ಹಳೆ ಬಟ್ಟೆಬರೆಯನ್ನೆಲ್ಲ ಒಯ್ದು ಏಕೆ ಮಾರಿ ಹಣ ಸಂಪಾದಿಸಬಾರದೆಂದುಕೊಂಡ. ತಾಯಿ ಬಳಿ ಪ್ರಸ್ತಾಪಿಸಿದ.

ತತ್‌ತಕ್ಷಣ ತಲೆದೋರಿರುವ ಸಮಸ್ಯೆ ನಿವಾರಣಾರ್ಥವಾಗಿ ಅವನ ಸಲಹೆಯನ್ನು ಒಲ್ಲದ ಮನಸ್ಸಿನಿಂದ ಒಪ್ಪಿಕೊಂಡಳು. ಚಾಪ್ಲಿನ್ ಉತ್ಸಾಹದಿಂದ ಹಳೆ ಬಟ್ಟೆಬರೆಯನ್ನೆಲ್ಲ ಗಂಟುಮೂಟೆ ಕಟ್ಟಿಕೊಂಡು ನ್ಯೂವಿಂಗ್ ಟನ್ ಕಟೆ ಒಡದ. ಅಲ್ಲಿ ಗಂಟು ಬಿಚ್ಚಿ ಒಂದೊಂದು ಹಿಡಿದು ಪ್ರದರ್ಶಿಸುತ್ತ ಆಕರ್ಷಕ ಧ್ವನಿಯಿಂದ ಕೂಗುತ್ತ, ಗಿರಾಕಿಗಳನ್ನು ಆಕರ್ಷಿಸುವಲ್ಲಿ ಯಶಸ್ವಿಯಾದ. ಅವನ ಹಾವಭಾವ, ಆಕರ್ಷಕ ಭಂಗಿ, ಧ್ವನಿ ಇತ್ಯಾದಿ ಕಾರಣಗಳಿಂದ ಜನ ಗುಂಪುಗೂಡುತ್ತಿದ್ದರು. ಕೆಲವರು ಚೌಕಾಸಿ ಮಾಡುತ್ತಿದ್ದರು. ಕೆಲವು ತಮ್ಮ ಜೇಬಲ್ಲಿ ಪಣವಿರದಿದ್ದರೂ ಬೆಲೆ ಕೇಳುತ್ತಿದ್ದರು. ಕಳವೆ ದರ್ಜೆಯ ಹಳೆ ಉಡುಪುಗಳು ನಿರೀಕ್ಷಿಸಿದಂತೆ ಮಾರಾಟವಾಗಲಿಲ್ಲ. ಎದುರುಗಡೆ ಇದ್ದ ಆಭರಣದಂಗಡಿಯಿಂದ ರಷ್ಯನ್ ಒಬ್ಬ ಬಂದು ಚಾಪ್ಲಿನ್‌ನ ವ್ಯವಹಾರ ಕುಶಲತೆಯನ್ನು ಪ್ರಶಂಸಿಸಿದ. ಕಾಲುಗಳಿಗೆ ರಕ್ಷಣಾರ್ಥವಾಗಿ ಸುತ್ತುವ ಬಟ್ಟೆ ಸಹಿತ ಅನೇಕ ಉಡುಪುಗಳನ್ನು ಮಾರಾಟ ಮಾಡುವಲ್ಲಿ ಯಶಸ್ವಿಯಾದ. ನೆಮ್ಮದಿಯಿಂದ ಹಣದೊಂದಿಗೆ ಮನೆಗೆ ಮರಳಿದ. ತನಗಾಗಿ ಕಾಯುತ್ತಿದ್ದ ತಾಯಿಗೆ ಹಣ ಒಪ್ಪಿಸಿ ಮಾರಾಟದ ಅನುಭವವನ್ನು ಹಂಚಿಕೊಂಡ.

ಬಾಡಿಗೆ ಕಾರಣದಿಂದ, ಹಣದ ಅಡಚಣೆಯಿಂದ ಹನ್ನಾ ಮಗನೊಂದಿಗ ಮತ್ತೆ ಪೌನೆಲ್‌ನ ಮೂರನೆ ನಂಬರಿನ ಮನೆಗೆ ವಾಪಸಾಗಬೇಕಾಗಿ ಬಂತು. ಆ ವಯಸ್ಸಿಗೆ ಸಾಕಷ್ಟು ವ್ಯವಹಾರಿಕ ನೈಪುಣ್ಯತೆ ಸಂಪಾದಿಸಿದ ಚಾಪ್ಲಿನ್ ಕೆನ್ನಿಂಗ್‌ಟನ್ ರಸ್ತೆಯಲ್ಲಿ ಮುದುಕನ ಪರಿಚಯ ಮಾಡಿಕೊಂಡ. ತಾವು ತಯಾರಿಸುತ್ತಿದ್ದ ಗೊಂಬೆಗಳನ್ನು, ಆಟದ ಆಟಿಕೆಗಳನ್ನು ಹೊತ್ತು ಊರಿಂದ ಊರಿಗೆ ಮಾರುವ ಕೆಲಸಕ್ಕೆ ಚಾಪ್ಲಿನ್‌ನನ್ನು ನಿಯೋಜಿಸಿದರು. ಆ ಕೆಲಸದಿಂದ ಚಾಪ್ಲಿನ್ ಒಂದಿಷ್ಟು ಸಂಪಾದಿಸುವುದು ಸಾಧ್ಯವಾಯಿತು. ಜೊತೆಗೆ ಆ ಸಾಮಾನುಗಳನ್ನು ತಯಾರಿಸುವ ಬಗೆಗೂ ಕಲಿತುಕೊಂಡ. ಮುದುಕ ಮತ್ತು ಆತನ ಮಗ ಅಲ್ಲಿಂದ ಹೊರಟು ಹೋದ ಮೇಲೂ ಚಾಪ್ಲಿನ್ ಕಡಿಮೆ ಬಂಡವಾಳ ಹೂಡಿ ವಾರೊಪ್ಪತ್ತಿನಲ್ಲಿ ಮೂರು ಡಜನ್ ನಾವೆಗಳನ್ನು ತಯಾರಿಸಿ ಉತ್ತಮ ಬೆಲೆಗೆ ಮಾರಿದ.

ಈ ನಡುವೆ ತಾಯಿಯೊಡನೆ ತಾನು ತನ್ನ ತಾತನನ್ನು ನೋಡಬೇಕಾಗಿ ಬಂತು. ಆತ ತುಂಬ ವೃದ್ಧನಾಗಿದ್ದ. ಕೆಲಸ ಮಾಡುವಷ್ಟು ಶಕ್ತಿ ದೇಹದಲ್ಲಿ ಉಳಿದಿರಲಿಲ್ಲ. ಕೈಗಳು ಸಾಕಷ್ಟು ಬಾತುಕೊಂಡಿದ್ದವು. ಚಾಪ್ಲಿನ್‌ಗೆ ಆತ ವ್ಯಾಕರಣದ ಬಗ್ಗೆ ಹೇಳಿ ಕೊಡುತ್ತಿದ್ದುದು ನೆನಪಾಗಿ ದುಃಖವಾಯಿತು. ಸಂಧಿವಾತರೋಗ ಉಲ್ಬಣಗೊಂಡು ಆತ ಆಸ್ಪತ್ರೆ ಸೇರಿದ್ದ. ಮಗಳು ಮತ್ತು ಮೊಮ್ಮಗನ ಯೋಗಕ್ಷೇಮ ವಿಚಾರಿಸಿದ. ಅಸಹಾಯಕತೆಯಿಂದ ಕಂಪಿಸಿದ.

ತಾಯಿ ದಿನಕ್ಕೊಮ್ಮೆಯಾದರೂ ಆಸ್ಪತ್ರೆಗೆ ಹೋಗಿ ತಂದೆಯ ಆರೋಗ್ಯ ಪರಾಂಬರಿಸುತ್ತಿದ್ದಳು. ಆ ಮುದುಕ ತಾನು ತಿನ್ನದೆ ತೆಗೆದಿಟ್ಟ ಮೊಟ್ಟೆಗಳನ್ನು ಮಗಳ ಸಂಗಡ ಗುಟ್ಟಾಗಿ ಕಳಿಸುತ್ತಿದ್ದ. ಇದರಿಂದ ಆಹಾರ ಸಮಸ್ಯೆ ಎಷ್ಟೋ ಕಡಿಮೆಯಾಯಿತು. ತಾನು ಹೋಗದಿದ್ದಾಗ ಹನ್ನಾ ಆಸ್ಪತ್ರೆಗೆ ತನ್ನ ಮಗ ಚಾಪ್ಲಿನ್‌ನ್ನು ಕಳಿಸುತ್ತಿದ್ದಳು. ತನ್ನ ಮೊಮ್ಮಗ ಚಾಪ್ಲಿನ್ ಎಂದರೆ ಪುಂದಕ ಹಿಲ್ಸ್‌ಗೆ ಎಲ್ಲಿಲ್ಲದ ಮಮತೆ. ಅಲ್ಲಿ ಬಿಳಿ ಹಂಸಗಳಂತೆ ಅಡ್ಡಾಡುತ್ತಿದ್ದ ಶುಶ್ರೂಷಕಿಯರ ಪರಿಚಯವನ್ನು ಚಾಪ್ಲಿನ್ ಮಾಡಿಕೊಂಡ. ಆದ್ದರಿಂದ ಅವರೂ ಸಹ ಚಾಪ್ಲಿನ್ ಚೀಲದಲ್ಲಿ ಏನು ಹುದುಗಿಸಿಟ್ಟುಕೊಂಡು ಒಯ್ಯುತ್ತಿದ್ದಾನೆಂದು ತಪಾಸಣೆ ಮಾಡುವ ಗೋಜಿಗೆ ಹೋಗದೆ ಸಹಕರಿಸುತ್ತಿದ್ದರು.



ಚಾರ್ಲಿ ಚಾಪ್ಲಿನ್‌ನ ತಂದೆ ತಾಯಿ

ಭಾರವಾದ ಹೆಜ್ಜೆ ಇಡುತ್ತ ವಾಪಸಾದ ಚಾಪ್ಲಿನ್ ನೇರವಾಗಿ ಮನೆಕಡೆ ಹೋಗಲಿಲ್ಲ. ಹೊತ್ತಿಳಿಯುವವರೆಗೆ ನ್ಯೂವಿಂಗ್‌ಟನ್ ಮಾರ್ಕೆಟ್‌ನಲ್ಲಿ ಅಡ್ಡಾಡಿ, ಮನೆಗೆ ಮರಳಿದ. ಸ್ನಾನದ ತೊಟ್ಟಿಗೆ ಅರ್ಧ ನೀರು ತುಂಬಿಸಿ ಕೊಳೆಯಾಗಿದ್ದ ಬಟ್ಟೆ ಬರೆ ತೊಳೆದ, ಸ್ನಾನ ಮಾಡಿದ. ಹೊಟ್ಟೆ ಕೆಟ್ಟದಾಗಿ ಹಸಿದಿತ್ತು. ಆಹಾರಕ್ಕಾಗಿ ಮನೆ ತುಂಬ ಹುಡುಕಾಡಿದ. ತಾಯಿಯ ಪರ್ಸ್‌ನಲ್ಲಿ ಒಂದೆರಡು ಚಿಲ್ಲರೆ ಕಾಸು ವಿನಃ ಮತ್ತೇನು ಇರಲಿಲ್ಲ. ಹಲಗೆ ಮೇಲೆ ತಾಯಿ ಮಗನಿಗಾಗಿ ಇರಿಸಿದ್ದ ಮಿಠಾಯಿ ಚೂರೊಂದಿತ್ತು. ತಾಯಿಯ ವಾತ್ಸಲ್ಯ ನೆನಪಾಗಿ, ಆಕೆಗೊದಗಿದ ದುಃಸ್ಥಿತಿ ನೆನಪಾಗಿ ಅವನು ಕುಸಿದುಕೂತು ಭೋರೆಂದು ಸಾಕಾಗುವವರೆಗೆ ಅತ್ತ.

ಹಸಿವೆ ಮತ್ತು ದುಃಖದಿಂದ ದಣಿದಿದ್ದ ಅವನು ಆ ರಾತ್ರಿ ಗಾಢವಾಗಿ ನಿದ್ದೆ ಹೋದ. ಬಿಕೋ ಎನ್ನುತ್ತಿದ್ದ ಆ ಕೋಣೆಯಲ್ಲಿ ಅವನಿಗೆ ಎಚ್ಚರವಾದಾಗ ಸೂರ್ಯ ಸಾಕಷ್ಟು ಮೇಲೇರಿದ್ದ. ಸೂರ್ಯನ ಪ್ರತಿಯೊಂದು ಕಿರಣ ಹನ್ನಾಳ ಗೈರುಹಾಜರಿಯನ್ನು ಚುಚ್ಚಿ ಚುಚ್ಚಿ ಹೇಳುತ್ತಿತ್ತು. ಮನೆಯ ಮಾಲಕಿ ಮೇಲೆ ಬಂದು ಚಾಪ್ಲಿನ್‌ಳ ಮೈದಡವಿ ಬೇಕುಬೇಡಗಳನ್ನು ವಿಚಾರಿಸಿದಳು. ಸಾಲಸೋಲ ಮಾಡಿದರೆ ಸಿಡ್ನಿ ಬಂದು ಖಂಡಿತ ತೀರಿಸದೆ ಇರಲಾರ. ಆದರೂ ನಾಚಿಕೆಯಿಂದ ಮತ್ತು ಸ್ವಾಭಿಮಾನದಿಂದ ಚಾಪ್ಲಿನ್ ಹಸಿವೆಯನ್ನು ಆಕೆ ಎದುರು ಮರೆಮಾಚಿದ.

ಚಾಪ್ಲಿನ್ ಮಾತುಕೊಟ್ಟಂತೆ ತಾಯಿಯನ್ನು ನೋಡಲು ಆಸ್ಪತ್ರೆಗೆ ಹೋಗಲಿಲ್ಲ. ಮನೆಮಾಲಕಿಯೇ ಡಾಕ್ಟರರನ್ನು ವಿಚಾರಿಸಿದಳು. ಹೆಚ್ಚಿನ ಚಿಕಿತ್ಸೆಗಾಗಿ ಹನ್ನಾಳನ್ನು ಕೇನ್ ಹಿಲ್ ಮಾನಸಿಕ ಆಸ್ಪತ್ರೆಗೆ ವರ್ಗಾಯಿಸಿರುವುದಾಗಿ ಡಾಕ್ಟರ್ ಹೇಳಿದರು. ಈ ವಿಷಯವನ್ನು ಆಕೆ ಹೇಳಿದಾಗ ಚಾಪ್ಲಿನ್‌ಗೆ ದಿಕ್ಕೇ ತೋಚದಂತಾಯಿತು. ಇಪ್ಪತ್ತು ಮೈಲು ದೂರದಲ್ಲಿರುವ ಆಸ್ಪತ್ರೆಗೆ ತಾನು ಹೋಗುವುದಾದರೂ ಹೇಗೆ? ಸಿಡ್ನಿ ಬಂದೊಡನೆ ಅವನ ಸಂಗಡ ಆಸ್ಪತ್ರೆಗೆ ಹೋಗಿ ತನ್ನ ತಾಯಿಯನ್ನು ನೋಡಿಕೊಂಡು ಬರುವುದೆಂದು ನಿರ್ಧರಿಸಿದ. ಆ ಕೆಲವು ದಿನಗಳ ಕಾಲ ಅವನು ಯಾರೊಂದಿಗೂ ಬೆರೆಯಲೂ ಇಲ್ಲ. ಮಾತಾಡಲೂ ಇಲ್ಲ. ಒಂಟಿಯಾಗಿ ದುಃಖ ನುಂಗಿ ಉಳಿದುಬಿಟ್ಟ.

ಒಂದೆರಡು ದಿನಗಳಿಂದ ಉಪವಾಸ ಕೊಳೆಯುತ್ತಿದ್ದ ಚಾಪ್ಲಿನ್‌ನ್ನು ಕರೆದೊಯ್ದು ಮನೆಯ ಮಾಲಕಿ ಅಕ್ಕರೆಯಿಂದ ಊಟ ಮಾಡಿಸಿದಳು.

ಚಾಪ್ಲಿನ್ ಸಿಡ್ನಿಗಾಗಿ ಎದುರು ನೋಡಿದ್ದಾಯಿತು. ಅವನಿಂದ ಯಾವ ಸುದ್ದಿ ಇಲ್ಲ. ತನಗೆ ತನ್ನವರು ನನ್ನವರೆಂದರೆ ಮನೆಯ ಮಾಲಕಿ ಮಾತ್ರ. ಅವನು ಅಂಗಲಾಚಿ ಮೆಕಾರ್ತಿಯವರ ಬಳಿಗೂ ಹೋಗಲಿಲ್ಲ. ಸಿಡ್ನಿ ಬಾರದಿದ್ದ ಪಕ್ಷದಲ್ಲಿ ಮನೆಯ ಮಾಲಕಿ ಅಧಿಕಾರಿಗಳಿಗೆ ತನ್ನನ್ನು ಒಪ್ಪಿಸದೆ ಇರಲಾರಳು. ಅವರು ಮತ್ತೆ ತನ್ನನ್ನು ಹ್ಯಾನ್‌ವೆಲ್ ಸ್ಕೂಲೆಂಬ ರೌರವ ನರಕಕ್ಕೆ ತಳ್ಳದೆ ಇರುವುದಿಲ್ಲ. ಹೀಗೆ ಯೋಚಿಸಿದ ಚಾಪ್ಲಿನ್ ದಿನದ ಬಹುಪಾಲು ಸಮಯವನ್ನು ಕನ್ನಿಂಗ್ ಟನ್ ರಸ್ತೆಯ ಹಿಂಬದಿಯಲ್ಲಿ ಮರದ ಕೆಲಸ ಮಾಡುವವರ ಬಳಿ ಕಳೆಯತೊಡಗಿದ. ಅವರು ಮರದ ದಿಮ್ಮಿಗಳನ್ನು ಕೊಯ್ದು ಬೆತ್ತಗಳನ್ನು ತಯಾರಿಸುತ್ತಿದ್ದುದ್ದು ಆಸಕ್ತಿದಾಯಕವಾಗಿತ್ತು. ಕ್ರಮೇಣ ಅವರಿಗೆ ಕೆಲಸದಲ್ಲಿ ಸಹಾಯ ಮಾಡತೊಡಗಿದ. ಮುವ್ವತ್ತಕ್ಕೆ ಮುದುಕರಂತೆ ಕಾಣುತ್ತಿದ್ದ ಅವರು ಶುಕ್ರವಾರ ಮತ್ತು ಶನಿವಾರ ಉಳಿದ ಕಟ್ಟಿಗೆಯನ್ನು ಉರುವಲಿಗೆ ಮಾರುತ್ತಿದ್ದರು. ಸಿಹಿಮೂತ್ರ ರೋಗದಿಂದ ಬಳಲುತ್ತಿದ್ದ ಅವರ ಯಜಮಾನನ ಬಾಯಲ್ಲಿ ಮೇಲ್ದವಡೆ ಹಲ್ಲುಗಳಿಲ್ಲದೇ ಬಿಕೋ ಎನ್ನುತ್ತಿತ್ತು. ಆದರೆ ಆತನ ಹೃದಯ ಮಾತ್ರ ಬಿಕೋ ಎನ್ನುತ್ತಿರಲಿಲ್ಲ. ಕೇಳದಿದ್ದರೂ ಚಾಪ್ಲಿನ್ ಕೈಯಲ್ಲಿ ಒಂದಿಷ್ಟು ಕಾಸು ಇಡುತ್ತಿದ್ದ. ಚಾಪ್ಲಿನ್ ಗಿಣ್ಣು ಬ್ರೆಡ್ ಕೊಂಡು ತಿನ್ನುತ್ತಿದ್ದ. ಒಂದು ದಿನ 'ಬಾಸ್' ತನ್ನ ವರ್ಕ್‌ಶಾಪ್‌ನಲ್ಲಿ ದುಡಿಯುವವರನ್ನೆಲ್ಲಾ ಫ್ರೆಡ್ ಕಾರ್ನೋ ಕಂಪನಿಯ ಹಾಸ್ಯ ನಾಟಕವಿದ್ದ ಮ್ಯೂಜಿಕ್ ಹಾಲ್‌ಗೆ ಕರೆದುಕೊಂಡ ಹೋದ. ಅಂದು ಚಾಪ್ಲಿನ್‌ನ ಉತ್ಸಾಹಕ್ಕೆ ಗಡಿಗಳೇ ಇರಲಿಲ್ಲ.

(ಮುಂದುವರಿಯುವುದು)



ಒಂದು ಸಾಧಾರಣ ಕೌಟುಂಬಿಕ ಚಿತ್ರ - ಯಜಮಾನ

ಈ ಚಿತ್ರದಲ್ಲಿ ಬಡತನದ ಬೇಗೆಯಲ್ಲಿ ಮೂರು ಜನ ಚಿಕ್ಕ ವಯಸ್ಸಿನ ತಮ್ಮಂದಿರುಗಳ ಜವಾಬ್ದಾರಿ ಹೊತ್ತ ಶಂಕರ್(ಹಿರಿಯಣ್ಣನ ಪಾತ್ರದಲ್ಲಿ ವಿಷ್ಣುವರ್ಧನ್) ತಾನು ಪ್ರೀತಿಸಿಸುತ್ತಿದ್ದ ಹುಡುಗಿ(ಅರ್ಚನ)ಯನ್ನು ಮದುವೆಯಾದರೆ ತಮ್ಮಂದಿರಿಂದ ದೂರಾಗಬೇಕಾಗುತ್ತದೆಂದು ನಿಶ್ಚಿತಾರ್ಥದ ಬಳಿಕ ಹುಡುಗಿಯನ್ನೇ ತ್ಯಜಿಸಿ ತಮ್ಮಂದಿರುಗಳ ಭವಿಷ್ಯ ರೂಪಿಸಲು ತೊಡಗುತ್ತಾನೆ.

ಶಂಕರನ ಮೂರು ಜನ ತಮ್ಮಂದಿರಲ್ಲಿ ಒಬ್ಬನಾದ ಗಣೇಶ(ದ್ವಿಪಾತ್ರದಲ್ಲಿ ವಿಷ್ಣುವರ್ಧನ್) ನಿಗೆ ತನ್ನ ಸ್ನೇಹಿತನ ಮಗಳನ್ನು ಕೇಳಿ ಬಡತನದಲ್ಲಿದ್ದೀರೆಂದು ಸ್ನೇಹಿತನ ಮುಂದೆ ಶಂಕರ್ ಅವಮಾನಿತನಾಗುತ್ತಾನೆ. ಅಣ್ಣನಿಗಾದ ಅವಮಾನ ಸಹಿಸಲಾಗದ ಗಣೇಶ 'ನಿನಗೆ ಅವಮಾನ ಮಾಡಿದ ಈ ಮನೆಯಿಂದ ನಾನು ಮದುವೆಯಾಗಲಾರೆ' ಎಂದು ಶಪಥಗೈಯುತ್ತಾನೆ. ತಾನೂ ಬಾಲ್ಯದಿಂದಲೂ ಪ್ರೀತಿಸಿದ ಈ ಹುಡುಗಿ(ಪ್ರೇಮ)ಯ ಮನೆಗೆ ಕೆಲಸಕ್ಕೆ ಸೇರಿ ಅವರ ಮನವೊಲಿಸಿ ಮದುವೆಯಾಗುತ್ತಾನೆ. ಇನ್ನೊಬ್ಬ ತಮ್ಮನಾದ ಸುಬ್ರಮಣ್ಯ(ಶಶಿಕುಮಾರ್) ತಾನು ಓದುತ್ತಿರುವ ಕಾಲೇಜಿನಲ್ಲಿ ಪ್ರೀತಿಸಿದ ಹುಡುಗಿಯನ್ನು ಮದುವೆಯಾಗಲು ನಿಶ್ಚಯಿಸಿರುತ್ತಾನೆ. ಹುಡುಗಿಯ ತಂದೆ ಹಳೆಯ ದ್ವೇಷದಿಂದ ಈ ನಾಲ್ಕು ಜನ ಅಣ್ಣ ತಮ್ಮಂದಿರ ಕುಟುಂಬವನ್ನು ಹೊಡೆಯಲು ಸಂಚು ಮಾಡುತ್ತಾನೆ. ಶಂಕರ್ ತನ್ನ ಜೀವನವನ್ನೇ ತ್ಯಾಗ ಮಾಡಿ ಅವಿಭಕ್ತ ಕುಟುಂಬವನ್ನು ನಿರ್ವಹಿಸುತ್ತಾಬಂದಿದ್ದು ಕುಟುಂಬ ಇಬ್ಭಾಗವಾಗಲು ಬಿಡುವುದಿಲ್ಲ. ಇದರಿಂದ ತಮ್ಮನ ಮದುವೆ ನಿಲ್ಲುವ ಸ್ಥಿತಿಗೆ ಬರುತ್ತದೆ. ನನ್ನಿಂದ ತಮ್ಮನ ಮದುವೆ ನಿಲ್ಲಬಾರದೆಂದು ಹುಡುಗಿಯ ತಂದೆಯ ಹತ್ತಿರ ಶರತ್ತುಗಳಿಗೆ ಒಪ್ಪಿ ತಮ್ಮನ ಮದುವೆ ನಂತರ ಊರುಬಿಟ್ಟು ದೂರ ಹೋಗುತ್ತೇನೆಂದು ತಮ್ಮನ ಮದುವೆ ಮಾಡಿಸುತ್ತಾನೆ. ಕೊನೆಯಲ್ಲಿ ಫೈಟಿಂಗ್‌ನೊಂದಿ ಚಿತ್ರಕಥೆ ಪೂರ್ಣಗೊಳ್ಳುತ್ತದೆ.

ಬಂಡವಾಳಶಾಹಿ ಸಮಾಜ ಬೆಳೆದಂತೆ ಸಮಾಜದಲ್ಲಿ ಹಲವಾರು ಹೊಸ ಸಮಸ್ಯೆಗಳನ್ನು ಹುಟ್ಟುಹಾಕುತ್ತಾ ಸಾಗುತ್ತದೆ. ಇದರ ಪರಿಣಾಮ ಕುಟುಂಬ ವ್ಯವಸ್ಥೆ ಮೇಲೂ ಆಗುತ್ತದೆ. ಎಷ್ಟೋ ಅವಿಭಕ್ತ ಕುಟುಂಬಗಳು ವಿಭಜನೆಯಾಗಿ, ಸ್ವತಂತ್ರಗೊಂಡು ಸಹೋದರರು ತಮ್ಮದೇ ಆದ ಆದಾಯ, ಆಸ್ತಿಯಲ್ಲಿ ಭಾಗ ಪಡೆದು ತಮ್ಮ ಸ್ವಂತ ಜೀವನದ ಪುಟ್ಟ ಕುಟುಂಬ ನಡೆಸುತ್ತಿದ್ದಾರೆ. ಈ ನಡುವಿನ ಘರ್ಷಣೆಗಳು ಹೆಚ್ಚುತ್ತಿವೆ. ಹೀಗೆ ಈ ಸನ್ನಿವೇಶಗಳನ್ನು ಬಹಳಷ್ಟು ಜನರು ಎದುರಿಸುತ್ತಿರುವ, ನೋವು ಸಮಸ್ಯೆಗಳನ್ನು ಅನುಭವಿಸುತ್ತಿರುವ ಪರಿಸ್ಥಿತಿಯಲ್ಲಿ ಅವಿಭಕ್ತ ಕುಟುಂಬ ಉಳಿವಿಗಾಗಿ ಕುಟುಂಬದ ಯಜಮಾನ ಹೋರಾಡುವುದು, ತ್ಯಾಗ ಮಾಡುವುದು ರೋಚಕತೆ ಹುಟ್ಟಿಸಬಲ್ಲದು, ಈ ಯಜಮಾನ ಚಿತ್ರವೂ ಅಂತಹದ್ದನ್ನು ವಿಜೃಂಭಿಸಲು ಬಯಸಿದಂತೆ ಕಾಣುತ್ತಿದೆ.

ಇದೊಂದು ಮಾಮೂಲಿ ಚಿತ್ರವೆನ್ನಿಸಿ ಕೊಂಡರೂ ಬೆಚ್ಚಿಬೀಳಿಸುವ ತಿರುವುಗಳಿಲ್ಲ, ಅಬ್ಬರವಿಲ್ಲ, ಕ್ರೂರತೆ, ಅಶ್ಲೀಲತೆ ಇಲ್ಲ. ಚಿತ್ರದ ನಡಿಗೆಯಲ್ಲಿ ಮೈಕೈ ನೋವು ತರಿಸುವಂತ ಕುಲುಕಾಟಗಳಿಲ್ಲವಾದರೂ, ಪ್ರೇಕ್ಷಕರ ನಿರೀಕ್ಷೆಗಳಿಗೆ ವಿರುದ್ಧವಾಗಿ ಸಾಗುತ್ತದೆ. ಅವಿಭಕ್ತ ಕುಟುಂಬ ಈಗ ಛಿದ್ರವಾಗಿಬಿಡುತ್ತದೆ, ಮನೆ ಭಾಗವಾಗುತ್ತದೆ ಎಂಬ ನಿರೀಕ್ಷೆಗಳನ್ನು ಮೂಡಿಸುತ್ತಲೇ ಕುತೂಹಲ ಕಾಯ್ದಿರಿಸಿಕೊಳ್ಳುತ್ತದೆ. ಯಾವುದೂ ಅಮುಖ್ಯವಲ್ಲವೆನಿಸುತ್ತದೆ. ವಾಸ್ತವತೆಗೆ ಚಿತ್ರ



ಹತ್ತಿರವಿದ್ದರೂ ಚಿತ್ರವನ್ನು ಅಂತ್ಯಗೊಳಿಸುವ ಸಲುವಾಗಿ ಕಟ್ಟುಕಥೆಗೆ ಜಾರಿದಂತಾಗಿದೆ. ಅನಾವಶ್ಯಕವಾಗಿ ರಾಮಾಯಣದ ಆದರ್ಶ ವ್ಯಕ್ತಿಗಳ ನಾಮಂಕಿತಗಳನ್ನು ಹೋಲಿಸಿಕೊಂಡಿರುವುದು ವಿಪರ್ಯಾಸವಾಗಿದೆ.

ಆದರೂ ಇಡೀ ಚಿತ್ರದಲ್ಲಿನ ಸನ್ನಿವೇಶಗಳು ಉದ್ದಕ್ಕೂ ಪ್ರೇಕ್ಷಕರ ಮನವೊಲಿಸಲು ಪ್ರಯತ್ನಿಸುತ್ತದೆ. ಇದೇ ಚಿತ್ರದಲ್ಲಿನ ತಾಕತ್ತುಕೂಡ ಆಗಿದೆ. ಸಣ್ಣ, ಪುಟ್ಟ ತಪ್ಪುಗಳಿದ್ದರೂ ಚಿತ್ರವನ್ನು ನೋಡಿಸಿಕೊಂಡು ಹೋಗುತ್ತದೆ. ಹಾಸ್ಯದ ಸನ್ನಿವೇಶಗಳು ನಿಜವಾಗಲೂ ಪ್ರೇಕ್ಷಕನ ಮನಸನ್ನು ಖುಷಿ ಪಡಿಸುತ್ತವೆ. ವಿಷ್ಣುವರ್ಧನ್‌ರವರ ಇತ್ತೀಚಿನ ಮಾಮೂಲಿ ಚಿತ್ರಗಳಾದ ಸೂರ್ಯವಂಶ, ವೀರಪ್ಪನಾಯಕ್, ಸೂರಪ್ಪ ಸಾಲಿಗೆ ಸೇರುವ ಚಿತ್ರ ಇದು ಕೂಡ. ಸಾಮಾನ್ಯವಾಗಿ ಚಿತ್ರರಂಗದಲ್ಲಿ ಭ್ರಮೆಗಳ ಉತ್ತುಂಗದಲ್ಲಿ ವಿಹರಿಸುವುದು ಹೆಚ್ಚು. ವಾಸ್ತವ ಸಂಗತಿಗಳನ್ನು, ಜನ ಜೀವನದ ನೈಜ ಚಿತ್ರಣವನ್ನು ಬಿಂಬಿಸದೇ ಕಲ್ಪನಾಲೋಕಕ್ಕೆ ಕೊಂಡೊಯ್ದು ನಿಜ ಜೀವನದಲ್ಲಿ ಸಾಧ್ಯವಲ್ಲದ ಭ್ರಮೆಗಳನ್ನು ಸೃಷ್ಟಿಸಿ ಜನರಿಗೆ ಉಣಬಡಿಸುತ್ತಾರೆ. ಬದುಕಿನ ಮೌಲ್ಯಗಳು, ಸಾಂಸ್ಕೃತಿಕ, ಸಾಮಾಜಿಕ ಹಿನ್ನೆಲೆಗಳ ವಿಭಿನ್ನ ರೀತಿಯ ಒಂದೆರಡು ಚಿತ್ರಗಳು ಬರುವುದು ಕೂಡ ಕಡಿಮೆ ಆಗಿದೆ. ಇಂಥ ಸಂದರ್ಭದಲ್ಲಿ ಏನೇ ಓರೆಕೋರೆಗಳಿದ್ದರೂ ರಿಮೇಕ್ ಚಿತ್ರವಾಗಿದ್ದರೂ ಕುಟುಂಬ ಸಮೇತ ಕುಳಿತು ನೋಡುವ ಚಿತ್ರಗಳಾದರೂ ಆಗೊಮ್ಮೆ ಈಗೊಮ್ಮೆ ಬರುವುದರಿಂದ ನೆಮ್ಮದಿ ಉಸಿರು ಬಿಡಬಹುದಾಗಿದೆ. ಇಂಥ ಚಿತ್ರಗಳ ಸಾಲಿಗೆ 'ಯಜಮಾನ' ಕೂಡ ಸೇರಿದೆ ಎನ್ನುವುದರಲ್ಲಿ ಅನುಮಾನವಿಲ್ಲ.

ನಾಯಕ ನಟ ವಿಷ್ಣುವರ್ಧನ್ ಒಳ್ಳೆಯ ಅಭಿನಯ ನೀಡಿದ್ದಾರೆ. ದ್ವಿಪಾತ್ರದಲ್ಲಿ ನಟಿಸಿದ್ದರೂ ಪ್ರೇಕ್ಷಕರ ಮನಗೆಲ್ಲುವುದು ಗಿರಿಜಾ ಮೀಸೆಯ ಹಿರಿಯಣ್ಣನ ಪಾತ್ರದಲ್ಲೇ. ನಾಯಕಿ ಪ್ರೇಮ, ಶಶಿಕುಮಾರ್, ಅಭಿಜಿತ್ ಪವಿತ್ರ ಲೋಕೇಶ್ ಮುಂತಾದ ಎಲ್ಲರೂ ಪಾತ್ರಗಳ ಸತ್ವ ಅರಿತು ನಟಿಸಿದ್ದಾರೆ. ಈ ಚಿತ್ರಕ್ಕೆ ಸಂಗೀತ ರಾಜೇಶ್ ರಾಮನಾಥ್ ಅವರದು. ಇದರ ತಮಿಳು ಮೂಲ ಚಿತ್ರವಾದ 'ವಾನತ್ತೇ ಪೋಲ' ಟ್ಯೂನ್‌ಗಳನ್ನೇ ಭಟ್ಟಿ ಇಳಿಸಿದ್ದಾರೆ. ರೀಮೇಕ್ ಚಿತ್ರವಾದರೂ ಯಾವುದೇ ಅತಿರೇಕಗೊಳಿಸದೆ ಆರ್.ಶೇಷಾದ್ರಿ ಮತ್ತು ರಾಧಾಭಾರತಿ ಅಚ್ಚುಕಟ್ಟಾಗಿ ಕನ್ನಡಕ್ಕೆ ಇಳಿಸಿದ್ದಾರೆ.

ಒಂದೇ ವಾಕ್ಯದಲ್ಲಿ ಹೇಳುವುದಾದರೆ ಈ ಚಿತ್ರವನ್ನು ಚೊಕ್ಕದಾದ ಒಂದು ಕುಟುಂಬ ಕಥಾ ಚಿತ್ರ ಎಂದು ಹೇಳಬಹುದು.

ಬಿ.ರಾಜಶೇಖರಮೂರ್ತಿ



ಪ.ಬಂಗಾಳದಲ್ಲಿ ಅತಿವೃಷ್ಟಿಯಿಂದ ತೊಂದರೆಗೊಳಗಾದವರಿಗೆ ಪರಿಹಾರ ಒದಗಿಸಲು ತಾರತಮ್ಯವೆಸಗಿರುವ ಕೇಂದ್ರ ಸರ್ಕಾರದ ನೀತಿ ಖಂಡಿಸಿ ಹಾಗೂ ಶೀಘ್ರ ಕೇಂದ್ರ ನೆರವು ಒದಗಿಸಬೇಕೆಂದು ದೆಹಲಿಯಲ್ಲಿ ನಡೆದ ಧರಣಿಯಲ್ಲಿ ಸಿಪಿಐ(ಎಂ) ಮುಖಂಡರಾದ ಜ್ಯೋತಿಬಸು, ಸಿಪಿಐನ ಎ.ಬಿ.ಬರ್ಧನ್ ಹಾಗು ನಟಿ, ರಾಜ್ಯಸಭಾ ಸದಸ್ಯೆ ಶಬನಾ ಅಜ್ಮಿ ಮತ್ತಿತರರು ಪಾಲ್ಗೊಂಡಿದ್ದರು.

ಡಿಸೆಂಬರ್ 6 ರಂದು ಜನವಾದಿ ಮಹಿಳಾ ಸಂಘಟನೆಯ ಬೆಂಗಳೂರು ಜಿಲ್ಲಾ ಸಮಿತಿ ನೇತೃತ್ವದಲ್ಲಿ ದಿನೇ ದಿನೇ ಅಲ್ಪಸಂಖ್ಯಾತರು ಮತ್ತು ಮಹಿಳೆಯರ ಮೇಲೆ ಕೋಮುವಾದಿಗಳಿಂದ ಹೆಚ್ಚುತ್ತಿರುವ ಹಲ್ಲೆ ಹಾಗೂ ಬಾಬ್ರಿ ಮಸೀದಿ ಪತನದ ಕರಾಳ ದಿನಾಚರಣೆ ಅಂಗವಾಗಿ ವಿಮಾನ ಸರಪಳಿ ಕಾರ್ಯಕ್ರಮ ನಡೆಯಿತು.





ವೇತನ ಪರಿಷ್ಕರಣೆ ಸೇರಿದಂತೆ ತಮ್ಮ ಹಲವಾರು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಬೆಂಗಳೂರು ಪ್ರಧಾನ ಅಂಚೆ ಕಚೇರಿ ಎದುರು ಪ್ರತಿಭಟನೆ ನಡೆಸುತ್ತಿರುವ ನೌಕರರು. ಈ ಮುಷ್ಕರದಲ್ಲಿ ದೇಶದಾದ್ಯಂತ 6 ಲಕ್ಷ ನೌಕರರು ಪಾಲ್ಗೊಂಡಿದ್ದಾರೆ.

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG(2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್.ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ, ಬೆಂಗಳೂರು-1

Printed & Published by Communist Party of India(Marxist), Karnataka State Committee. Editor : G.N. NAGARAJ